

ಸಂಪುಟ 24 ಸಂಚಿಕೆ 40
ಅಕ್ಟೋಬರ್ 06. 2002 ಬೆಲೆ ರೂ. 3.00


ದುಡಿವ ಜನರ ಪ್ರಾಣಮಿತ್ರ




ಸರ್ಕಾರದ ನಿರ್ಲಕ್ಷ್ಯ
ಭೂಮಿ ಅತಿಕ್ರಮಣದಾರರು ಬೀದಿ ಪಾಲಾಗಬೇಕೆ?



ಹೊಸ ಆಕ್ರಮಣಕ್ಕೆ ಬಿಜೆಪಿ ಸನ್ನದ್ಧ



ಆಂಧ್ರ:
ಬಡವರ ಅಕ್ಕಿ ಕದ್ದ ನಾಯ್ಡು



ಗಾಂಧಿ ನಾಡಿನಲ್ಲಿ ಗೋಡ್ಸೆಗಳು

ವಿದ್ಯಾರ್ಥಿಗಳಿಂದ ವಿಧಾನಸೌಧ ಚಲೋ


ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಿರುವ ಕಾಂ. ರಾಗೇಶ್

ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ) ಕರ್ನಾಟಕ ರಾಜ್ಯಸಮಿತಿ ನೇತೃತ್ವದಲ್ಲಿ ರಾಜ್ಯದ ಎಲ್ಲಾ ಕಡೆಗಳಿಂದ ಆಗಮಿಸಿದ್ದ ಸಾವಿರಾರು ವಿದ್ಯಾರ್ಥಿಗಳು ಬೃಹತ್ ವಿಧಾನ ಸೌಧ ಚಲೋ ನಡೆಸಿ ಸರ್ಕಾರಕ್ಕೆ ಬೇಡಿಕೆಗಳ ಪಟ್ಟಿಸಲ್ಲಿಸಿದರು.

ಸೆಪ್ಟೆಂಬರ್ ತಿಂಗಳಿನಾದ್ಯಂತ ನಡೆದ ಹಲವು



ಹಂತಗಳ ಹೋರಾಟದ ಭಾಗವಾಗಿ ನಡೆದ ಈ ಕಾರ್ಯಕ್ರಮದಲ್ಲಿ ಪ್ರತಿಕೂಲ ಸನ್ನಿವೇಶವಿದ್ದರೂ ಸಾವಿರಾರು ಮಂದಿ ವಿದ್ಯಾರ್ಥಿಗಳು ಭಾಗವಹಿಸಿ, ನಗರದ ಚಿಕ್ಕಲಾಲ್‌ಬಾಗ್‌ನಿಂದ ಬಸವೇಶ್ವರ ವೃತ್ತದವರೆಗೆ ಮೆರವಣಿಗೆ ನಡೆಸಿದರು.

ರಾಜ್ಯದ 12 ಸರ್ಕಾರಿ ಪದವಿ ಕಾಲೇಜುಗಳನ್ನು ಮುಚ್ಚುವ ರಾಜ್ಯ ಸರ್ಕಾರದ ಆದೇಶ ಹಿಂದೆ ಪಡೆಯಬೇಕು, ಮಹಾರಾಣಿ ಪಿ.ಯು ಕಾಲೇಜು ಮುಚ್ಚುವ ತೀರ್ಮಾನವನ್ನು ಬದಲಾಯಿಸಬೇಕು, ಅಗಾದ ಪ್ರಮಾಣದಲ್ಲಿ ಏರಿಸಿರುವ ಶುಲ್ಕಗಳನ್ನು ವಾಪಸ್ಸು ಪಡೆಯಬೇಕು, ಬರಪರಿಹಾರದ ಕ್ರಮವಾಗಿ ಶುಲ್ಕ ಮನ್ನಾ ಮಾಡಬೇಕು, ಶಿಕ್ಷಕರ, ಉಪನ್ಯಾಸಕರ ಕೊರತೆ ನೀಗಿಸಲು ಕೂಡಲೇ ಕ್ರಮ ಕೈಗೊಳ್ಳಬೇಕು, ಹಾಸ್ಟೇಲ್ ವಿದ್ಯಾರ್ಥಿಗಳ ಗಂಭೀರ ಸಮಸ್ಯೆಗಳನ್ನು ಬಗೆಹರಿಸಬೇಕು, ಎಂದು ಒತ್ತಾಯಿಸಿ, ಕೇಂದ್ರ ಬಿ.ಜೆ.ಪಿ ನೇತೃತ್ವದ ಕೋಮುವಾದಿ ಸರ್ಕಾರ ಉನ್ನತ ಶಿಕ್ಷಣಕ್ಕೆ ಶೇ 40ರಷ್ಟು ಅನುದಾನ ಕಡಿತಗೊಳಿಸುತ್ತಿರುವುದನ್ನು ವಿರೋಧಿಸಿ ಈ ಪ್ರತಿಭಟನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಪ್ರತಿಭಟನಾಕಾರರ ನಿಯೋಗದೊಡನೆ ರಾಜ್ಯ ಸರ್ಕಾರದ ಪರವಾಗಿ ಬೇಡಿಕೆಗಳ ಪಟ್ಟಿ ಸ್ವೀಕರಿಸಿ ಮಾತನಾಡಿದ ಪ್ರಾಥಮಿಕ ಮತ್ತು ಪ್ರೌಡ ಶಿಕ್ಷಣ ಸಚಿವರಾದ ಪ್ರೊ. ಬಿ.ಕೆ. ಚಂದ್ರಶೇಖರ್‌ರವರು, ಮಹಾರಾಣಿ ಪಿ.ಯು ಕಾಲೇಜನ್ನು ಪುನರಾರಂಭಿಸಲು ಮತ್ತು ಜನವರಿಯ ಹೊತ್ತಿಗೆ 500 ಪಿ.ಯು ಉಪನ್ಯಾಸಕರನ್ನು ಭರ್ತಿ ಮಾಡುವುದಾಗಿ ಭರವಸೆ ನೀಡಿದರು. ಉಳಿದ ಬೇಡಿಕೆಗಳ ಬಗ್ಗೆ ಮುಖ್ಯಮಂತ್ರಿಗಳು ಮತ್ತು ಇತರೆ ಸಚಿವರುಗಳೊಡನೆ ಮಾತನಾಡಿ ಸಮಸ್ಯೆಗಳನ್ನು ಬಗೆಹರಿಸುವುದಾಗಿ ಒಪ್ಪಿಕೊಂಡರು.

ಈ ಸಂದರ್ಭದಲ್ಲಿ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಎಸ್.ಎಫ್.ಐನ ಅಖಿಲ ಭಾರತ ಸಹಕಾರ್ಯದರ್ಶಿ ಕಾಂ.ಕೆ.ಕೆ. ರಾಘೇಶ್ ಬಿ.ಜೆ.ಪಿ ನೇತೃತ್ವದ ಕೇಂದ್ರ ಸರ್ಕಾರ ಐಎಮ್‌ಎಫ್ ಮತ್ತು ವಿಶ್ವಬ್ಯಾಂಕ್‌ಗಳ ಗುಲಾಮನಂತೆ ಕೆಲಸ ಮಾಡುತ್ತಿದೆ, ಶಿಕ್ಷಣಕ್ಕೆ ಅನುಧಾನವನ್ನು ನಿರಂತರವಾಗಿ ಕಡಿತಗೊಳಿಸಿ ಶಿಕ್ಷಣ ರಂಗವನ್ನು ಸಮಸ್ಯೆಗಳ ರೂಪಕ್ಕೆ ತಳ್ಳುತ್ತಿದೆ, ವರ್ಷಕ್ಕೆ ಒಂದು ಕೋಟಿ ಉದ್ಯೋಗ ಸೃಷ್ಟಿಸುವ ಭರವಸೆ ನೀಡಿ ಸಾರ್ವಜನಿಕ ಉದ್ದಿಮೆಗಳನ್ನು ಮುಚ್ಚುವ, ಖಾಸಗೀಕರಿಸುವ ಮೂಲಕ ಉದ್ಯೋಗಗಳನ್ನು ನಾಶ ಮಾಡುತ್ತಿದೆ, ತಾನು ಸಂಪೂರ್ಣ ಸ್ವದೇಶಿ ಎಂದು ಅಧಿಕಾರಕ್ಕೆ ಬಂದು ಈಗ ಅದು ಬಹುರಾಷ್ಟ್ರೀಯ ಕಂಪನಿಗಳಿಗೆ, ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ದೇಶದ ಹಿತವನ್ನು ಬಲಿಕೊಡುತ್ತಿರುವ - ವಿದೇಶಿ ಸರ್ಕಾರವಾಗಿದೆ ಎಂದು ಆರೋಪಿಸುತ್ತ, ಶಿಕ್ಷಣ, ಪಠ್ಯಕ್ರಮದಲ್ಲಿ ಕೋಮುವಾದಿ, ಫ್ಯಾಸಿಸ್ಟಿಕ್ ವಿಚಾರಧಾರೆಯನ್ನು ತುಂಬುತ್ತಿದೆ, ಇಂತಹದ್ದರ ಪರಿಣಾಮವಾಗಿಯೇ ಗುಜರಾತಿನಲ್ಲಿ ಜನಾಂಗೀಯ ಹತ್ಯಾಕಾಂಡ ನಡೆಯಿತು ಎಂದು ಹೇಳಿದರು.

ಎಸ್.ಎಫ್.ಐ ನ ಮಾಜಿ ಮುಖಂಡರಾದ ಕಾಂ.ಕೆ.ಎನ್.ಉಮೇಶ್, ಕಾಂ.ರಾಮಕೃಷ್ಣ.ಆರ್, ಕಾಂ.ಗುರುಶಾಂತ್, ಕಾಂ.ಜಿ.ಎನ್.ನಾಗರಾಜ್ ಮಾತನಾಡಿದರು. ○

ಬರ ಪರಿಹಾರ ದಿನ

ರಾಜ್ಯದ ಹಲವೆಡೆ ಪ್ರತಿಭಟನೆ ಕೆಲವೆಡೆ ಬಂಧನ

ದೇಶವನ್ನು ಬೀಕರ ಬರ ಆವರಿಸಿದ್ದು ರಾಜ್ಯದ ಜನತೆಯೂ ಬರಗಾಲದ ಬವಣೆಗೆ ಸಿಲುಕಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬರ ಪರಿಹಾರದ ತುರ್ತು ಪರಿಹಾರ ಒದಗಿಸುವಂತೆ ಒತ್ತಾಯಿಸಲು ಸೆಪ್ಟೆಂಬರ್ 20 ರಂದು ದೇಶಾದ್ಯಂತ ಬರ ಪರಿಹಾರ ದಿನವನ್ನಾಗಿ ಆಚರಿಸಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕಛೇರಿಗಳ ಎದುರು ಪ್ರತಿಭಟನೆ ನಡೆಸಲು ಸಿಪಿಐ(ಎಂ) ಕೇಂದ್ರ ಸಮಿತಿ ನೀಡಿದ ಕರೆಯ ಅನ್ವಯ ರಾಜ್ಯದ ನಾನಾ ಕಡೆ ಸರ್ಕಾರಿ ಕಛೇರಿ, ಗೋದಾಮುಗಳ ಎದುರು ಪ್ರತಿಭಟಿಸಿದ ಬಗ್ಗೆ ವರದಿಗಳು ಬರುತ್ತಿವೆ. ಈ ಬಗ್ಗೆ ಮುಂದುವರಿದ ವರದಿ ಇಲ್ಲಿದೆ.

ಶಿರಗುಪ್ಪ 106 ಜನರ ಬಂದನ: ಶಿರಗುಪ್ಪದಲ್ಲಿ 150 ಕ್ಕೂ ಅಧಿಕ ಸಿಪಿಎಂನ ಕಾರ್ಯಕರ್ತರು ತಾಲ್ಲೂಕು ಕಛೇರಿಗೆ ಮುತ್ತಿಗೆ ಹಾಕಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿರುದ್ಧ ಘೋಷಣೆ ಕೂಗಿ ಪ್ರತಿಭಟಿಸಿದರು. ತುರ್ತು ಹಾಗೂ ವ್ಯಾಪಕ ಪರಿಹಾರ ಕ್ರಮಗಳನ್ನು ಕೈಗೊಳ್ಳುವಂತೆ ಒತ್ತಾಯಿಸಿದರು. 106 ಕಾರ್ಯಕರ್ತರನ್ನು ಬಂಧಿಸಿದ ಪೊಲೀಸರು ನಂತರ ಬಿಡುಗಡೆಗೊಳಿಸಿದರು.

ಬಳ್ಳಾರಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ। ಈ ಆರ್. ಯಲ್ಲಪ್ಪ, ತಾಲ್ಲೂಕು ಸಮಿತಿ ಕಾರ್ಯದರ್ಶಿ ಕಾಂ. ಬಿ. ಅಡಿವಪ್ಪ ಮುಂತಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ತೆಕ್ಕಲು ಕೋಟೆ ಪುರಸಭೆ ಕಛೇರಿಗೆ ಮುತ್ತಿಗೆ ಹಾಕಿದ 250ಕ್ಕೂ ಅಧಿಕ ಸಿಪಿಎಂ ಕಾರ್ಯಕರ್ತರು ಘೋಷಣೆ ಕೂಗುತ್ತಾ ಮುನ್ನುಗ್ಗಿದ್ದಾಗ 75 ಕಾರ್ಯಕರ್ತರನ್ನು ಪೊಲೀಸರು ಬಂದಿಸಿ ನಂತರ ಬಿಡುಗಡೆಗೊಳಿಸಿದರು. ಸೆಪ್ಟೆಂಬರ್ 23 ರಂದು ನಡೆದ ಈ ಕಾರ್ಯಕ್ರಮದ ನೇತೃತ್ವವನ್ನು ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾದ ಕಾಂ.ಎಚ್. ತಿಪ್ಪಯ್ಯ, ತಾಲ್ಲೂಕು ಕಾರ್ಯದರ್ಶಿ ಕಾಂ. ಬಿ. ಅಡಿವಪ್ಪ, ತಾಲ್ಲೂಕು ಸಮಿತಿ ಸದಸ್ಯರಾದ ಕಾಂ. ದರ್ಗಪ್ಪ ಮೊದಲಾದವರು ವಹಿಸಿದ್ದರು.

ಸಿರಿಗೆರೆಯಲ್ಲಿ 200ಕ್ಕೂ ಅಧಿಕ ಕಾರ್ಯಕರ್ತರು ಪ್ರತಿಭಟನಾ ಪ್ರದರ್ಶನ ನಡೆಸಿದರು. ಶಾಖಾ ಕಾರ್ಯದರ್ಶಿ ಕಾಂ. ಕುಮಾರ್ ಮತ್ತು ಇನ್ನಿತರ ಮುಖಂಡರು ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.

ಬಳ್ಳಾರಿ 63 ಬಂದನ : ಬಳ್ಳಾರಿಯಲ್ಲಿ ಅಂಚೆ ಮತ್ತು ತಂತಿ ಕಚೇರಿಗೆ ಮುತ್ತಿಗೆ ಹಾಕಿದ ನೂರಕ್ಕೂ ಅಧಿಕ ಕಾರ್ಯಕರ್ತರು ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. 63 ಕಾರ್ಯಕರ್ತರನ್ನು ಬಂದಿಸಿದ ಪೊಲೀಸರು ನಂತರ ಬಿಡುಗಡೆಗೊಳಿಸಿದರು.

ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ವಿ.ಎಸ್. ಶಿವಶಂಕರ್, ಜಿಲ್ಲಾ ಸಮಿತಿ ಸದಸ್ಯರಾದ ಕಾಂ. ಮಹಮ್ಮದ್ ಖಾನ್ ತಾಲ್ಲೂಕು ಸಮಿತಿ ಸದಸ್ಯರಾದ ಕಾಂ. ವಿಶ್ವನಾಥ ಸ್ವಾಮಿ, ಕೆ. ಗಾಂದಿಲಿಂಗಪ್ಪ ಮುಂತಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ತೋರಣಗಲ್ಲು ಪಟ್ಟಣದಲ್ಲಿ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದ 150 ಕಾರ್ಯಕರ್ತರು ನಾಡಕಛೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು. ಸಿಪಿಐ(ಎಂ) ಮತ್ತು ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ನಡೆದ ಈ ಪ್ರತಿಭಟನೆಯಲ್ಲಿ ಕಾಂ. ವಿ. ದೇವಣ್ಣ ಕಾಂ। ತಿಪ್ಪೇಸ್ವಾಮಿ ಕಾಂ. ಅಬ್ದುಲ್ ಹೈ., ಕಾಂ. ಶಿವಕುಮಾರ್ ಮೊದಲಾವರು ಮಾತನಾಡಿ ಶೀಘ್ರ ಬರಪರಿಹಾರ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಹೊಸಪೇಟೆಯಲ್ಲಿ ನಡೆದ ಪ್ರತಿಭಟನಾ ಕಾರ್ಯಕ್ರಮದಲ್ಲಿ ಪಕ್ಷದ 90 ಕಾರ್ಯಕರ್ತರು ತಾಲ್ಲೂಕು ಕಛೇರಿ ಮುತ್ತಿಗೆ ಹಾಕಿ ಪ್ರತಿಭಟಿಸಿದರು. ಜಿಲ್ಲಾ ಕಾರ್ಯದರ್ಶಿ ಕಾಂ. ರಾಮಚಂದ್ರ ಬಾಬು, ಜಿಲ್ಲಾ ಸಮಿತಿ ಸದಸ್ಯರುಗಳಾದ ಕಾಂ. ಡಿ. ವೆಂಕಟರಮಣ, ಜಿ.ವಿ. ರಮೇಶ್, ಕೆ. ರಮೇಶ್. ಹಾಗೂ ಕರುಣಾನಿಧಿ, ಎಲ್. ಮಂಜುನಾಥ್ ಮತ್ತಿತರರು ಈ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.

ಹಗರಿಬೊಮ್ಮನ ಹಳ್ಳಿ : ಸೆಪ್ಟೆಂಬರ್ 19 ರಂದು ಹಗರಿಬೊಮ್ಮನ ಹಳ್ಳಿಯಲ್ಲಿ ಅಂಚೆ ಮತ್ತು ತಂತಿ ಕಛೇರಿಗೆ ಮುತ್ತಿಗೆ ಹಾಕಿದ 55 ಕಾರ್ಯಕರ್ತರನ್ನು ಬಂದಿಸಿದ ಪೊಲೀಸರು ನಂತರ ಬಿಡುಗಡೆಗೊಳಿಸಿದರು. ಈ ಕಾರ್ಯಕ್ರಮದಲ್ಲಿ 70 ಕಾರ್ಯಕರ್ತರು ಭಾಗವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಬಿ. ಗಣೇಶ್ ತಾಲ್ಲೂಕು ಕಾರ್ಯದರ್ಶಿ ಮತ್ತು ಜಿಲ್ಲಾ ಸಮಿತಿ ಸದಸ್ಯರು ಆದ ಕಾಂ.ಎಸ್. ಜಗನ್ನಾಥ್ ಜಿಲ್ಲಾಮಿತಿ ಸದಸ್ಯರಾದ ಕಾಂ. ಆರ್.ಎಸ್. ಬಸವರಾಜು, ರಂಗಪ್ಪದಾಸರ್, ತಾಲ್ಲೂಕು ಸಮಿತಿ ಸದಸ್ಯರಾದ ಕಾಂ. ಎ ಅಡಿಗಪ್ಪ ಕಾಂ. ಬಿ. ಮೊಳಮ್ಮ ಸ್ಥಳೀಯ ಸಮಿತಿ ಸದಸ್ಯೆ ಕಾಂ. ಎನ್.ಟಿ. ಲಲಿತ ಮುಂತಾದವರು ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.

ಗಂಗಾವತಿ ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ಪಕ್ಷದ 150 ಕಾರ್ಯಕರ್ತರು ತಹಸಿಲ್ದಾರ್ ಕಛೇರಿ ಎದುರು ಪ್ರತಿಭಟನೆ ನಡೆಸಿ ನಂತರ ಭಾರತ ಆಹಾರ ನಿಗಮದ ಗೋಧಾಮಿಗೆ ಮುತ್ತಿಗೆ ಹಾಕಲು ಯತ್ನಿಸಿ ಪೊಲೀಸರ ಬಂದನಕ್ಕೊಳಗಾದರು. ನಂತರ ಪೊಲೀಸರು ಬಿಡುಗಡೆಗೊಳಿಸಿದರು.

ಜಿಲ್ಲಾ ಸಮಿತಿ ಸಧಸ್ಯರಾದ ಕಾಂ। ಜಾಳಪ್ಪ, ರಾಯಚೂರು ಜಿಲ್ಲಾ ಸಮಿತಿ ಸದಸ್ಯರಾದ ಕಾಂ. ಚಂದ್ರಪ್ಪ ಹೊಸ್ಕೆರಾ, ಎ, ಹುಲುಗಪ್ಪ, ಗಂಗಾದರಪ್ಪ ಮೊದಲಾದವರು ಪ್ರತಿಭಟನೆಯ ನೇತೃತ್ವವಹಿಸಿದ್ದರು.

ರಾಯಚೂರು ನಗರದಲ್ಲಿ ಜಿಲ್ಲಾಧಿಕಾರಿ ಕಛೇರಿ ಎದುರು ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗೆ ಮನವಿಪತ್ರ ಸಲ್ಲಿಸಲಾಯ್ತು. ಕಾಂ। ಕರಿಯಣ್ಣ ಅಚ್ಚೊಳ್ಳಿ, ಕಾಂ. ವೀರಣ್ಣ, ಕಾಂ। ಶರಣಬಸವ ಮುಂತಾದವರು ನೇತೃತ್ವವಹಿಸಿದ್ದರು

ದೇವದುರ್ಗದಲ್ಲಿ ತಾಲ್ಲೂಕು ಕಛೇರಿ ಎದುರು ಪ್ರತಿಭಟನೆ ನಡೆಸಲಾಯ್ತು. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ। ಮಲ್ಲಯ್ಯ ಜಾಲಹಳ್ಳಿ, ಕಾಂ। ಗಿರಿಯಪ್ಪ, ಕಾಂ। ತಿಪ್ಪಯ್ಯನಾಯಕ್ ಮೊದಲಾದವರು ಬಾಗವಹಿಸಿದ್ದರು.

ಸಿಂದನೂರಿನಲ್ಲಿ ತಹಸಿಲ್ದಾರ್ ಕಛೇರಿ ಎದುರು ಪ್ರತಿಭಟನೆನಡೆಸಿ, ತಹಸಿಲ್ದಾರರಿಗೆ ಮನವಿ ಪತ್ರ ಸಲ್ಲಿಸಲಾಯ್ತು ಸಂಗಾತಿಗಳಾದ ಶಿಕ್ಷರಾಧಿಕಾರಿ, ಶರಬಣ್ಣ ನಾಗಲಾಪುರ, ದೇವೇಂದ್ರಗೌಡ ಇನ್ನಿತರರು ನೇತೃತ್ವ ವಹಿಸಿದ್ದರು.

ಉಡುಪಿಯಲ್ಲಿ ಪಕ್ಷದ ಕಾರ್ಯಕರ್ತರು, ರೈತರು, ಕೃಷಿಕಾರ್ಮಿಕರು, ಕಾರ್ಮಿಕರು ಸೇರಿದಂತೆ ನೂರಾರು ಕಾರ್ಯಕರ್ತರು ಉಡುಪಿ ಸಿಟಿಬಸ್ ನಿಲ್ದಾಣದಿಂದ ತಾಲೂಕು ಕಛೇರಿ ತನಕ ಮೆರವಣಿಗೆ ನಡೆಸಿದರು. ತಹಸಿಲ್ದಾರರಿಗೆ ಮನವಿ ಪತ್ರ ಸಲ್ಲಿಸಲಾಯ್ತು. ಉಡುಪಿ ತಾಲೂಕು ಸಮಿತಿ ಕಾರ್ಯದರ್ಶಿ ಕಾಂ. ಪಿ. ವಿಶ್ವನಾಥರೈ ಪಕ್ಷದ ಬೇಡಿಕೆಗಲನ್ನು ವಿವರಿಸಿ ಮಾತನಾಡಿದರು. ಸಂಗಾತಿಗಳಾದ ಡೇವಿಡ್ ಕರ್ಕಡ, ರಮೇಶ್ ಮೆಂಡನ್ ಸಂಜೀವನಾಯ್ಕ, ಸಾದು ಅಯಾನ್, ದೊಗು ಸುವರ್ಣ, ವಿಠಲ ಪೂಜಾರಿ ಮತ್ತು ಪಿ. ವಿಶ್ವನಾಥ ಕಾರ್ಯಕ್ರಮದ ನೇತೃತ್ವವಹಿಸಿದ್ದರು.

ಬೀದರ್‌ನಲ್ಲಿ ನೂರಾರು ಕಾರ್ಯಕರ್ತರು ಪ್ರತಿಭಟನೆ ನಡೆಸಿ ತಹಸಿಲ್ದಾರ್‌ರವರಿಗೆ ಮನವಿ ಪತ್ರ ನೀಡಿದರು. ಬರಪರಿಹಾರ ಶಾಶ್ವತ ಕಾಮಗಾರಿಗಳನ್ನು ಪ್ರಾರಂಬಿಸಬೇಕು. ಸರ್ವಪಕ್ಷಗಳ ಸಮಿತಿ ರಚನೆ ಉದ್ದು, ಹೆಸರು ಬೆಳೆಹಾನಿಗೆ ಪರಿಹಾರ, ಏತ ನೀರಾವರಿ ಕಾರ್ಯಕ್ರಮದ ಸರ್ವೆ ಪ್ರಾರಂಭಿಸುವುದು ಸೇರಿದಂತೆ ಹಲವು ಬೇಡಿಕೆಗಳು ಈ ಪಟ್ಟಿಯಲ್ಲಿದ್ದವು. ○

ಕರ್ನಾಟಕ: ಹೊಸ ಅಕ್ರಮಣಕ್ಕೆ ಆರ್‌ಎಸ್‌ಎಸ್- ಬಿಜೆಪಿ ಸನ್ನದ್ಧ

ಈ ವಾರ ಕರ್ನಾಟಕ ಒಂದು ನೋಟ

ಎಸ್.ವೈ.ಗುರುಶಾಂತ್




ಬಚ್ಚಿಟ್ಟ ಅಜೆಂಡಾದೊಂದಿಗೆ ಹಳ್ಳಿಗಳತ್ತ(!) ನಡೆದಿರುವ ನಾಯಕರು

ಬೆಳಗಾಂನಲ್ಲಿ ಹೋದ ವಾರ ಹತ್ತಿಕೊಂಡ ಕೋಮು ದಳ್ಳುರಿ ಈಗಲೂ ಮುಂದುವರಿದಿದೆ. ನಿವೇಶನವೊಂದರ ಸಲುವಾಗಿ ಗುಲಬರ್ಗಾ ಜಿಲ್ಲೆಯ ಆಳಂದದಲ್ಲಿ, ಗಣೇಶನ ವಿಸರ್ಜನೆಯ ಸಂದರ್ಭದಲ್ಲಿ ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿಯೂ ಘರ್ಷಣೆ ಕಾವು ಇದೆ. ಹಾಗೆಯೇ ಕೆ.ಆರ್.ನಗರ, ಹರಪನಹಳ್ಳಿ ಶಾಂತವಾದಂತೆ ಕಂಡುಬಂದಿದೆಯಾದರೂ ದ್ವೇಷದ ಬುಸುಗುಡುವಿಕೆ ಇಳಿದಿಲ್ಲ. ಅಲ್ಲದೇ ಅದನ್ನು 'ಬಂಡವಾಳ' ಮಾಡಿಕೊಳ್ಳುವ ರಾಜಕೀಯ ಆಟಗಳೀಗ ಅಖಾಡದಲ್ಲಿವೆ. ಮುದ್ರಣಕ್ಕೆ ಹೋಗುತ್ತಿರುವಾಗಲೇ ದಾವಣಗೆರೆಯಲ್ಲಿ ಕೋಮುಗಲಭೆ ಸ್ಫೋಟಿಸಿದೆ. ಈ ನಡುವೆ ಗುಜರಾತ್‌ನ ಸ್ವಾಮಿ ನಾರಾಯಣ ದೇವಸ್ಥಾನದಲ್ಲಿ ಭಕ್ತಾದಿಗಳನ್ನು ಹತ್ಯಗೈದ ಭಯೋತ್ಪಾದಕರ ಕೃತ್ಯಖಂಡಿಸಿ ಸಂಘ ಪರಿವಾರ ನೀಡಿದ 'ಭಾರತ ಬಂದ್' ಕರ್ನಾಟಕದಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತಗೊಂಡಿದೆ. ಈ ಬಂದ್‌ಗೆ ಸರ್ಕಾರ ಆಡಳಿತ ಯಂತ್ರದ ಸಹಾನುಭೂತಿಯೂ ಸೇರಿಕೊಂಡಿತ್ತು.

ಯೋಜಿತ ಗಲಭೆ

ರಾಜ್ಯದಲ್ಲಿ ಸಂಭವಿಸಿರುವ ಗಲಭೆಗಳಿಗೆ ಕಾರಣವೆನ್ನಲಾದ ವಿಷಯಗಳು, ಭಿನ್ನವಾಗಿದ್ದರೂ ಹಾಗೂ ಪ್ರತ್ಯೇಕ ಘಟನೆಗಳೆಂಬಂತೆ ಮೇಲ್ನೋಟಕ್ಕೆ ಕಾಣಿಸಿದರೂ ಇವುಗಳು ಯೋಜಿತವಾದವು ಎಂಬ ಸಾಧ್ಯತೆಗಳಿವೆ. ಈ ಕೆಲವು ತಿಂಗಳ ಹಿಂದೆಯೂ ಕೊಡಗು ಜಿಲ್ಲೆಯ ಮಡಿಕೇರಿ ಸುತ್ತಮುತ್ತ (ಪಾಲೂರು ದೇವಸ್ಥಾನದ), ವಿಜಾಪುರದ ಕೊಲ್ಹಾರ, ಹಾನಗಲ್ ತಾಲೂಕಿನ ಅಕ್ಕಿಆಲೂರು, ಅಶೋಕ ಸಿಂಘಾಲ್ ಹುಟ್ಟುಹಬ್ಬದ ಆಚರಣೆ ಸಂದರ್ಭದಲ್ಲಿ ಹುಬ್ಬಳ್ಳಿ, ಬೀದರ್ ಮುಂತಾದೆಡೆ ವ್ಯಾಪಕ ಹಿಂಸೆ, ಗಲಭೆಗಳು ಸಂಭವಿಸಿದ್ದವು. ಇವುಗಳ ಹಿಂದೆಲ್ಲಾ ಆರ್‌ಎಸ್‌ಎಸ್, ಬಜರಂಗದಳ, ವಿ.ಹಿಂ. ಪರಿಷತ್ ಸಕ್ರಿಯವಾಗಿರುವುದು ಕಂಡುಬಂದಿತ್ತು.

ಕೇಂದ್ರ ಸರ್ಕಾರದ ಅಧಿಕಾರದ ಬಲವನ್ನು ಬಳಸಿ, ರಾಜ್ಯದಲ್ಲಿಯೂ ಹಲವಾರು ಘಟನೆಗಳನ್ನು



ಹುಟ್ಟುಹಾಕುವುದು, ಜನಪರವೆಂಬ ಸೋಗಲಾಡಿತನದ ಕಾರ್ಯಕ್ರಮಗಳನ್ನು ನಡೆಸಿ ನೆಲೆಗೊಳ್ಳಲು ಬಿಜೆಪಿ ಮಾಡಿದ ಕಸರತ್ತುಗಳಿಗೆ ಬರವಿಲ್ಲ. ಕರ್ನಾಟಕದ ಅಧಿಕಾರ ಸೂತ್ರವನ್ನೇ ಸುಬ್ಬುನೂರು ಮಾಡುತ್ತಲೇ ಬಂದಿದ್ದಾರೆ ರಾಜ್ಯದ ಜನತೆ. ಇತ್ತೀಚೆಗಿನ ಸಂಸತ್, ವಿಧಾನಸಭೆ ಉಪಚುನಾವಣೆ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಿಜೆಪಿ ನೆಲಕಚ್ಚಿತ್ತು. ಇಂತಹ ಸಂದರ್ಭದಲ್ಲಿ ಕೋಮುಗಲಭೆಗಳನ್ನು ಸೃಷ್ಟಿಸಿ, ಬಾಬಾಬುಡನ್ ಗಿರಿಯಂತಹ ವಿವಾದಗಳನ್ನೆಬ್ಬಿಸಿ 'ನೆಲೆಯನ್ನು' ಒದಗಿಸಲು ಆರ್‌ಎಸ್‌ಎಸ್ ಯತ್ನಿಸಿತು. ಆದಾಗ್ಯೂ ಗುಜರಾತ್‌ನ ಹತ್ಯಾಕಾಂಡ, ರೈತ ಕಾರ್ಮಿಕ, ಕೂಲಿಕಾರರು, ನಾಗರಿಕರನ್ನು ದಿವಾಳಿಯೆಬ್ಬಿಸಿದ ಆರ್ಥಿಕ ನೀತಿಗಳು, ಬೆಲೆ ಏರಿಕೆ, ಸಾವಿರಾರು ಕೋಟಿ ರೂಪಾಯಿಗಳನ್ನು ಕಬಳಿಸಿ ಭ್ರಷ್ಟಾಚಾರದ ಹಗರಣಗಳ ಸರಮಾಲೆಗಳು ಬಿಜೆಪಿ-ಎನ್‌ಡಿಎ ಕೂಟದ ಬಗೆಗಿನ ಭ್ರಮೆಗಳು ಕರಗಿಹೋದವು. ವಾಜಪೇಯಿ ವರ್ಚಸ್ಸು ಮಂಕಾಯಿತು. ಬಿಜೆಪಿ ಬತ್ತಳಿಕೆಯಲ್ಲಿ ಭರವಸೆಯ ಬಾಣಗಳು ಖಾಲಿಯಾಗುತ್ತಿರುವಂತೆ ಮತ್ತೇ ಕೋಮುವಾದದ ಆಕ್ರಮಣ ತೀವ್ರಗೊಳಿಸಲಾಗುತ್ತಿದೆ. ಉಪ ಪ್ರಧಾನಿಯಾಗಿರುವ ಅಡ್ವಾಣಿಯನ್ನು ಪ್ರಧಾನಿಯಾಗಿಸುವ, ಸಂಘ ಪರಿವಾರದ ಫ್ಯಾಸಿಸ್ಟ್ ಮಾದರಿಯ ಅಜೆಂಡಾ ತೀವ್ರಗೊಳಿಸುವ ಯೋಜನೆಯನ್ನು ಕಾರ್ಯಗತಗೊಳಿಸಲು ದೀರ್ಘ ಯೋಜನೆಯನ್ನೇ ಸಿದ್ಧಪಡಿಸಲಾಗಿದೆ. ಮೇಲಾಗಿ ಇನ್ನೆರೆಡು ವರ್ಷಗಳಲ್ಲೇ ರಾಜ್ಯದ ವಿಧಾನಸಭೆಯ ಚುನಾವಣೆಗೆ ಚುನಾವಣೆಗಳು ನಡೆಯಲಿವೆ.

ಗಮನ ಕೇಂದ್ರೀಕರಣ

ಹೀಗಾಗಿ ಈ ಅವಧಿಯಲ್ಲಿ ಆರ್‌ಎಸ್‌ಎಸ್ ಮತ್ತು ಬಿಜೆಪಿಗಳು ಕರ್ನಾಟಕಕ್ಕೆ ತಮ್ಮ ಗಮನವನ್ನು ಇನ್ನಷ್ಟು ಹೆಚ್ಚು ಕೇಂದ್ರೀಕರಿಸಿವೆ. ವರ್ಚಸ್ಸು ಬೆಳೆಸಲು ದಕ್ಷಿಣ ಪ್ರಾಂತೀಯ ಶಿಬಿರಗಳನ್ನು ನಡೆಸಿದ್ದಾರೆ, ಬಿಜೆಪಿಯ ಇತ್ತೀಚೆಗೆ ದಕ್ಷಿಣ ರಾಜ್ಯಗಳ ಪದಾಧಿಕಾರಿಗಳ ಸಭೆಯನ್ನು ಬೆಂಗಳೂರಿನಲ್ಲಿ ವ್ಯವಸ್ಥೆಗೊಳಿಸಿತ್ತು. ಹಾಗೆಯೇ ಅಡ್ವಾಣಿಯವರು ಬೀದರ್, ಗುಲ್ಬರ್ಗಾಗಳಿಗೆ ಶಿವಾಜಿ ಪ್ರತಿಮೆಯ ಅನಾವರಣದಂತಹ ಕಾರ್ಯಕ್ರಮಗಳಿಗೆ ಮತ್ತೆ ಮತ್ತೆ ಭಾಗವಹಿಸಿ ವಿರೋಧ ಪಕ್ಷಗಳ ಮೇಲೆ ಹರಿಹಾಯ್ದು, ಧಾಳಿ ನಡೆಸುವಂತೆ ಕಾರ್ಯಕರ್ತರಿಗೆ ಸೂಚನೆಯಿತ್ತರು. ವೆಂಕಯ್ಯನಾಯ್ಡು ಅಧ್ಯಕ್ಷರಾದ ಬಳಿಕ ಅದ್ದೂರಿಯ ಸ್ವಾಗತ, ಬಹಿರಂಗ ಸಭೆ ಏರ್ಪಡಿಸಲಾಯಿತು. ವಾರ್ತಾ ಸಚಿವೆ ಸುಷ್ಮಾಸ್ವರಾಜ್ ಬಳ್ಳಾರಿಗೆ ಬಂದು ಸತ್ಯನಾರಾಯಣ ಪೂಜೆ ಹಾಗೂ ಅಡಿಗಲ್ಲು ಸಮಾರಂಭ ಮುಗಿಸಿ ವಾಪಸಾದರು. ಕೇಂದ್ರದ ನೀತಿಗಳಿಂದ ತತ್ತರಿಸುತ್ತಿರುವ ಅಡಿಕೆ, ಕಾಫಿ ಮುಂತಾದ ಬೆಳೆಗಾರರನ್ನು ಸಂತೈಸಲು (ವಂಚಿಸಲು) ಜಾರ್ಜ್‌ಫರ್ನಾಂಡಿಸ್, ಜಸ್ವಂತ್ ಸಿಂಗ್, ಅನಂತಕುಮಾರ್ ಆದಿಯಾಗಿ ಭಾಗವಹಿಸಿದ ಹಲವಾರು ಭಾರಿ ಸಮಾವೇಶಗಳನ್ನು ಸಂಘಟಿಸಲಾಗಿದೆ.

ಬಿ.ಜೆ.ಪಿ.ಯ ನಾಯಕರು ರಾಜ್ಯದಾದ್ಯಂತ ಕೃಷ್ಣ ಕಾಂಗ್ರೆಸ್ ಸರ್ಕಾರದ ವಿರುದ್ಧ ಒಂದು ಸುತ್ತಿನ, ಪ್ರಚಾರ, ಪ್ರವಾಸಗಳನ್ನು ಮುಗಿಸಿದ್ದಾರೆ. ಈಗ ಹಳ್ಳಿಗೆ ನಡೆಯಿರಿ ಎಂಬ ಘೋಷಣೆಯಲ್ಲಿ ರಾಜ್ಯದಾದ್ಯಂತ ತಿರುಗುತ್ತಿದ್ದಾರೆ.

ಎಚ್ಚರ ಅಗತ್ಯ

ಈ ಒಟ್ಟು ಚಟುವಟಿಕೆಗಳ ಹಿನ್ನೆಲೆಯಲ್ಲಿಯೇ ಈಚೆಗಿನ ಗಲಭೆಗಳನ್ನು ನೋಡಬೇಕು. ಸಂಘಪರಿವಾರದ ಈ ಪ್ರಯತ್ನಗಳು ಹೀಗೆ ಸ್ಥಳೀಯ ಮಟ್ಟದಲ್ಲಿ ಎಬ್ಬಿಸಿ, ರಾಜ್ಯದಾದ್ಯಂತ ವಿಸ್ತರಿಸಿ ದುರುಪಯೋಗ ಮಾಡುವ ಸಂಚಿನ ಸಾಧ್ಯತೆಗಳಿವೆ. ಆದುದರಿಂದ ಕರ್ನಾಟಕ ಸರ್ಕಾರವು ಈ ಗಲಭೆಗಳ ಹಿಂದಿರುವ ಸಂಗತಿಗಳನ್ನು ಆಳವಾಗಿ ತನಿಖೆಗೆ ಒಳಪಡಿಸುವುದು ಮತ್ತು ಮುಂದೆ ಗಲಭೆಗಳು ಸಂಭವಿಸದಂತೆ, ಅವರ ದುಷ್ಟ ಯೋಜನೆ ಕಾರ್ಯಗತವಾಗದಂತೆ ತಡೆಯಲು ಎಚ್ಚರ ವಹಿಸುವುದು ಅಗತ್ಯ. ಹಾಗೆಯೇ ಈ ಅವಧಿಯಲ್ಲಿ ಮುಸ್ಲಿಂ ಅಲ್ಪಸಂಖ್ಯಾತರ ನಡುವೆ ಮೂಲಭೂತವಾದಿಗಳು (ಸ್ಟುಡೆಂಟ್ ಇಸ್ಲಾಮಿಕ್, ಜಮಾತೆ ಎ ಇಸ್ಲಾಮಿ ಹಿಂದ್) ಹೆಚ್ಚು ಸಕ್ರಿಯವಾಗಿರುವುದು ಕಂಡು ಬರುತ್ತಿದೆ. ಈ ಎರಡೂ ಶಕ್ತಿಗಳು ಪರಸ್ಪರರನ್ನು ಪೋಷಿಸಿ ಬಲಗೊಳಿಸುವಂತಹವು ಎಂಬುದು ತಿಳಿದ ವಿಷಯ.

ಕಾಂಗ್ರೆಸ್ ಇಚ್ಛಾ ಶಕ್ತಿ ಇದೆಯೇ?

ಈ ಕೋಮುವಾದಿಗಳ ದುಷ್ಟ ಸಂಚುಗಳನ್ನು ವಿಫಲಗೊಳಿಸಿ, ಅವುಗಳ ಯೋಜನೆಗಳನ್ನು ಬಯಲುಗೊಳಿಸಿ, ಆ ಶಕ್ತಿಗಳನ್ನು ಮಟ್ಟಹಾಕುವ ರಾಜಕೀಯ ಮತ್ತು ಆಡಳಿತಾತ್ಮಕ ಇಚ್ಛಾಶಕ್ತಿ ರಾಜ್ಯದ ಕಾಂಗ್ರೆಸ್ ಸರ್ಕಾರಕ್ಕೆ ಇಲ್ಲ. ಈ ದಶಕದೀಚಿನ ಹಾಗೂ ಈಚಿಗಿನ ವಿದ್ಯಮಾನಗಳಲ್ಲಿ ಕಾಂಗ್ರೆಸ್ ವಹಿಸುತ್ತಿರುವ ಪಾತ್ರ ಅದು ಪ್ರತಿಪಾದಿಸುತ್ತಿರುವ 'ಸೆಕ್ಯುಲರಿಸಂ' (ಧರ್ಮ ನಿರಪೇಕ್ಷತೆ)ನ ಬದ್ಧತೆ ಬಗ್ಗೆ ಶಂಕೆ ಮೂಡಿಸುತ್ತದೆ. ಕೊಡಗಿನ ಗಲಭೆಗಳು, ಬಾಬಾಬುಡನ್‌ಗಿರಿ ವಿವಾದ ಬಗೆಹರಿಸುವಲ್ಲಿ ಸರ್ಕಾರದ ಹೆಜ್ಜೆಗಳು ಈ ಅನುಮಾನವನ್ನು ದೃಢಗೊಳಿಸುತ್ತವೆ. ಕಾಂಗ್ರೆಸ್ ಒಂದು ಕೋಮುವಾದಿ ಪಕ್ಷವಲ್ಲ ನಿಜ.. ಆದರೆ ಕೋಮುವಾದ, ಮತೀಯವಾದವನ್ನು ಎದುರಿಸುವಲ್ಲಿ ಅದು ಚಂಚಲತೆಯಿಂದ, ರಾಜಕೀಯ ಲಾಭ-ನಷ್ಟಗಳ ಲೆಕ್ಕಾಚಾರದ ಸಂಕುಚಿತ ಹಿತಸಕ್ತಿಗಳಿಂದ ವರ್ತಿಸುತ್ತಿದೆ. (ಇದು ಬೂರ್ಷ್ವಾ ಪಕ್ಷಗಳ ಗುಣವೂ ಹೌದು) ಬಹುಸಂಖ್ಯಾತ ಕೋಮುವಾದಿ ಆಕ್ರಮಣ ತರುವ ಅಲ್ಪಸಂಖ್ಯಾತರಲ್ಲಿನ ಆತಂಕವು ತನ್ನ 'ರಾಜಕೀಯ ಮತಗಳಿಕೆಗೆ' ಸಹಕಾರಿ ಎಂದು ಯೋಚಿಸುವ ಅನೇಕ ಸಂದರ್ಭಗಳು ಕಣ್ಣೆದುರಿಗಿವೆ. ಕೊಡಗಿನಲ್ಲಿ ಅಲ್ಪಸಂಖ್ಯಾತರ ಮೇಲೆ ಸಂಘಪರಿವಾರ ಹಾಗೂ ಅದರ ಕ್ರಿಮಿನಲ್ ಪಡೆ ಅವ್ಯಾಹತ ಧಾಳಿ ಮಾಡಿ ಲೂಟಿ-ಬೆಂಕಿಯಿಡುವಲ್ಲಿ ತಾವೂ ಸಕ್ರಿಯವಾಗಿ ಶಾಮೀಲಾದ ಪೊಲೀಸ್ ಅಧಿಕಾರಿಗಳ ಮೇಲೆ (ನಿರ್ಧಿಷ್ಟ ವಿವರಗಳು ಸಿಕ್ಕಿದ್ದರೂ) ಕಿಂಚಿತ್ತೂ ಕ್ರಮವಹಿಸಿಲ್ಲ. ಬಾಳೆಲೆಯಂತಹ ಕಡೆ ಅಲ್ಪಸಂಖ್ಯಾತರು ಕ್ರಿಮಿನಲ್‌ಗಳ ಬೆದರಿಕೆಗಳಡಿ ಜೀವನ ಸಾಗಿಸಬೇಕಿದೆ. ಇಂತಹ ನಿರ್ಣಾಯಕ ಸಂದರ್ಭದಲ್ಲಿ ಕಾಂಗ್ರೆಸ್ ಹೇಗೆ ವರ್ತಿಸುತ್ತಿದೆ ಎಂಬುದು ಮಹತ್ವದ ಅಂಶ. ಸೌಹಾರ್ಧತೆ, ಶಾಂತಿ ಧರ್ಮನಿರಪೇಕ್ಷತೆಯನ್ನು ರಕ್ಷಿಸುವಂತೆ ಸತತವಾಗಿ ಸರ್ಕಾರದ ಮೇಲೆ ಒತ್ತಡ ಹೇರುವುದು ಅಗತ್ಯವಿದೆ.

ಭಿನ್ನ ನಿಲುವು ಅಗತ್ಯ

ಇಂತಹ ಚಂಚಲತೆ ಹಾಗೂ ಸಂದರ್ಭಸಾಧಕ ನಿಲುವಿನಿಂದಾಗಿಯೇ ಕೋಮುವಾದದ ವಿರೋಧಿ ಆಂದೋಲನದಲ್ಲಿ ಕಾಂಗ್ರೆಸ್‌ನ್ನು ಸರಳವಾಗಿ ಅದು ಕೋಮುವಾದಿಯಲ್ಲ ಎಂಬ ನೆಲೆಯಲ್ಲಿ ಜೊತೆಗೂಡಿ ಜಂಟಿಯಾಗಿ ಒಂದೇ ವೇದಿಕೆಯಲ್ಲಿ ಕಾರ್ಯನಿರ್ವಹಿಸಲು ಸಾಧ್ಯವಿಲ್ಲ. ಆದರೆ ಜಂಟಿಗೊಳ್ಳಲು ಇಂತಹ ಯತ್ನಗಳು ಹಲವೆಡೆ ನಡೆದವು. ಬಿಜೆಪಿ ಎನ್.ಡಿ.ಎ ಕೂಟವನ್ನು ಅಧಿಕಾರದಿಂದ ಕಿತ್ತೊಗೆದು ದೇಶವನ್ನು ರಕ್ಷಿಸಲು ನಡೆವ ಹೋರಾಟದಲ್ಲಿ ಒಂದು ಸನ್ನಿವೇಶ ಬಂದರೆ ಪಾರ್ಲಿಮೆಂಟಿನಲ್ಲಿ ಕಾಂಗ್ರೆಸ್‌ಗೆ 'ಬೆಂಬಲಿಸ'ಬೇಕಾಗುವುದೆಂಬ ಸಿಪಿಐ(ಎಂ)ನ ನಿಲುವನ್ನು ಒಂದು ಚುನಾವಣಾ ಮೈತ್ರಿಯಂತೆ ವ್ಯಾಖ್ಯಾನಿಸುವುದು ಮತ್ತು ಅಂತಹ ಮೈತ್ರಿಗೆ ಕೆಲವು ಎಡಪಕ್ಷಗಳು ಹಂಬಲಿಸುತ್ತಿರುವುದು ಕಾಣುತ್ತಿದೆ. ಕೋಮುವಾದದ ವಿರುದ್ಧ ಹೋರಾಟವೆಂಬುದು ಬಿಜೆಪಿ ಕೂಟ ಮತ್ತು ಕಾಂಗ್ರೆಸ್‌ಗೆ ಪರ್ಯಾಯವಾದ ಮೂರನೇ ರಾಜಕೀಯ ಶಕ್ತಿಗಳ ಬೆಳವಣಿಗೆಯಲ್ಲಿ ಮಹತ್ವದ ಸೈದ್ಧಾಂತಿಕ ರಾಜಕೀಯ ಹೋರಾಟವಾಗಿದೆ. ಈ ರಾಜಕೀಯ ಸಂದರ್ಭವನ್ನು ತಪ್ಪಾಗಿ ಅಂದಾಜು ಮಾಡುವುದು, ದುಡಿಯುವ ವರ್ಗದ ಪರ್ಯಾಯ ರೂಪಿಸಲು ತೊಡಕಾಗುತ್ತದೆ, ದುರ್ಬಲಗೊಳಿಸುತ್ತಿದೆ.

ಧಾಳಿ ಎದುರಿಸಲೇಬೇಕು

ಇಂದಿನ ಒಟ್ಟಾರೆ ಪರಿಸ್ಥಿತಿಯನ್ನು ಹೆಚ್ಚು ಹೆಚ್ಚು ಕೋಮುವಾದೀಕರಣಗೊಳಿಸಲು ಪ್ರಯತ್ನಗಳು ಹೆಚ್ಚುತ್ತಿವೆ. ಸಂಘಪರಿವಾರ ಬಿಜೆಪಿ ಹೊಸ ಸುತ್ತಿನ ದಾಳಿಗೆ ಸಿದ್ಧಗೊಳ್ಳುತ್ತಿವೆ. ಅದನ್ನು ವಿಫಲಗೊಳಿಸಿ ದೇಶವನ್ನು ರಕ್ಷಿಸುವುದು ಇಂದಿನ ತುರ್ತು ಅಗತ್ಯ. ○

ಕಾಫಿ ಬೆಳೆಗಾರರಿಗೆ ಸರಳ ಸಾಲ ಸೌಲಭ್ಯ ಕೇಂದ್ರ ಸರಕಾರದ ಮತ್ತೊಂದು ವಂಚನೆಯೇ?

ಕಾಫಿ ಬೆಳೆಗೆ ಸೂಕ್ತ ಬೆಲೆಯಿಲ್ಲದೇ, ಕೃಷಿ ಖರ್ಚು ನಿಬಾಯಿಸಲಾಗದೇ ಸಾಲದ ಶೂಲದಲ್ಲಿ ಸಿಕ್ಕಿ ತತ್ತರಿಸುತ್ತಿರುವ ರೈತರಿಗೆ ಸಾಲದ ಅವಧಿ ವಿಸ್ತರಿಸಿರುವುದಾಗಿ ಕೇಂದ್ರದ ವಾಣಿಜ್ಯ ಸಚಿವರು ಪ್ರಕಟಿಸಿದ್ದಾರೆ. ಈ ಪ್ರಕಟಣೆ ನಿಜಕ್ಕೂ ರೈತರಿಗೆ ಸಹಕಾರಿಯಾಗುವುದೆ? ಅಥವಾ ಇದೊಂದು ಕಣ್ಣೊರೆಸುವ ನಾಟಕವೇ? ಎಂದು ವಿವರಿಸಿದ್ದಾರೆ ಸಣ್ಣ ಕಾಫಿ ಬೆಳೆಗಾರ

ವಸಂತ್‌ಕುಮಾರ್ ಹೊಸಮನೆ, ಸಿದ್ದಾಪುರ

ಕಾಫಿ ಬೆಳೆಗಾರರು ಹಾಗೂ ರೈತರು ಕಾಫಿಯನ್ನೊಳಗೊಂಡ ಕೃಷಿ ಉತ್ಪನ್ನಗಳ ತೀವ್ರ ಬೆಲೆ ಕುಸಿತದಿಂದಾಗಿ ಕಂಗಾಲಾಗಿದ್ದು ಚೇತರಿಸಿಕೊಳ್ಳಲಾಗದ ಸ್ಥಿತಿಗೆ ತಲುಪಿದ್ದಾರೆ.



ಕೂಡಲೇ ಕೇಂದ್ರ ಸರಕಾರ ಬೆಳೆಗಾರರಿಗೆ ಸಹಾಯ ನೀಡಿ ರಕ್ಷಿಸಬೇಕೆಂದು ಬೇಡಿಕೆಗಳನ್ನು ಮುಂದಿಟ್ಟು ಅನೇಕ ಹೋರಾಟ ಮಾಡಿ ಮನವಿಗಳನ್ನು ಸಲ್ಲಿಸಿದ್ದಾರೆ. ಬೆಳೆಗಾರರ ಸಾಲ ಹಾಗೂ ಬಡ್ಡಿಯನ್ನು ಸಂಪೂರ್ಣ ಮನ್ನಾ ಮಾಡಬೇಕು. ಕಾಫಿಗೆ ಬೆಂಬಲ ಬೆಲೆ ನೀಡಬೇಕು. ಬಡ್ಡಿರಹಿತ ಸಾಲ ಒದಗಿಸಬೇಕು. ಈ ಬೇಡಿಕೆಗಳನ್ನು ಕೇಂದ್ರ ಸರ್ಕಾರ ಕೂಡಲೇ ಈಡೇರಿಸಬೇಕೆಂದು ಜಾಥಾ ಹಾಗೂ ಸಮಾವೇಶಗಳ ಮೂಲಕ ಒತ್ತಾಯಿಸಿದ್ದಾರೆ. ಸ್ವತಃ ಕೇಂದ್ರ ಮಂತ್ರಿಯಾಗಿದ್ದ ಧನಂಜಯ ಕುಮಾರ್ ಈ ಸಮಾವೇಶದಲ್ಲಿ ಭಾಗವಹಿಸಿ ಬಡ್ಡಿ ಮನ್ನಾ, ಸಾಲ ಮನ್ನಾ, ಬೆಂಬಲಬೆಲೆಯ ಭರವಸೆಗಳನ್ನು ನೀಡಿ ಬೆಳೆಗಾರರಿಗೆ ವಂಚಿಸಿರುವುದು ಎಲ್ಲರಿಗೂ ತಿಳಿದಿರುವ ವಿಷಯವಾಗಿದೆ. ನಂತರದ ದಿನಗಳಲ್ಲಿ ಮತ್ತೊಂದು ಹೇಳಿಕೆ ನೀಡಿ ಬೆಳೆಗಾರರಿಗೆ ಫಸಲು ಸಾಲದ ಮರುಪಾವತಿಗೆ ಎರಡು ವರ್ಷಗಳ ರಜೆ ಘೋಷಣೆ ಎಂಬುದಾಗಿ ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದ್ದಾರೆ.

ಜೂನ್ 30ಕ್ಕೆ ಉಳಿದಿರುವ ಕಾಫಿ ಬೆಳೆ ಸಾಲಕ್ಕೆ ಸಂಬಂಧಿಸಿದ ಎಲ್ಲಾ ಅಲ್ಪಾವದಿ, ಮಧ್ಯಮಾವದಿ ಹಾಗೂ ದೀರ್ಘಾವದಿ ಸಾಲವೆನ್ನು 7ರಿಂದ 9 ವರ್ಷಗಳ ಅವದಿಯಲ್ಲಿ ಮರುಪಾವತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ. 2003-04ನೇ ಸಾಲಿಗೆ ರಜೆ ನೀಡಿರುವುದರಿಂದ ಆ ನಂತರದ ಅವಧಿಗೆ ಈ ನೀತಿ ಅನ್ವಯಿಸುತ್ತದೆ ಮತ್ತು 2003-04ನೇ ಸಾಲಿನ ಬೆಳೆಗಾರರ ಸಾಲದ ಮೇಲಿನ ಬಡ್ಡಿಯನ್ನು ಬ್ಯಾಂಕಿನವರೇ ವಹಿಸಿಕೊಳ್ಳುತ್ತಾರೆ ಎಂದು ವಿವರಿಸಿದ್ದರು. ಆದರೆ ಈ ಸೌಲಭ್ಯ ಈ ಸಹಕಾರ ಸಂಘಗಳಿಗೆ ಅನ್ವಯಿಸುವುದಿಲ್ಲ ಇದರಿಂದ ಶೇ 95 ರೈತರು ಸಹಕಾರ ಸಂಘದಿಂದ ಸಾಲ ಪಡೆದವರಾಗಿದ್ದು ಇದರಿಂದ ವಂಚಿತರಾಗುತ್ತಾರೆ. ಈಗಾಗಲೇ ಸಹಕಾರ ಸಂಘದಿಂದ ಸಾಲ ಹೊಂದಿಕೊಂಡ ರೈತರು ಮಾರ್ಚ್ 31ಕ್ಕೆ ಮರುಪಾವತಿ ಮಾಡಿದ್ದಾರೆ. ಶೇ 99 ರೈತರು ನವೀಕರಿಸಿಕೊಂಡಿದ್ದಾರೆ ಎಂದೇ ಹೇಳಬಹುದು.

ಸ್ವಾಭಿಮಾನಿಯಾದ ರೈತ ತಾನು ಹಸಿವಿನಲ್ಲಿದ್ದರೂ ವಾಯಿದೆ ಮೀರಿದ ಸಾಲಗಾರನಾಗ ಬಹುದು ಎಂಬ ಕಾರಣದಿಂದ ಅನೇಕ ಜನರಿಂದ ಹಣ ಹೊಂದಾಣಿಕೆ ಮಾಡಿಕೊಂಡು ಸಾಲ ಮರುಪಾವತಿಗೆ ಮತ್ತೆ ಸಾಲ ಪಡೆದು ಹಿಂತಿರುಗಿಸಿ ದ್ದಾರೆ. ಈ ವರ್ಷ ಸಿಕ್ಕಿದ ಉತ್ಪತ್ತಿ ಬಡ್ಡಿಗೆ ಪಾವತಿ ಯಾಗಿದೆ. ಇದರಿಂದ ಕಾಫಿ ತೋಟದ ನಿರ್ವಹಣೆಗೆ ಹಣವಿಲ್ಲದಾಗಿದೆ ಮತ್ತು ಮುಂದಿನ ಜೀವನ ಸಾಗಿಸುವುದು ಕಷ್ಟಕರವಾಗಿದೆ. ಆದರೂ ರೈತನ ಆತ್ಮಗೌರವದ ಪ್ರಶ್ನೆ ಎಂದು ಅನೇಕರು ಭಾವಿಸಿ ಬಡ್ಡಿ ಪಾವತಿ ಮಾಡಿ ಸಾಲ ನವೀಕರಿಸಿಕೊಂಡು ಯಾವುದನ್ನೂ ನಿರೀಕ್ಷೆ ಮಾಡದೇನೆ 'ದುಡಿಮೆಯೇ ಜೀವನ' ಎಂದು ತೋರಿಸಿಕೊಟ್ಟಿದ್ದಾರೆ. ಇಂತಹ ಬೆಳೆಗಾರರಿಗೆ ಸರಕಾರಗಳಿಂದ ಯಾವ ಸೌಲಭ್ಯವೂ ಇಲ್ಲ. ಮಂತ್ರಿಗಳ ಭರವಸೆಗಳು ಕಾರ್ಯರೂಪಕ್ಕೆ ಇದುವರೆಗೂ ಬಂದಿಲ್ಲ. ಬ್ಯಾಂಕಿನ ಅಧಿಕಾರಿಗಳು ನಿರಂತರವಾಗಿ ಬೆಳೆಗಾರರಿಗೆ ಕಿರುಕುಳ ನೀಡುತ್ತಿದ್ದಾರೆ. ಕೃಷಿ ಸಾಲಕ್ಕೆ ಸಂಬಂಧಿಸಿದಂತೆ, ವಾಹನ ಸಾಲ, ನೀರಾವರಿ ಸಾಲ ಮುಂತಾದ ಸಾಲಗಳನ್ನು ಬೆಳೆಗಾರರು ಹೊಂದಿಕೊಂಡಿದ್ದು ಅನೇಕ ಬೆಳೆಗಾರರು ವಾಹನಗಳನ್ನು ಕಳೆದು ಕೊಂಡಿದ್ದಾರೆ. ಬ್ಯಾಂಕಿನವರು ಬಲಾತ್ಕಾರವಾಗಿ ವಾಹನಗಳನ್ನು ಮಾರಾಟ ಮಾಡಿಸಿ ಹಣವನ್ನು ಬ್ಯಾಂಕಿಗೆ ಪಾವತಿ ಮಾಡಿಸಿಕೊಂಡಿದ್ದಾರೆ.

ಈಗ ರಕ್ಷಣಾ ಸಚಿವರಿಂದ ನೇರವಾಗಿ ಬೆಳೆಗಾರರ ಸಮಸ್ಯೆಗಳನ್ನು ಆಲಿಸುವ ನಾಟಕ ಮಾಡಿ ಮಡಿಕೇರಿಯಲ್ಲಿ ಬೆಳೆಗಾರರ ಸಭೆ ನಡೆಸಿದ್ದಾರೆ. ಕೊಡಗಿನ ರೈತರು ಗೈರು ಹಾಜರಾಗುವ ಮೂಲಕ ರಕ್ಷಣಾ ಸಚಿವರ ನಾಟಕದ ಸಭೆಯನ್ನು ಬಹಿಷ್ಕರಿಸಿದ್ದಾರೆ. ಇದರಿಂದ ಬೆಳೆಗಾರರಿಗೆ ಯಾವ ಪ್ರಯೋಜನವಾಗುವುದಿಲ್ಲ ಎಂಬ ಅರಿವು ಬೆಳೆಗಾರರಿಗೆ ಬಂದಿದೆ.

ಇದರಿಂದ ಬಹಳಷ್ಟು ನಷ್ಟ ಬೆಳೆಗಾರರಿಗಾಗಿದೆ. ಕೆಲವು ರೈತರು ಮಾನಸಿಕ ಹಿಂಸೆಗೆ ಗುರಿಯಾಗಿದ್ದಾರೆ. ಇಷ್ಟೊಂದು ಸಂಕಷ್ಟದಲ್ಲಿರುವ ರೈತನಿಗೆ ಸರಕಾರದ ಯಾವ ಯೋಜನೆಯೂ ಪ್ರಯೋಜನವಾಗಿಲ್ಲ ಎಂಬುದು ಸತ್ಯ.

ಬೆಳೆಗಾರರು ತಮ್ಮ ಬೇಡಿಕೆಗಳನ್ನು ಪ್ರಧಾನ ಮಂತ್ರಿಯಿಂದ ಎಲ್ಲಾ ಮಂತ್ರಿಗಳವರೆಗೂ ನೀಡಿ ಮನವಿ ಸಲ್ಲಿಸಿದರೂ ಯಾವ ಬೇಡಿಕೆಯೂ ಈಡೇರಲಿಲ್ಲ. ಈಗ ರಕ್ಷಣಾ ಸಚಿವರಿಂದ ನೇರವಾಗಿ ಬೆಳೆಗಾರರ ಸಮಸ್ಯೆಗಳನ್ನು ಆಲಿಸುವ ನಾಟಕ ಮಾಡಿ ಮಡಿಕೇರಿಯಲ್ಲಿ ಬೆಳೆಗಾರರ ಸಭೆ ನಡೆಸಿದ್ದಾರೆ. ಕೊಡಗಿನ ರೈತರು ಗೈರು ಹಾಜರಾಗುವ ಮೂಲಕ ರಕ್ಷಣಾ ಸಚಿವರ ನಾಟಕದ ಸಭೆಯನ್ನು ಬಹಿಷ್ಕರಿಸಿದ್ದಾರೆ. ಇದರಿಂದ ಬೆಳೆಗಾರರಿಗೆ ಯಾವ ಪ್ರಯೋಜನವಾಗುವುದಿಲ್ಲ ಎಂಬ ಅರಿವು ಬೆಳೆಗಾರರಿಗೆ ಬಂದಿದೆ. ಈಗ ವಾಣಿಜ್ಯ ಸಚಿವರು ಬೆಳೆಗಾರರಿಗೆ ಸರಳ ಸಾಲ ಸೌಲಭ್ಯ ಎಂದು ಪ್ರಕಟಿಸಿದ್ದಾರೆ. ಸಾಲಗಳನ್ನು 7ರಿಂದ 9 ವರ್ಷಗಳ ಅವದಿಗೆ ವಿಸ್ತರಿಸುವ ಅವಕಾಶವಿದೆ ಮತ್ತು ಶೇ75 ಸಾಲ ಮರುಪಾವತಿಸಿದವರಿಗೆ ಮುಂದಿನ ಸಾಲಿನಲ್ಲಿ ಸಾಲ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಇವತ್ತು ಬೆಳೆಗಾರ ಸಾಲದ ಬಡ್ಡಿಯನ್ನು ಮರುಪಾವತಿಸುವ ಸ್ಥಿತಿಯಲ್ಲಿಲ್ಲ ಹೀಗಿರುವಾಗ ಶೇ.75 ಸಾಲ ಮರುಪಾವತಿ ಮಾಡುವುದಾದರೂ ಹೇಗೆ? ಅಲ್ಲದೇ ರಫ್ತುದಾರರಿಗೆ ರಫ್ತು ಸಾಲಯೋಜನೆ ಕಲ್ಪಿಸಿದ್ದು ಇದರಿಂದ ಕೃಷಿ ಸಾಲ ಮರುಪಾವತಿಸಲು ಬಳಸಿಕೊಳ್ಳುವ ಅವಕಾಶ ನೀಡಲಾಗಿದೆ. ಇದರಿಂದ ಸಾಮಾನ್ಯ ಬೆಳೆಗಾರನಿಗೆ ಯಾವ ಪ್ರಯೋಜನವಿಲ್ಲ ಈ ಯೋಜನೆಗಳು ಬೆಳೆಗಾರನಿಗೆ ದ್ರೋಹದ ಯೋಜನೆಗಳಾಗಿದ್ದು ಸರಕಾರಕ್ಕೆ ರಫ್ತುದಾರರ ಹಿತವೇ ಮುಖ್ಯ ಎಂಬುದು ಸ್ಪಷ್ಟವಾಗಿದೆ. ಅಲ್ಲದೆ ಇದು ಸಹಕಾರ ಸಂಘಗಳಿಗೆ ಅನ್ವಯಿಸುವುದಿಲ್ಲವಾದ್ದರಿಂದ ಶೇ 95ರಷ್ಟಕ್ಕೆ ಬೆಳೆಗಾರರನ್ನು ಸೌಲಭ್ಯದ ಹೆಸರಿನಲ್ಲಿ ಕೇಂದ್ರ ಸರಕಾರ ವಂಚಿಸಿದೆ ಎಂಬುದು ಸ್ಪಷ್ಟವಾಗಿದೆ. ○

ಕಾರ್ಮಿಕವರ್ಗದ ಹಿತಗಳಿಗಾಗಿ ಐಕ್ಯ ಹೋರಾಟ - ಕಾಂ ವಿ.ಜೆ.ಕೆ ನಾಯರ್

ಸಿಐಟಿಯುವಿನ ಉಡುಪಿ ಜಿಲ್ಲಾ ಪ್ರಥಮ ಸಮ್ಮೇಳನ

ತಾರೀಕು 22-0-2002ರಂದು ಕುಂದಾಪುರದ "ಅಕ್ಷತಾ ಹಾಲ್"ನಲ್ಲಿ ಸಿಐಟಿಯುವಿನ ಉಡುಪಿ ಜಿಲ್ಲಾ ಪ್ರಥಮ ಸಮ್ಮೇಳನ ಜರುಗಿತು. ಆರಂಭದಲ್ಲಿ ಧ್ವಜಾರೋಹಣ ಕಾರ್ಯಕ್ರಮ ಸಿ.ನಾರಾಯಣನವರು ನಡೆಸಿಕೊಟ್ಟರು. ಹುತಾತ್ಮರ ಸ್ಮಾರಕಕ್ಕೆ ಹೂ ಅರ್ಪಿಸಿ ಗೌರವಿಸಲಾಯಿತು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಸಿ.ನಾರಾಯಣರವರು ವಹಿಸಿದ್ದರು. ಸಿಐಟಿಯುವಿನ ಉಡುಪಿ ಜಿಲ್ಲಾ ಪ್ರಥಮ ಸಮ್ಮೇಳನವನ್ನು ಸಿಐಟಿಯುವಿನ ರಾಜ್ಯ ಪ್ರಧಾನ ಕಾರ್ಯದರ್ಶಿಯವರಾದ ಕಾಮ್ರೇಡ್ ವಿ.ಜೆ.ಕೆ ನಾಯರ್‌ರವರು ಉದ್ಘಾಟಿಸುತ್ತಾ, ಸಿಐಟಿಯು ಬೆಳೆದು ಬಂದ ದಾರಿ, ದೇಶವ್ಯಾಪಿ ಬೆಳೆದು ಬಂದ ಐಕ್ಯ ಹೋರಾಟ, ಕೇಂದ್ರ ಮತ್ತು ರಾಜ್ಯ ಸರಕಾರದ ವಿನಾಶಕಾರಿ ಆಡಳಿತೆಯ ಕುರಿತು ವಿವರಣೆ ನೀಡಿದರು. ಕೈಗಾರಿಕಾ ಅಭಿವೃದ್ಧಿಯ ಪರ ಹಾಗೂ ಕಾರ್ಮಿಕ ವರ್ಗದ ಪರ ಕಾನೂನು ತಿದ್ದುಪಡಿಗೆ ಸಿಐಟಿಯು ಬೆಂಬಲಿಸುತ್ತದೆ. ಮುಚ್ಚಿದ ಕೈಗಾರಿಕೆಗಳನ್ನು ತೆರೆದು, ಉದ್ಯೋಗ ಅವಕಾಶಗಳನ್ನು ಹೆಚ್ಚಿಸಲು, ಸಂಘಟಿತ ಮತ್ತು ಅಂಸಘಟಿತ ಕಾರ್ಮಿಕರ ಬೇಡಿಕೆಗಳನ್ನು ಇತ್ಯರ್ಥಗೊಳಿಸಲು ಸರಕಾರ ಕ್ರಮ ಕೈಗೊಳ್ಳಬೇಕೆಂದು ಹೇಳಿ ಉಡುಪಿ ಜಿಲ್ಲೆಯಲ್ಲಿ ಕಾರ್ಮಿಕ ವರ್ಗದ ಐಕ್ಯ ಚಳುವಳಿ ಬೆಳೆಸಲು ಕರೆ ನೀಡಿದರು.

ಸಿಐಟಿಯುವಿನ ಕರ್ನಾಟಕ ರಾಜ್ಯದ ಅಧ್ಯಕ್ಷರಾದ ಶ್ರೀಯುತ ಬಿ. ಮಾಧವರವರು ಸಮ್ಮೇಳನವನ್ನುದ್ದೇಶಿಸಿ ಭಾಷಣ ಮಾಡುತ್ತಾ ಸಿಐಟಿಯುವಿನ ನೇತ್ರತ್ವದಲ್ಲಿ ಧೀರ ಹೋರಾಟಗಳನ್ನು ನಡೆಸಿದ ಸಂಗಾತಿಗಳು ಜಿಲ್ಲಾ ವ್ಯಾಪಿ ಅಂಸಘಟಿತ ಕ್ಷೇತ್ರದಲ್ಲಿ ದುಡಿಯುವ ಲಕ್ಷಾಂತರ ಬೀಡಿ ಮತ್ತು ಇತರ ವಿಭಾಗದ ಕಾರ್ಮಿಕರನ್ನು ಸಂಘಟಿಸಿ, ನ್ಯಾಯವಾದ ಬೇಡಿಕೆಗಳಿಗಾಗಿ ನಿರಂತರ ಹೋರಾಟ ನಡೆಸಬೇಕೆಂದು ಹೇಳಿ, ಸಿಐಟಿಯು ಕಾರ್ಮಿಕ ವರ್ಗದ ಚಳುವಳಿಯ ಕೇಂದ್ರವಾಗಿ ಬೆಳೆದು ಬರಬೇಕು ಎಂದು ವಿವರಿಸಿದರು.

ಉದ್ಘಾಟನಾ ಸಮಾರಂಭದ ನಂತರ ಪ್ರತಿನಿಧಿಗಳ ಸಮ್ಮೇಳನವು ಕೆ.ಶಂಕರ್, ದೋಗು ಸುವರ್ಣ ಮತ್ತು ಶಾರದ ಇವರ ಅಧ್ಯಕ್ಷ ಮಂಡಲಿಯಲ್ಲಿ ನಡೆಯಿತು. ಸ್ವಾಗತ ಸಮಿತಿಯ ಕಾರ್ಯದರ್ಶಿಯವರಾದ ಪಿ.ವಿಶ್ವನಾಥ ರೈಯವರು ಎಲ್ಲರನ್ನೂ ಸ್ವಾಗತಿಸಿ ವರದಿ ಮಂಡಿಸಿದರು. ವರದಿಯ ಮೇಲಿನ ಚರ್ಚೆಯಲ್ಲಿ ಹತ್ತು ಮಂದಿ ಭಾಗವಹಿಸಿದರು. ಉಡುಪಿ ಜಿಲ್ಲೆಯಲ್ಲಿ ಅಸಂಘಟಿತ ಕಾರ್ಮಿಕರ ಮಧ್ಯೆ ಹೆಚ್ಚಿನ ಆಧ್ಯತೆ ನೀಡಲು, ಕಾರ್ಮಿಕರ ಐಕ್ಯ ಹೋರಾಟವನ್ನು ಬೆಳೆಸಲು ಪ್ರತಿನಿಧಿ ಸಂಗಾತಿಗಳು ಚರ್ಚೆಯಲ್ಲಿ ಪ್ರಸ್ತಾಪ ಮಾಡಿದರು.

ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ, ಕಾರ್ಮಿಕ ಕಾಯಿದೆಗಳನ್ನು ಮಾಲೀಕರ ಪರವಾಗಿ ತಿದ್ದುಪಡಿ ಮಾಡುವುದರ ವಿರುದ್ಧ, ಕೋಮುವಾದದ ವಿರುದ್ಧ, ರಾಜ್ಯ ಸರಕಾರದ ಜನವಿರೋಧಿ ಮತ್ತು ಕಾರ್ಮಿಕವಿರೋಧಿ ನೀತಿಯ ವಿರುದ್ಧ ಹಾಗೂ ಧೂಮಪಾನ ನಿಷೇಧ ಮಸೂದೆ ಜ್ಯಾರಿಗೊಳಿಸದೇ ಬೀಡಿ ಕಾರ್ಮಿಕರ ಮುಖ್ಯ ಬೇಡಿಕೆಗಳನ್ನು ಇತ್ಯರ್ಥಗೊಳಿಸಲು ಒತ್ತಾಯಿಸಿ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಪ್ರತಿನಿಧಿ ಸಮ್ಮೇಳನವನ್ನುದ್ದೇಶಿಸಿ ಸಿಐಟಿಯುವಿನ ರಾಜ್ಯದ ಅಧ್ಯಕ್ಷರಾದ ಮಾಧವ ಮತ್ತು ಪ್ರಧಾನ ಕಾರ್ಯದರ್ಶಿಯವರಾದ ವಿ.ಜೆ.ಕೆ.ನಾಯರ್ ಮಾತನಾಡಿ, ಜಿಲ್ಲೆಯಾದ್ಯಂತ ಅಸಂಘಟಿತ ಕಾರ್ಮಿಕರ ಮಧ್ಯೆ ಸಂಘಟನಾ ಕೆಲಸ ಆರಂಭಿಸಿ, ನ್ಯಾಯವಾದ ಬೇಡಿಕೆಗಳಿಗಾಗಿ ಐಕ್ಯ ಹೋರಾಟವನ್ನು ನಡೆಸುವುದರ ಮೂಲಕ ಸಿಐಟಿಯು ಉಡುಪಿ ಜಿಲ್ಲೆಯಲ್ಲಿ ಚಳುವಳಿಯ ಕೇಂದ್ರವಾಗಿ ಮಾಡಲು ಶ್ರಮಿಸಬೇಕೆಂದು ಕರೆ ನೀಡಿದರು.

ಪದಾಧಿಕಾರಿಗಳ ಆಯ್ಕೆ

ಸಿಐಟಿಯು ಉಡುಪಿ ಜಿಲ್ಲಾ ಸಮಿತಿ ಮತ್ತು ಪದಾಧಿಕಾರಿಗಳ ಆಯ್ಕೆ ನಡೆದು, 25 ಮಂದಿಯ ಸಮಿತಿಯೊಂದನ್ನು ರಚಿಸಲಾಯಿತು. ಪದಾಧಿಕಾರಿಗಳಾಗಿ 9 ಮಂದಿಯನ್ನು ಆರಿಸಲಾಯಿತು.

ಕೆ.ಶಂಕರ್ ಅಧ್ಯಕ್ಷರಾಗಿ, ಸಿ.ನಾರಾಯಣ, ವಿ.ನರಸಿಂಹ, ಎ.ಎಸ್.ಆಚಾರ್ಯ ಉಪಾಧ್ಯಕ್ಷರಾಗಿ, ಪಿ.ವಿಶ್ವನಾಥ್ ರೈ ಪ್ರಧಾನ ಕಾರ್ಯದರ್ಶಿಯಾಗಿ, ಮಹಾಬಲ ಒಡೇರಹೋಬಳಿ, ದೋಗು ಸುವರ್ಣ ಮತ್ತು ಎಚ್.ನರಸಿಂಹ ಕಾರ್ಯದರ್ಶಿಗಳಾಗಿ, ಸಾಧು ಅಮೀನ್ ಕೋಶಾಧಿಕಾರಿಯಾಗಿ ಆಯ್ಕೆಯಾದರು.

ಅಧ್ಯಕ್ಷ ಮಂಡಲಿಯ ಸದಸ್ಯರ ಪರವಾಗಿ ಕೆ.ಶಂಕರ್ ಪ್ರತಿನಿಧಿ ಸಮ್ಮೇಳನವನ್ನುದ್ದೇಶಿಸಿ ಮಾತನಾಡಿ ಜಿಲ್ಲಾವ್ಯಾಪಿ ಸಂಘಟನೆ ಮತ್ತು ಐಕ್ಯ ಹೋರಾಟವನ್ನು ಬೆಳೆಸಲು, ಸಂಘಗಳನ್ನು ಸಿಐಟಿಯುವಿನ ಧೋರಣೆಗನುಸಾರವಾಗಿ, ಪ್ರಜಾಸತ್ತಾತ್ಮಕವಾಗಿ ನಡೆಸಲು ಸಹಕಾರ ನೀಡಬೇಕೆಂದು ಕೇಳಿಕೊಂಡರು.

ನೂತನ ಕಾರ್ಯದರ್ಶಿಯವರಾದ ಪಿ.ವಿಶ್ವನಾಥ ರೈಯವರು ಮಾತನಾಡಿ ಸಂಘಗಳನ್ನು ಮತ್ತು ಚಳುವಳಿಯನ್ನು ಬಲಪಡಿಸಬೇಕೆಂದು ಹೇಳಿ, ಎಲ್ಲರಿಗೂ ಧನ್ಯವಾದವನ್ನು ಅರ್ಪಿಸಿದರು.

- ಕೆ.ಶಂಕರ್

ವಿದೇಶದಲ್ಲಿ ದೇಶ ವಿರೋಧಿ ಭಾಷಣ

ಬಿಜೊಯಕುಮಾರ್ ಸಿಐಎ ಪ್ರಾಯೋಜಿತ ತ್ರಿಪುರ ರಾಜ್ಯದ ಉಗ್ರಗಾಮಿ ಸಂಘಟನೆಯ ಮುಖಂಡ. ಕಳೆದ ಜುಲೈ 22ರಿಂದ 26ವರೆಗೆ ಜಿನೆವಾದಲ್ಲಿ ನಡೆದ ಎನ್‌ಜಿಓಗಳ 20ನೇ ಅಧಿವೇಶನದಲ್ಲಿ ಮಂಡಿಸಿದ ಲಿಖಿತ ವರದಿಯಲ್ಲಿ "ತ್ರಿಪುರದ ಬುಡಕಟ್ಟು ಜನರು ಯಾವತ್ತೂ ಭಾರತ ದೇಶದ ಭಾಗವಾಗಿರಲಿಲ್ಲ" ಎಂದು ಹೇಳುವ ಮೂಲಕ ದೇಶ ವಿರೋಧಿ ಹೇಳಿಕೆಯನ್ನು ನೀಡಿದ್ದಾನೆ.

ಸಂಘಟನೆಯು ಅಮೇರಿಕಾದ ಗುಪ್ತಾಚಾರ ಸಂಸ್ಥೆ ಸಿಐಎನಿಂದ ಪ್ರೇರಿತವಾಗಿದ್ದು. ಬಿಜೊಯ್‌ಕುಮಾರ್‌ನ ಹೇಳಿಕೆಯ ಆಯ್ದ ಬಾಗವು ಈ ಕೆಳಗಿನಂತಿದೆ.

ತ್ರಿಪುರದ ಬುಡಕಟ್ಟು 'ಬೊರೊಕ್' ಜನರ ಮೇಲೆ ನಡೆಯುತ್ತಿರುವ ದಬ್ಬಾಳಿಕೆ ಮತ್ತು ನಿರ್ಲಕ್ಷತನವನ್ನು ಇಂದಿನ ಯುವಜನಾಂಗ ಒಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದಲೇ ಉಗ್ರಗಾಮಿ ಸಂಘಟನೆಗಳಾದ 'ತ್ರಿಪುರ ರಾಷ್ಟ್ರೀಯ ಸ್ವಾತಂತ್ರ್ಯ ರಂಗ (NLFT) ಮತ್ತು ಆಲ್ ತ್ರಿಪುರ ಟೈಗರ್ ಫೋರ್ಸ್ (ATTF) ಬೊರೊಕ್ ಜನರ ಮೂಲಭೂತ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತಿವೆ. ಭಾರತವು ಸ್ವತಂತ್ರ ಪಡೆಯುವವರೆಗೂ ತ್ರಿಪುರವು ಈ ದೇಶದ ಭಾಗವಾಗಿರಲಿಲ್ಲ. ಆದ್ದರಿಂದ ಸ್ವಯಂ ನಿರ್ಧಾರದ ಹಕ್ಕು ಪ್ರತಿಯೊಬ್ಬ 'ಬೊರೊಕ್' ಬುಡಕಟ್ಟು ಜನರ ಹಕ್ಕು ಅದು ಪ್ರತ್ಯೇಕತಾವಾದಿ ಚಳುವಳಿ ಅಲ್ಲ' ಎಂದು ವಾದಿಸಿದ್ದಾನೆ.

1949 ಅಕ್ಟೋಬರ್ 15ರಂದು ಭಾರತದೊಂದಿಗೆ ಸಂಯೋಜಿತಗೊಳ್ಳುವ ಒಪ್ಪಂದಕ್ಕೆ ಅಂದಿನ ಮಹಾರಾಣಿ ಕಾಂಚನ ಪ್ರಭಾ ಸಹಿ ಹಾಕಿದ್ದರು. ಇದನ್ನು ಮುಚ್ಚಿಡಲು ಪ್ರಯತ್ನಿಸಿದ ಬಿಜೊಯ್‌ಕುಮಾರ್ "ಬೆಂಗಾಲಿಯ ಬುದ್ದಿಜೀವಿಗಳು ರಾಣಿಯ ಮೇಲೆ ಪ್ರಭಾವ ಬೀರಿ ಭಾರತದೊಂದಿಗೆ ಸೇರುವ ಒಪ್ಪಂದ ಮಾಡಿಕೊಂಡರು' ಎಂದು ಹೇಳಿದ್ದಾನೆ. ಮಾತ್ರವಲ್ಲ, ಸಂವಿದಾನಾತ್ಮಕವಾಗಿ ಚುನಾಯಿತವಾದ ಸರಕಾರವನ್ನು 'ವಿದೇಶಿ ಆಡಳಿತ' ಎಂದು ಬಣ್ಣಿಸಿದ್ದಾನೆ.

ಪ್ರತ್ಯೇಕತಾವಾದಿ ಹೋರಾಟಕ್ಕೆ ವಿಶ್ವಸಂಸ್ಥೆಯೂ ಸೇರಿದಂತೆ, ಅಂತರರಾಷ್ಟ್ರೀಯ ಸಂಸ್ಥೆ ಮತ್ತು ದೇಶಗಳ ಬೆಂಬಲವನ್ನು ಯಾಚಿಸುತ್ತಾ, 'ಭಾರತದ ವಿಭಜನೆ (ಪೂರ್ವ ಪಾಕಿಸ್ತಾನ) ಈಗಿನ ಬಾಂಗ್ಲಾದೇಶ ಮತ್ತು ತ್ರಿಪುರ ಭಾರತದೊಂದಿಗೆ ಸೇರಿಕೊಂಡಿದುದರಿಂದ 'ಬೊರೊಕ್ ರಾಷ್ಟ್ರ'ಕ್ಕೆ ತೀರಾ ಸಂಕಷ್ಟವುಂಟಾಗಿದೆ. ಆದುದರಿಂದ ಅಂತರರಾಷ್ಟ್ರೀಯ ವೇದಿಕೆಯಲ್ಲಿ ಚರ್ಚೆ ನಡೆದು 'ಬೊರೊಕ್ ರಾಷ್ಟ್ರ'ದ ಉಳಿವಿಗಾಗಿ ಕನಿಷ್ಟ ಮಾನವ ಹಕ್ಕುಗಳನ್ನು ನಿರೂಪಿಸಬೇಕು" ಎಂದು ಯಾಚಿಸಿದ್ದಾನೆ.

ತ್ರಿಪುರಾ ಐಎನ್‌ಪಿಟಿ ಅಧ್ಯಕ್ಷರ ವಿರುದ್ಧ ಎಡರಂಗದ ಕಾನೂನು ಕ್ರಮ ಆರಂಭ

ತ್ರಿಪುರಾದ ಉಗ್ರಗಾಮಿ ಗುಂಪುಗಳಾದ ಎನ್‌ಸಿಳಿಫ್‌ಟಿ ಮತ್ತು ಎಟಿಟಿಎಫ್ ಭಯೋತ್ಪಾದಕ ಸಂಘಟನೆಗಳು 1948ರಲ್ಲಿ ಭಾರತವನ್ನು ಸೇರಿದ ತ್ರಿಪುರಾದ ಕ್ರಮವನ್ನೇ ಪ್ರಶ್ನಿಸಿ ದಶಕಗಳಿಂದ ಅಮಾಯಕರನ್ನು ಬಲಿತೆಗೆದುಕೊಳ್ಳುವ ಕುಕೃತ್ಯದಲ್ಲಿ ತೊಡಗಿದ್ದಾರೆ. ಇವರ ಭಯೋತ್ಪಾದಕ-ವಿಭಜಕ ಕೃತ್ಯಗಳಿಗೆ ಸಾವಿರಾರು ಮಂದಿ ಬಲಿಯಾಗಿದ್ದಾರೆ.

ಇಂತಹ ಸಂಘಟನೆಗಳಿಗೆ ಬೆಂಬಲ ಸೂಚಿಸಿರುವ ತ್ರಿಪುರಾದ ಶಾಸಕ ಹಾಗೂ ಐಎನ್‌ಪಿಟಿ ಅಧ್ಯಕ್ಷರಾದ ಬಿಜೋಯ್ ಹ್ರಾಂಗ್‌ಕಾಲ್‌ರ ಮೇಲೆ, ತ್ರಿಪುರಾದ ಎಡರಂಗ ಸರ್ಕಾರ ಕಾನೂನು ಕ್ರಮ ಆರಂಭಿಸಿದೆ. ಪರಿಣಾಮವಾಗಿ ಅವರ ವಿರುದ್ಧ ಸೆಪ್ಟೆಂಬರ್ 23ರಂದು ರಾತ್ರಿ ಪಶ್ಚಿಮ ಅಗರತಲಾ ಪೋಲೀಸ್ ಠಾಣೆಯಲ್ಲಿ ಮೊಕದ್ದಮೆ ದಾಖಲಿಸಿದೆ.

ಸಂವಿಧಾನ ಹಾಗೂ ರಾಷ್ಟ್ರದ ಐಕ್ಯತೆ-ಸಮಗ್ರತೆಯನ್ನು ಎತ್ತಿಹಿಡಿಯುವ ಉದ್ದೇಶದೊಂದಿಗೆ ಅಲ್ಲಿನ ಸರ್ಕಾರ ಜರುಗಿಸಿರುವ ಕ್ರಮದ ವಿರುದ್ಧ ಸೆಪ್ಟೆಂಬರ್ 28ರಿಂದ 48 ಗಂಟೆಗಳ ರಸ್ತೆ ತಡೆಯನ್ನು ಐಎನ್‌ಪಿಟಿ ಹಮ್ಮಿಕೊಂಡಿದೆ. ಇಂತಹ ರಾಷ್ಟ್ರ ವಿರೋಧಿ ಚಟುವಟಿಕೆಗಳಿಗೆ ಬಹಿರಂಗ ಕುಮ್ಮಕ್ಕು ನೀಡುವ ಐಎನ್‌ಪಿಟಿ ಯೊಂದಿಗೆ ಕಾಂಗ್ರೆಸ್ ಪಕ್ಷ ಮುಂಬರುವ ವಿಧಾನಸಭಾ ಚುನಾವಣೆಗಳಿಗೆ ಚುನಾವಣಾ ಹೊಂದಾಣಿಕೆ ಮಾಡಿಕೊಂಡಿದೆ. ಎಂತಹ ದೇಶಪ್ರೇಮ ಕಾಂಗ್ರೆಸ್‌ನದು! ಅಧಿಕಾರಕ್ಕಾಗಿ ದೇಶದ್ರೋಹಿಗಳೊಂದಿಗೆ ಕೈಜೋಡಿಸಲು ಹೇಸದ ಕಾಂಗ್ರೆಸ್ ಪಕ್ಷ, ಸೆಪ್ಟೆಂಬರ್ 28ರಂದು ಹೊಂದಾಣಿಕೆಯ ಮಾತುಕತೆಗಳನ್ನು ಐಎನ್‌ಪಿಟಿ ಯೊಂದಿಗೆ ಅಂತಿಮಗೊಳಿಸಲು ತನ್ನ ಮುಖಂಡರಾದ ಮಣಿಶಂಕರ್ ಅಯ್ಯರ್‌ರನ್ನು ಅಗರ್ತಲಾಗೆ ಕಳುಹಿಸುತ್ತಿದೆ.

ಅಕ್ಟೋಬರ್ 2 : ಕೋಮು ಸೌಹಾರ್ದತಾ ದಿನ

ಗುಜರಾತ್‌ನಲ್ಲಿ ಮತ್ತೆ ಅಮಾಯಕರ ರಕ್ತ ಹರಿದಿದೆ. ಗಾಂಧಿನಗರದ ಅಕ್ಷರಧಾಮ ಸ್ವಾಮಿ ನಾರಾಯಣ ಮಂದಿರದ ಆವರಣಕ್ಕೆ ನುಗ್ಗಿದ ಇಬ್ಬರು ಭಯೋತ್ಪಾದಕರು ಅಲ್ಲಿದ್ದವರ ಮೇಲೆ ಮನಬಂದಂತೆ ಗುಂಡುಹಾರಿಸಿದಾಗ ಆರು ಜನ ಮಹಿಳೆಯರು ಮತ್ತು ನಾಲ್ವರು ಮಕ್ಕಳೂ ಸೇರಿದಂತೆ ಕನಿಷ್ಠ 30 ಜನ ಮೃತಪಟ್ಟಿದ್ದಾರೆ. ನೂರಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ. ಈ ಬರ್ಬರ ಕೃತ್ಯವನ್ನು ಪಾಕಿಸ್ತಾನವೂ ಸೇರಿದಂತೆ ಇಡೀ ವಿಶ್ವವೇ ಖಂಡಿಸಿದೆ. ಅಲ್ಪಸಂಖ್ಯಾತರೂ ಸೇರಿದಂತೆ ದೇಶದ ಎಲ್ಲಾ ಜನವಿಭಾಗಗಳು ಈ ದುಷ್ಕೃತ್ಯವನ್ನು ಬಲವಾಗಿ ಖಂಡಿಸಿವೆ. ಪ್ರಾಣ ಕಳೆದುಕೊಂಡ ಅಮಾಯಕರ ಕುಟುಂಬಗಳಿಗೆ ಸಾಂತ್ವನ, ಸಮಾಧಾನವನ್ನು ಕೋರಿವೆ.

ಈ ಪೈಶಾಚಿಕ ಕೃತ್ಯದ ಹಿಂದೆ ಯಾರ, ಯಾವ ಭಯೋತ್ಪಾದಕ ಸಂಘಟನೆಯ ಕೈವಾಡವಿದೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಇಬ್ಬರೂ ಭಯೋತ್ಪಾದಕರನ್ನು ಎನ್.ಎಸ್.ಜಿ ಕಮಾಂಡೋಗಳು ಕೊಂದು ಹಾಕಿರುವುದರಿಂದ ಅವರ ಮೂಲವನ್ನು ಪತ್ತೆ ಹಚ್ಚುವ ಕೆಲಸಕ್ಕೆ ಹಿನ್ನಡೆಯಾಗಿದೆ. ಆದರೆ ಈ ಭೀಬತ್ಸ ಕೃತ್ಯದ ಹೊಣೆಗಾರರು ಯಾರೇ ಆಗಿರಲಿ, ಅವರು ಈ ದೇಶದ ಜನತೆಯ ನೆಮ್ಮದಿಯ ಶತ್ರುಗಳಾಗಿದ್ದಾರೆ. ಗುಜರಾತ್‌ನಲ್ಲಿ ಹೆಡೆ ಎತ್ತಿರುವ ಕೋಮುವಾದಿ ವಿಷ ಸರ್ಪಕ್ಕೆ ಇದರಿಂದಾಗಿ ಹಾಲೆರೆದಂತಾಗಿದೆ.

ಕೆಲವು ಕೋಮುವಾದಿ ಶಕ್ತಿಗಳು ದೇಶದಲ್ಲಿ ಕೋಮು ಆಧಾರಿತ ಧ್ರುವೀಕರಣಕ್ಕಾಗಿ ದೃಢನಿರ್ಧಾರದಿಂದ ಕೆಲಸ ಮಾಡುತ್ತಿರುವುದು ಇದರಿಂದ ಮತ್ತೊಮ್ಮೆ ಸಾಬೀತಾಗಿದೆ. ಬಹುಸಂಖ್ಯಾತರ ಕೋಮುವಾದವೇ ಇರಲಿ, ಅಲ್ಪಸಂಖ್ಯಾತರ ಕೋಮುವಾದವೇ ಇರಲಿ; ಎರಡೂ ಪರಸ್ಪರ ಪೂರಕವಾಗಿದೆ. ದೇಶವನ್ನು ಭಸ್ಮಮಾಡುವ ಸಾಮರ್ಥ್ಯವನ್ನು ಹೊಂದಿವೆ. ಸೇಡಿಗೆ ಸೇಡು, ಕ್ರಿಯೆಗೆ ಪ್ರತಿಕ್ರಿಯೆ ಎಂಬ ವಾದವು ಅಪಾಯಕಾರಿಯಾಗಿದೆ. ಎಲ್ಲಾ ಮತ ಪಂಥಗಳಿಗೆ ಸೇರಿದ ಜನ ಹಾಗೂ ಯಾವ ಮತಪಂಥಕ್ಕೂ ಸೇರದೇ ಇರುವ ಜನ, ಎಲ್ಲ ದೇಶಪ್ರೇಮಿ ಜನ ಒಂದಾಗಿ ಬಂದು ಇಂತಹ ದುಷ್ಕೃತ್ಯಗಳಿಗೆ ಒಂದು ತೆರೆ ಎಳೆಯಲೇಬೇಕು.

ನಮ್ಮ ದೇಶದಲ್ಲಿ ಇಂದು ಧರ್ಮದ ಹೆಸರಿನಲ್ಲಿ ಅಧರ್ಮ ವಿಜೃಂಭಿಸತೊಡಗಿದೆ. ಗಾಂಧಿಯ ಗುಜರಾತ್ ಗೋಡ್ಸೆಯ ಗುಜರಾತ್ ಆಗುತ್ತಿದೆ. ರಾಮನ ಹೆಸರಿನಲ್ಲಿ ಧರ್ಮಭೋದಕನನ್ನು ಜೀವಂತ ಸುಟ್ಟುಹಾಕಲಾಗುತ್ತದೆ. ಮದುವೆಯಾದ ಮಹಿಳೆ ತನ್ನ ಗಂಡನ ಧರ್ಮಕ್ಕೆ ಮತಾಂತರಗೊಳ್ಳಲು ಒಪ್ಪದ ತಪ್ಪಿಗೆ ಅವಳನ್ನು ಕೊಚ್ಚಿಹಾಕಲಾಗುತ್ತದೆ. ಇಂತಹ ಧರ್ಮಾಂಧತೆ ಕೊನೆಯಾಗುವುದು ಬೇಡವೆ?


ಗೋಧ್ರಾದಲ್ಲಿ ರೈಲಿಗೆ ಬೆಂಕಿ ಹಚ್ಚಿದವರು ಯಾರೇ ಇರಲಿ, ಅವರು ಕ್ಷಮಾರ್ಹರಲ್ಲ, ಗುಜರಾತ್ ಹತ್ಯಾಕಾಂಡಕ್ಕೆ, ಕಾರಣರಾದವರೂ ಎಷ್ಟೇ ದೊಡ್ಡ ವ್ಯಕ್ತಿಗಳಾದರೂ ಅವರಿಗೆ ಶಿಕ್ಷೆಯಾಗಬೇಕು. ಮುಂಬೈ ಸರಣಿ ಬಾಂಬ್ ಸ್ಫೋಟದ ಹಿಂದೆ ಇರುವವರನ್ನೆಲ್ಲಾ ಪಾತಾಳದಿಂದಾದರೂ ಹೊರತೆಗೆಯಬೇಕು. ಬಾಬ್ರಿ ಮಸೀದಿಯನ್ನು ಕೆಡವಿದವರು ಮಂತ್ರಿಗಳಾಗಿದ್ದರೂ ಅವರಿಗೆ ಕಾನೂನಿನ ಕೈಯಿಂದ ತಪ್ಪಿಸಿಕೊಳ್ಳಲು ಬಿಡಬಾರದು. ಭಾರತವು ಪ್ರಬಲವಾಗುವುದನ್ನು ಸಹಿಸದ ಸಾಮ್ರಾಜ್ಯಶಾಹಿ ಶಕ್ತಿಗಳು ಜಾತಿಮತದ ಹೆಸರಿನಲ್ಲಿ ದೇಶವನ್ನು ಒಡೆಯಲು ಸಂಚು ನಡೆಸಿವೆ. ಈ ಸಂಚಿಗೆ ಕೋಮುವಾದಿ, ಮೂಲಭೂತವಾದಿ ಶಕ್ತಿಗಳು ಪೂರಕವಾಗಿ ಕೆಲಸ ಮಾಡುತ್ತಿವೆ. ಈ ಷಡ್ಯಂತ್ರವನ್ನು ವಿಫಲಗೊಳಿಸುವುದು ನಮ್ಮ ನಿಮ್ಮೆಲ್ಲರ ಕರ್ತವ್ಯವಾಗಿದೆ.

ಈ ಹಿನ್ನೆಲೆಯಲ್ಲಿ ಅಕ್ಟೋಬರ್ 2ರಂದು ದೇಶದಾದ್ಯಂತ ಕೋಮುಸೌಹಾರ್ದತೆ ದಿನವನ್ನಾಗಿ ಆಚರಿಸಬೇಕೆಂದು 4 ಎಡಪಕ್ಷಗಳಾದ ಸಿಪಿಐ(ಎಂ) ಸಿ.ಪಿ.ಐ, ಫಾರ್ವರ್ಡ್ ಬ್ಲಾಕ್ ಮತ್ತು ಆರ್.ಎಸ್.ಪಿ ನಿರ್ಧರಿಸಿವೆ.

ಗುಜರಾತ್ : ಮೋದಿಯ ಅಗೌರವ ಯಾತ್ರೆ

ಮೋದಿಯ ಮಹತ್ವಾಕಾಂಕ್ಷೆಯ ಯಾರಿಗೂ ಗೌರವ ತರದ ಗುಜರಾತ್ ಗೌರವ ಯಾತ್ರೆಯ ಮುಕ್ತಾಯದ ಬೆನ್ನಲ್ಲೇ 'ಅಕ್ಷರ ಧಾಮ' ದೇವಾಲಯದಲ್ಲಿ ಕಗ್ಗೊಲೆ ನಡೆದಿದೆ. ಹಿಂದೆ 'ಗೋಧ್ರಾ' ಮತ್ತು ನಂತರದ ಘಟನೆಗಳಿಗೆ ಕ್ರಿಯೆಗೆ ಪ್ರತಿಕ್ರಿಯೆ ಎಂದು ವರ್ಣಿಸಲಾಗಿತ್ತು. ಈಗಿನದನ್ನು ಪ್ರತಿಕ್ರಿಯೆಗೆ ಪ್ರತಿಕ್ರಿಯೆ ಎನ್ನಲಾದೀತೆ? ಸ್ವತಃ 'ಮೋದಿ'ಯೇ ಗೌರವಯಾತ್ರೆಯ ಸಂದರ್ಭದಲ್ಲಿನ ಪ್ರಚೋದನಕಾರೀ ಭಾಷಣವೆನ್ನುವುದರಲ್ಲಿ ಯಾವ ಅನುಮಾನವೂ ಬೇಕಿಲ್ಲ. ಗುಜಾರಾತ್‌ನ್ನು 'ಹಿಂದುತ್ವದ ಕುಲುಮೆ'ಯನ್ನಾಗಿಸ ಹೊರಟ ಬಿ.ಜೆ.ಪಿ ಮತ್ತದರ ಪರಿವಾರಕ್ಕೆ ದೇಶದ ಸಂವಿಧಾನದ ಕಿಂಚಿತ್ತೂ ಪರಿವೇ ಇಲ್ಲ ಎನ್ನುವುದು ಈಗಾಗಲೇ ಸಾಬೀತಾಗಿದೆ. ಅಲ್ಲದೆ ಧರ್ಮವನ್ನು ದುರ್ಬಳಸುವ, ಎಲ್ಲ ಧಾರ್ಮಿಕ ಆಚರಣೆಗಳನ್ನು ಜನರ ಭಾವನೆಗಳನ್ನು ಕೆರಳಿಸಲೆಂದೇ ಬಳಸಿಕೊಳ್ಳುವ ಘಟನೆಗಳು ಪ್ರತಿನಿತ್ಯ ನಡೆಯುತ್ತಿವೆ. ಅಹ್ಮದಾಬಾದಿನಲ್ಲಿ ನಡೆದ ಜಗನ್ನಾಥಯಾತ್ರೆ, ರಾಜಕೋಟದ ಜನ್ಮಾಷ್ಟಮಿ ಮತ್ತು ಇತ್ತೀಚಿಗೆ ನಡೆದ ಗಣೇಶ ಉತ್ಸವ.. ಇವೆಲ್ಲವೂ ಬಳಕೆಯಾಗಿದ್ದು ಕೋಮುಭಾವನೆ ಕೆರಳಿಸಲು. ಗಣೇಶ ಮೆರವಣಿಗೆಯ ಗಲಭೆಯಲ್ಲಿ ವಡೋದರದಲ್ಲಿ 4 ಮಂದಿ ಸತ್ತು 20 ಮಂದಿ ಗಾಯಗೊಂಡರು. ಈಗಾಗಲೇ ಪ್ರಾಕೃತಿಕ ವಿಕೋಪದಿಂದ, ಗೋಧ್ರಾ, ನಂತರದ ಹತ್ಯಾಕಾಂಡದಿಂದ ತಲ್ಲಣಿಸಿದ ಜನರನ್ನು ಸದಾ ಆತಂಕದಲ್ಲಿಯೇ ಉಳಿಸುವ, ಆ ಮೂಲಕ ಚುನಾವಣೆಯನ್ನು ಗೆಲ್ಲುವ ಬಿ.ಜೆ.ಪಿಯ ಹೇಯ ರಾಜಕೀಯ ಅಧಿಕಾರದಾಸೆಗೆ ಕಡಿವಾಣ ಹಾಕುವವರು ಯಾರು? ಜನರ ಉತ್ತರ ಸ್ಪಷ್ಟವಾಗಿರಬೇಕು.

ತಮ್ಮ ಕೃತ್ಯಗಳ ಬಗ್ಗೆ ಕಿಂಚಿತ್ತೂ ಅಳುಕಿಲ್ಲದ ನಾಯಕರು



ಭೂಮಿ 'ಅತಿಕ್ರಮಣದಾರರು'

ಸಂಕಷ್ಟದಲ್ಲಿ ಉತ್ತರ ಕನ್ನಡ ಜಿಲ್ಲೆಯೊಂದರಲ್ಲೇ 90 ಸಾವಿರ ಕುಟುಂಬ ಬೀದಿ ಪಾಲಾಗಿರುವ ಭೂಮಿ ಅತಿಕ್ರಮಣಕಾರರು

ಹತ್ತಾರು ವರುಷಗಳಿಂದ ನೆಲೆ ನಿಂತು ನೆಲ ಉತ್ತು, ಜೀವನ ಸಾಗಿಸುತ್ತಿರುವ ಮಣ್ಣಿನ ಮಕ್ಕಳಿಗೆ ಈಗ ಸಿಡಿಲುಬಡಿದ ಆಘಾತ. ನಿಂತ ನೆಲದಿಂದಲೇ ಇವರನ್ನು ಹೊರಗೋಡಿಸುವ ಕೋರ್ಟ್ ಆದೇಶ. ಏನೂ ಮಾಡದ ಬೇಜವಾಬ್ದಾರಿ ಸರ್ಕಾರ, ಅತ್ಯಂತ ಅತಂತ್ರ ಸ್ಥಿತಿಯಲ್ಲಿರುವ ಭೂಮಿ ಅತಿಕ್ರಮಣಕಾರರು ಉಳಿವಿಗಾಗಿ ಹೋರಾಟ ಸಾರಿದ್ದಾರೆ. ರಾಜ್ಯಾದ್ಯಂತ ಲಕ್ಷಾಂತರ ಜನ ಬೀದಿ ಪಾಲಾಗುವ ಈ ದುರಂತದ ಒಳ ಹೊರಗುಗಳನ್ನು ಇಲ್ಲಿ ಲೇಖಕರು ಬಿಡಿಸಿಟ್ಟಿದ್ದಾರೆ.

ವಿಠ್ಠಲ ಭಂಡಾರಿ

ಓಂದಿದ್ದ ಮನೆ ಎರಡಾಗಿದೆ. ಎರಡು ನಾಲ್ಕಾಗಿದೆ. ನಾಲ್ಕು ಹದಿನಾರಾಗಿದೆ. ಆದರೆ ಕುಟುಂಬಕ್ಕೊಂದು ಉದ್ಯೋಗ ಇಲ್ಲ. ಇರಲು ಮನೆ ಇಲ್ಲ. ಸ್ವಂತದ್ದೆನ್ನುವ ಭೂಮಿ ಇಲ್ಲ. ಕೃಷಿ ಪ್ರಧಾನ ಕುಟುಂಬದಲ್ಲಿ ಬೆಳೆದವರಿಗೆ, ಕೃಷಿ ಬಿಟ್ಟು ಬೇರೆ ಉದ್ಯೋಗದಲ್ಲಿ 'ಗತಿ' ಇಲ್ಲ. ಸಾವಿರಾರು ಹೆಕ್ಟೇರ್ ಕೃಷಿಯೋಗ್ಯ ಪಾಳುಭೂಮಿ ಇದ್ದರೂ ಸರ್ಕಾರ ಸ್ವತಃ ಭೂಮಿಯನ್ನು ಒದಗಿಸುವುದಿಲ್ಲ. ಭೂಮಿ ಇದ್ದ ಕೆಲವರು ನೆರೆ ಹಾವಳಿಯಿಂದ ಮನೆ ಕಳೆದುಕೊಂಡರು. ಜಿಲ್ಲೆಗೆ ಬಂದ ವಿವಿಧ ಯೋಜನೆಗಳಿಂದ ಕೃಷಿಭೂಮಿ, ಆರ್ಥಿಕ ನೆಲೆ ಕಳೆದುಕೊಂಡೆವು. ಅನ್ನ ಬೇಯಿಸಲು, ಚಳಿ-ಗಾಳಿ, ಮಳೆಯಿಂದ ರಕ್ಷಿಸಿಕೊಳ್ಳಲು ಮಕ್ಕಳನ್ನು ಶಾಲೆಗೆ ಕಳುಹಿಸಲು, ಮದುವೆ ಮಾಡಲು, ಇತ್ಯಾದಿಗಳಿಗಾಗಿ ನಮಗೊಂದು ಸೂರು ಬೇಕೆ ಬೇಕು. ಹಾಗಾಗಿ ಖಾಲಿ ಇದ್ದ ಭೂಮಿಯನ್ನು ಅತಿಕ್ರಮಿಸಿದೆವು, ಮನೆ ಕಟ್ಟಿದೆವು, ತೋಟ ಬೆಳೆಸಿದೆವು. (ಹೆಚ್ಚಿನವು ಹಿಂದೊಂದು ಕಾಲದಲ್ಲಿ ಸಾಗುವಳಿಯಾದ ಭೂಮಿಯೇ ಆಗಿದೆ). ಹೀಗೆ ನನ್ನ ಮತ್ತು ನನ್ನ ಕುಟುಂಬದ ಭದ್ರತೆಯ ಕನಸು ಕಂಡಿದ್ದು ತಪ್ಪೇ? ಎಂದು ಕೇಳುತ್ತಿದ್ದಾರೆ ಉತ್ತರ ಕನ್ನಡ ಜಿಲ್ಲೆಯ ಸುಮಾರು 90 ಸಾವಿರ ಕುಟುಂಬಗಳು.

ಪ್ರತಿಯೊಬ್ಬರಿಗೂ ತುಂಡು ಭೂಮಿ, ವಾಸಕ್ಕೊಂದು ಮನೆ, ಊಟಕ್ಕೆ ಅನ್ನ ಕೊಡುವುದಾಗಿ ಭರವಸೆ ಕೊಡುತ್ತಾ ವಿವಿಧ ಯೋಜನೆ ಪ್ರಕಟಿಸಿ ಪ್ರಚಾರ ಗಿಟ್ಟಿಸಿಕೊಳ್ಳುತ್ತಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸ್ವಂತ ಪರಿಶ್ರಮದಿಂದ ಮನೆ ಮಾಡಿಕೊಂಡ ಜನರನ್ನೇ ಒಕ್ಕಲೆಬ್ಬಿಸಲು ಮುಂದಾಗಿರುವುದು ಅವರ ಬದುಕುವ ಹಕ್ಕನ್ನೇ ಕಸಿದುಕೊಂಡಂತಾಗುವುದಿಲ್ಲವೇ? ಬೇರೆ ದೇಶದ ನಿರಾಶ್ರಿತರಿಗೆ ಮಾನವೀಯ ನೆಲೆಯಲ್ಲಿ ಮತ್ತು ರಾಜಕೀಯ ಹಿನ್ನೆಲೆಯಲ್ಲಿ ಭೂಮಿಯನ್ನು ಹಂಚುವ ಸರ್ಕಾರ ಇಲ್ಲೇ ಹುಟ್ಟಿ ಬೆಳೆದ ರೈತರ ಭೂಮಿ ಕಸಿದು ಕೊಂಡು ನಿರಾಶ್ರಿತರನ್ನಾಗಿ ಮಾಡುವುದೇಕೆ? ಮಕ್ಕಳಂತೆ ಸಾಕಿ ಬೆಳೆಸಿದ ಅಡಿಕೆ, ತೆಂಗು, ಬಾಳೆ, ಗೇರು ಮರ ಗಿಡಗಳನ್ನು ಕಡಿದು ನಾಶ ಮಾಡುವುದನ್ನು ನೋಡುತ್ತಿರುವುದಕ್ಕಿಂತ ಪ್ರತಿಭಟಿಸಿ ಜೈಲು ಸೇರುವುದೇ ಉತ್ತಮವಲ್ಲವೇ? ಎಂದು ಕೇಳುತ್ತಿದ್ದಾರೆ ಬಡ ಅತಿಕ್ರಮಣ ಸಾಗುವಳಿದಾರರು.

ಅಡಕತ್ತರಿಯಲ್ಲಿ

ಒಂದು ವೇಳೆ ಭೂಮಿ ಬಿಟ್ಟರೆ ಬೀದಿಯೇ ಗತಿ; ಭಿಕ್ಷೆ ಬೇಡಬೇಕು. ಭೂಮಿ ಬಿಡದಿದ್ದರೆ ಸುಪ್ರೀಂಕೋರ್ಟ್ ಆದೇಶ ತಿರಸ್ಕರಿಸಿದ್ದಾರೆಂದು ಜೈಲು, ದಂಡ. ಸಾಗುವಳಿದಾರ ಅಡಕತ್ತರಿಯಲ್ಲಿ ಸಿಕ್ಕ ಅಡಿಕೆಯಾಗಿದ್ದಾನೆ. ಓಟು ಪಡೆದ ಮುಖ್ಯ ಸ್ಥಾನದಲ್ಲಿರುವವರು ತಲೆ ಮರೆಸಿಕೊಂಡಿದ್ದಾರೆ. ಕೆಲವರು ಭರವಸೆ ಕೊಡುತ್ತಿದ್ದಾರೆ. ಇನ್ನೆಷ್ಟು ದಿನ ಈ ಭರವಸೆ ನಂಬಿ ಬದುಕಬೇಕು ಎಂಬುದು ರೈತರ ಪ್ರಶ್ನೆ. ಇಷ್ಟು ದಿನ ಭರವಸೆ ನಂಬಿ ಕುಳಿತ ಜನ ಇಂದು ಬೀದಿಗಿಳಿದಿದ್ದಾರೆ. ಉತ್ತರ ಕನ್ನಡದ ತುಂಬಾ ಪ್ರತಿಭಟನೆಯ ಕಾವು ಏರುತ್ತಿದೆ. ಹಳ್ಳಿ ಹಳ್ಳಿಗಳಲ್ಲಿ ಹೋರಾಟ ಪ್ರಾರಂಭ ಆಗಿದೆ.

ಯಾಕೆ ಈ ಸಮಸ್ಯೆ?

9.5.2002 ರಂದು ಸುಪ್ರಿಂ ಕೋರ್ಟ್ ಹೊರಡಿಸಿದ ಆದೇಶದ ಹಿನ್ನೆಲೆಯಲ್ಲಿ 27.4.1978 ರ ನಂತರ ದೇಶದ ಕಾಯ್ದಿಟ್ಟ ಅರಣ್ಯ ಪ್ರದೇಶದಲ್ಲಿ ಅತಿಕ್ರಮಣ ಮಾಡಿದ ಎಲ್ಲಾ ಭೂಮಿಯನ್ನು ಸೆಪ್ಟೆಂಬರ್ 31 ರ ಒಳಗೆ ತೆರವು ಗೊಳಿಸುವಂತೆ ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯದ ಮುಖ್ಯ ಕಾರ್ಯದರ್ಶಿ ಎಲ್ಲಾ ರಾಜ್ಯ ಸರ್ಕಾರಗಳಿಗೆ ಆದೇಶಿಸಿದ್ದಾರೆ.

ಗೋದವರ್ಮನ್ ತಿರುಮಲ ಪಾದ ಎನ್ನುವವರು 1996 ರಲ್ಲಿ ಸುಪ್ರಿಂ ಕೋರ್ಟ್‌ನಲ್ಲಿ ಒಂದು ಮೊಕದ್ದಮೆ ದಾಖಲಿಸಿ ದೇಶದಲ್ಲಿ ಅರಣ್ಯ ಅವ್ಯಾಹತವಾಗಿ ಕಡಿದು ನಾಶ ಆಗುತ್ತಿದೆ. ಅದನ್ನು ತಡೆದು ಅತಿಕ್ರಮಣ ತೆರವುಗೊಳಿಸುವಂತೆ ಕೇಳಿದರು. ಈ ಮೊಕದ್ದಮೆಯಲ್ಲಿ ತೀರ್ಪಿತ್ತ ನ್ಯಾಯಾಲಯ 27.4.78 ರ ನಂತರದ ಅತಿಕ್ರಮಣವನ್ನು ತೆರವುಗೊಳಿಸುವಂತೆ ರಾಜ್ಯ ಸರ್ಕಾರಗಳಿಗೆ ಆದೇಶಿಸಿತು. ರಾಜ್ಯ ಸರ್ಕಾರ ಇದರಲ್ಲಿ ವಿಫಲ ಆಗಿದೆ ಎಂದು ತಿರುಮಲಪಾದ (ಬಲಿಯನ್ನು ಪಾತಾಳಕ್ಕೊತ್ತಿದ ವಾಮನ ಪಾದದಂತೆ) ಮತ್ತೆ ಸುಪ್ರಿಂ ಕೋರ್ಟ್‌ಗೆ ಮನವಿ ಮಾಡಿಕೊಂಡ ನಂತರ ನ್ಯಾಯಾಲಯ ಕಟ್ಟುನಿಟ್ಟಿನ ಆದೇಶ ಜಾರಿಗೊಳಿಸಿದೆ.

ರಾಜ್ಯ ಸರ್ಕಾರ ಈ ಆದೇಶವನ್ನು ಒಪ್ಪಿಕೊಂಡು 3 ಹಂತದಲ್ಲಿ ತೆರವು ಗೊಳಿಸುವ ಯೋಜನೆಯನ್ನು (ಮೊದಲಹಂತ ಬೇಲಿ ತೆಗೆಯುವುದು, ಎರಡನೇ ಹಂತ ಮರಗಿಡಗಳನ್ನು ನಾಶ ಮಾಡುವುದು, ಮೂರನೇ ಹಂತ ಮನೆಯನ್ನು ತೆಗೆಯುವುದು) ಮುಂದಿಟ್ಟು ಸ್ವಲ್ಪ ಸಮಯಾವಕಾಶ ಕೇಳಿದೆ. ಅದಕ್ಕಾಗಿ ಮಾರ್ಚ್ 2003 ರ ವರೆಗೆ ಅವಧಿ ನೀಡಲಾಗಿದೆ. ತನ್ನ ಅಧಿಕಾರಿಗಳಿಗೆ ತಕ್ಷಣ ಕಾರ್ಯೋನ್ಮುಖವಾಗಬೇಕೆಂದು ಆದೇಶಿಸಿರುವ ಸರ್ಕಾರ ತೆರವು ಕಾರ್ಯಕ್ಕಾಗಿ ಜಿಲ್ಲಾಧಿಕಾರಿ, ಪೋಲೀಸ್ ವರಿಷ್ಠಾಧಿಕಾರಿ ಮತ್ತು ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಇತರ ಅರಣ್ಯಾಧಿಕಾರಿಗಳನ್ನೊಳಗೊಂಡ ಸಮಿತಿ ರಚಿಸಿಕೊಳ್ಳುತ್ತಿದೆ. ಕರ್ನಾಟಕ ಅರಣ್ಯ ಕಾಯ್ದೆ 64(ಎ) ದ ಅಡಿಯಲ್ಲಿ ಗುನ್ಹೆ ದಾಖಲಿಸಿಕೊಂಡು ಹೊಟ್ಟೆ ಪಾಡಿಗಾಗಿ ತೋಟ ಬೆಳೆಸಿದ ರೈತರನ್ನು ಅಪರಾಧಿಯನ್ನಾಗಿಸುವ ಪ್ರಯತ್ನ ನಡೆಯುತ್ತಿದೆ. ಅರಣ್ಯ ಕಳ್ಳತನ ಮಾಡುವವರು, ನೂರಾರು ಎಕರೆ ಲೂಟಿ ಮಾಡುವವರು, ವಿವಿಧ ಯೋಜನೆಯ ಹೆಸರಲ್ಲಿ ಭೂಮಿ ಲಪಟಾಯಿಸುವವರು ಈ ದೇಶದಲ್ಲಿ ಅಪರಾಧಿಗಳಲ್ಲ. 5-10 ಗುಂಟೆ ಜಾಗದಲ್ಲಿ ಮನೆ ಕಟ್ಟಿಕೊಂಡವರು, ಅರ್ಧ ಎಕರೆ-ಒಂದು ಎಕರೆ ಅಡಿಕೆ ತೆಂಗು ಬೆಳೆದು ಮಾನವಂತರಾಗಿ ಬದುಕಲು ಪ್ರಯತ್ನಿಸಿದವರು ಕ್ರಿಮಿನಲ್ ಅಪರಾಧಿಗಳಾಗುವ ವಿಪರ್ಯಾಸ ಮತ್ತು ದುರಂತಕ್ಕೆ ಏನನ್ನೋಣ!

ಸರ್ಕಾರ ಏನು ಮಾಡುತ್ತಿದೆ?

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಪ್ರಯತ್ನಿಸುತ್ತಿವೆ. ಸುಪ್ರೀಂ ಕೋರ್ಟ್‌ನ ಆದೇಶ ಬಂದಾಗ ಕೇಂದ್ರದ ಬಿಜೆಪಿ ಸರ್ಕಾರ ನ್ಯಾಯಲಯದಲ್ಲಿ ಇನ್ನೊಂದು ಮೇಲ್ಮನವಿ ಸಲ್ಲಿಸಬಹುದಾಗಿತ್ತು. ಅತಿಕ್ರಮಣದ ನಿಜಾಂಶಗಳನ್ನು ತಿಳಿಸಬಹುದಾಗಿತ್ತು. ಸಂಬಂಧ ಪಟ್ಟ ರಾಜ್ಯಗಳ ನೆರವು ಪಡೆದು ಕಾನೂನು ತಿದ್ದುಪಡಿಯ ಸುಗ್ರೀವಾಜ್ಞೆಯನ್ನು ಹೊರಡಿಸಬಹುದಾಗಿತ್ತು. ಯಾಕೆಂದರೆ ಇದು ಕರ್ನಾಟಕದ ಪ್ರಶ್ನೆ ಮಾತ್ರವಲ್ಲ. ಎಲ್ಲಾ ರಾಜ್ಯಗಳಲ್ಲಿಯೂ ಇದೊಂದು ಸಮಸ್ಯೆಯಾಗಿದೆ.

ಬಿಜೆಪಿ ಸರ್ಕಾರ ಏನೂ ಮಾಡಿಲ್ಲವೆಂದು ಕರ್ನಾಟಕದ ಕಾಂಗ್ರೆ ಸರ್ಕಾರ ಸುಮ್ಮನೆ ಕುಳಿತುಕೊಳ್ಳಬೇಕಾಗಿರಲಿಲ್ಲ. ಕೇಂದ್ರದ ಮೇಲೆ ಒತ್ತಡ ತರುವ, ಸ್ವತಃ ತಾನೇ ಸುಪ್ರೀಂ ಕೋರ್ಟ್‌ಗೆ ಪುನರ್‌ಪರಿಶೀಲಿಸುವಂತೆ ಮೊರೆ ಹೋಗುವ ಕೆಲಸ ಮಾಡಬಹುದಾಗಿತ್ತು. ಕಾವೇರಿ ಸಮಸ್ಯೆಯಲ್ಲಿ ಹೀಗೆ ಮಾಡಬಹುದಾದರೆ ಅತಿಕ್ರಮಣದ ವಿಷಯದಲ್ಲಿ ಯಾಕೆ ಮಾಡಬಾರದು?

1994 ರಲ್ಲಿ ಅತಿಕ್ರಮಣ ಸಾಗುವಳಿದಾರರಿಗೆ ನಮೂನೆ ಮೂರರಲ್ಲಿ ಅರ್ಜಿ ಸಲ್ಲಿಸಲು ತಿಳಿಸಿತ್ತು. ಕೇಂದ್ರ ಸರ್ಕಾರಕ್ಕೆ ಸಕ್ರಮಗೊಳಿಸಲು ಅತಿಕ್ರಮಣದಾರರ ನಿಯೋಗ ಮನವಿ ಮಾಡಿಕೊಂಡಾಗ 1985 ರವರೆಗಿನ ಅತಿಕ್ರಮಣ ಮಂಜೂರಿ ಬಗ್ಗೆ ಅಂದಿನ ಕೇಂದ್ರ ಸರ್ಕಾರ ಒಪ್ಪಿರುವುದಾಗಿ ಪತ್ರಿಕೆಯಲ್ಲಿ ಬಂದಿತ್ತು. ನಂತರ 1985 ಡಿಸೆಂಬರ್ ಒಳಗೆ ನಮೂನೆ 6 ರಲ್ಲಿ ಅರ್ಜಿ ಸಲ್ಲಿಸುವಂತೆ ಮತ್ತು ನಂತರದ ಪ್ರಕರಣಕ್ಕೆ ದಂಡ-ಸಜೆ ಮಾಡುವುದಾಗಿ ಅಂದಿನ ಸರ್ಕಾರ ಹೇಳಿತ್ತು. 1994-95 ರಲ್ಲಿ ವಲಯ ಅರಣ್ಯಾಧಿಕಾರಿಗಳು ಅತಿಕ್ರಮಣ ಸಾಗುವಳಿದಾರರಿಗೆ ದಾಖಲೆಪತ್ರ, ಹಿಡುವಳಿ ಪತ್ರ, ಉತ್ಪನ್ನ ಪ್ರಮಾಣ ಪತ್ರ ಹಾಗೂ ಅಫಿಡವಿಟ್ ನೀಡಲು ತಿಳಿಸಿದ್ದರು. ರೈತರು ಇದನ್ನೆಲ್ಲಾ ಹಾಜರು ಪಡಿಸಿದರೂ ಸರ್ಕಾರ ಇದನ್ನು ಮಂಜೂರು ಮಾಡಲು ಮುಂದಾಗಲಿಲ್ಲ. ಮೊದಲು ಯಾವುದೇ ಕ್ರಮ ಕೈಗೊಳ್ಳದೆ ಈಗ ಬೆಳೆ ಬಂದ ನಂತರ ಅದನ್ನು ಮುಗಿಸಲು ಹೊರಟಿರುವುದು ಮಾತ್ರ ಖಂಡನೀಯ ಮತ್ತು ಸರ್ಕಾರದ ರೈತ ವಿರೋಧಿ ನಿಲುವಾಗಿದೆ. 1985 ರ ನಂತರ ನಮ್ಮ ವ್ಯಾಪ್ತಿಯಲ್ಲಿ ಅತಿಕ್ರಮಣ ನಡೆದಿಲ್ಲವೆಂದು ಪ್ರತಿವರ್ಷ ಇಲಾಖೆ ವರದಿ ಕೊಡುತ್ತಲೇ ಬಂದಿದೆ.

ಇತ್ತೀಚೆಗೆ ಉ.ಕ.ಕ್ಕೆ ಅರಣ್ಯ ಸಚಿವರು ಬಂದಾಗ "ನೀವು ಅತಿಕ್ರಮಣ ತೆರವು ಗೊಳಿಸಿದರೆ ಜನ ಎಲ್ಲಿ ಹೋಗಬೇಕು" ಎಂದು ಪತ್ರಕರ್ತರು ಕೇಳಿದಾಗ "ಜನ ಮೊದಲು ಎಲ್ಲಿಂದ ಬಂದರೋ ಅಲ್ಲಿಗೆ ಹೋಗಲಿ" ಎನ್ನುವ ಬೇಜವಾಬ್ದಾರಿ ಹೇಳಿಕೆ ಕೊಟ್ಟರೆಂದು ವರದಿ ಆಗಿದೆ. ಆದರೆ ಈ ಮಾತಿಗೆ ಜನ ಹೀಗೆ ಹೇಳುತ್ತಿದ್ದಾರೆ - "ಈತ ಸಚಿವನಾಗುವ ಮೊದಲು ಎಲ್ಲಿದ್ದರೋ ಅಲ್ಲಿಗೆ ಪುನಃ ಕಳುಹಿಸಬೇಕಾಗುತ್ತದೆ. ಯಾಕೆಂದರೆ ಇವರು ಹುಟ್ಟುವಾಗಲೇ ಸಚಿವರಾಗಿರಲಿಲ್ಲವಲ್ಲ" ಎಂದು. ಮಂತ್ರಿಗಳಾಗಿ ಇಂತಹ ಬೇಜವಾಬ್ದಾರಿ ಹೇಳಿಕೆ ಕೊಡುವ ಬದಲು ಸರ್ಕಾರ ಸಾವಿರ ಕುಟುಂಬಗಳ ಸುಮಾರು 2-3 ಲಕ್ಷ ಜನರ ಕನಸನ್ನು ಬದುಕಿಸುವಲ್ಲಿ ಕ್ರಿಯಾತ್ಮಕವಾಗಿ ತೊಡಗಿಸಿಕೊಳ್ಳಬೇಕಾಗಿದೆ.

ಉತ್ತರ ಕನ್ನಡದ ವಿಶಿಷ್ಟ ಸ್ಥಿತಿಯೇನು?

ಅತಿಕ್ರಮಣ ತೆರವುಗೊಳಿಸುವುದರಿಂದ ಉತ್ತರಕನ್ನಡದ 90,000 ಕುಟುಂಬಗಳು ಬೀದಿಗೆ ಬೀಳಲಿದೆ. ಸುಮಾರು 3-4 ಲಕ್ಷ ಜನ ನೆಲೆ ಕಳೆದುಕೊಳ್ಳಲಿದ್ದಾರೆ. ರಾಜ್ಯದ ಬೇರೆ ಜಿಲ್ಲೆಗಳಲ್ಲಿ 25-50-100 ಎಕ್ರೆ ಭೂಮಿಯನ್ನು ಒಬ್ಬನೇ ಭೂಮಾಲಿಕ ಮಾಡಿಕೊಂಡಿದ್ದರೆ, ಉ.ಕ. ಜಿಲ್ಲೆಯಲ್ಲಿ ಶೇ. 50 ಜನ 5-10 ಗುಂಟೆ ಅತಿಕ್ರಮಿಸಿ ಮನೆ ಕಟ್ಟಿಕೊಂಡವರು. ಉಳಿದಂತೆ ಕೆಲವರು 1-2 ಎಕ್ರೆ ಭಾಗಾಯತ ಮಾಡಿಕೊಂಡವರಿದ್ದಾರೆ. ಇದರ ಹೊರತಾಗಿ ನೂರಾರು ಎಕ್ರೆ ಇರುವ ಭೂಮಾಲಿಕರು ಇಲ್ಲಿ ಇಲ್ಲ.

ಉ.ಕ. ಜಿಲ್ಲೆಯಲ್ಲಿ ಒಟ್ಟು ಭೂಮಿ 10,571 ಚ.ಕಿ.ಮೀ. ಅದರಲ್ಲಿ 8500 ಚ.ಕಿ.ಮೀ. ಅರಣ್ಯ ಪ್ರದೇಶ ಅಂದರೆ. ಶೇ. 80 ಭಾಗ ಅರಣ್ಯಭಾಗವಿದೆ. ಶೇ. 20 ಮಾತ್ರ ಕಂದಾಯ ಭೂಮಿ. ಈ ಕಂದಾಯ ಭೂಮಿಯಲ್ಲಿಯೇ (ಈಗಿರುವ ಜನಸಂಖ್ಯೆ) 14 ಲಕ್ಷ ಜನ ಇರಬೇಕೆಂದರೆ ತಲಾ 5 ಗುಂಟೆ ಜಾಗ



ಹೋರಾಟದ ಕಣದಲ್ಲಿ ಭೂಮಿ 'ಅತಿಕ್ರಮಣದಾರರು'

...ೀದಿ ಪಾಲಾಗಬೇಕೆ?

ಬರಬಹುದು. ಈ 5 ಗುಂಟೆಯಲ್ಲಿಯೇ ಮನೆ, ಶೌಚಾಲಯ, ಕೊಟ್ಟಿಗೆ, ತೆಂಗು-ಅಡಿಕೆ ಬಾಳೆಗಳನ್ನೊಳಗೊಂಡ ತೋಟವನ್ನು ಮಾಡಿಕೊಳ್ಳಬೇಕು. ಉತ್ತರ ಕನ್ನಡ ಜಿಲ್ಲೆಯ ಪಶ್ಚಿಮದ ಭಾಗ ಪೂರ್ತಿ ಕರಾವಳಿಯಾಗಿದ್ದು ಸಮುದ್ರದಿಂದ 500ಮೀಟರ್ ಸಿಆರ್‌ಜೆಡ್ ವ್ಯಾಪ್ತಿಗೆ ಬರುತ್ತಿದೆ. ಇಲ್ಲಿ ಮನೆ ಇತ್ಯಾದಿ ಅಭಿವೃದ್ಧಿ ಕಾರ್ಯಮಾಡಲು ನಿರ್ಬಂಧಿಸಲಾಗಿದೆ. ಇದರೊಂದಿಗೆ ಜಿಲ್ಲೆಗೆ ಬಂದ ಹಲವಾರು ಯೋಜನೆಗಳಾದ ಸೀಬರ್ಡ್, ಕೈಗಾ, ತದಡಿಬಂದರು ಇತ್ಯಾದಿಗಳಿಗಾಗಿ ಕೃಷಿ ಯೋಗ್ಯ ಭೂಮಿ ಕಳೆದುಕೊಂಡಿದ್ದಾನೆ. ಆಗಿರುವಾಗ 7 ಲಕ್ಷ ಜನಸಂಖ್ಯೆ ಇರುವಾಗಲೂ ಶೇ. 20 ರೆವಿನ್ಯೂ ಭೂಮಿಯಲ್ಲಿ ವಾಸವಾಗಬೇಕು ಮತ್ತು 14 ಲಕ್ಷ ಆದಮೇಲೂ ರೆವಿನ್ಯೂ ಜಾಗದಲ್ಲಿಯೇ ವಾಸಿಸಬೇಕು ಎನ್ನುವುದು ಎಷ್ಟು ಪ್ರಾಯೋಗಿಕ?

ಇನ್ನೊಂದು ದೊಡ್ಡ ಪ್ರಶ್ನೆ ಇರುವುದು ಉದ್ಯೋಗದ್ದು. ಮನೆಗೊಂದು ಉದ್ಯೋಗ ಇದ್ದರೆ ಸರಿ. ಆದರೆ ಹಾಗಾಗಲಿಲ್ಲ. ಕೈಗಾರಿಕಾ ಪ್ರಧಾನ ಜಿಲ್ಲೆ ಆಗದಿರುವುದರಿಂದ ಮತ್ತು ಇದ್ದ ಕೈಗಾರಿಕೆ ಮುಚ್ಚುತ್ತಿರುವುದರಿಂದ ಈ ಜಿಲ್ಲೆಯ ಜನ ಬೂಮಿ ಅತಿಕ್ರಮಿಸಿ ಸಾಗುವಳಿ ಮಾಡದೆ ಬೇರೆ ಮಾರ್ಗ ಇಲ್ಲ. ಬದುಕಬೇಕು, ಸಂಸಾರ ನಡೆಸಬೇಕು ಎಂದರೆ ಆತ ಅನಿವಾರ್ಯವಾಗಿ ಅತಿಕ್ರಮಣ ಮಾಡಿಕೊಳ್ಳಲೇಬೇಕಾಗಿದೆ. ಹಾಗಾಗಿ ಇಂತಹ ಸನ್ನಿವೇಶ ಸೃಷ್ಟಿಸಿರುವ ಸರ್ಕಾರವೇ ಈ ಹೊಣೆಯನ್ನು ಹೊತ್ತುಕೊಳ್ಳಬೇಕಾಗಿದೆ.

ಜಿಲ್ಲೆಯ ವಿವಿಧ ಯೋಜನೆಗಳಾದ ಸೀಬರ್ಡ್, ಕೈಗಾ, ಕೊಂಕಣರೈಲ್ವೆ, ಶರಾವತಿ ಟೆಲರೀಸ್ ಇತ್ಯಾದಿಗಳಿಗಾಗಿ ನೂರಾರು ಹೆಕ್ಟೇರ್ ಭೂಮಿ ಕೇಳಿರುವ ರಾಜ್ಯ ಸರ್ಕಾರ, ಮಂಜೂರು ಮಾಡಿರುವ ಕೇಂದ್ರ ಸರ್ಕಾರ ದುಡಿದುಣ್ಣುವ ರೈತನಿಗೆ ಭೂಮಿ ಕೊಡಲು ಹಿಂದೇಟು ಹಾಕುತ್ತಿದೆ.


ಯಲ್ಲಾಪುರ ವಲಯದಲ್ಲು 4391 ಹೆಕ್ಟೇರ್, ಶಿರಸಿ - 4248.16 ಹೊನ್ನಾವರ 3142, ಕಾರವಾರ 557.54 ಹೆ, ಹಳಿಯಾಳ 754.40 ಹೆ., ದಾಂಡೇಲಿ 7854 ಹೆಕ್ಟೇರ್ ಅತಿಕ್ರಮಣ ಜಾಗ ಇದೆ. ಇದು ಸರ್ಕಾರಿ ಲೆಕ್ಕ. ನಿಜವಾದ ಲೆಕ್ಕ ಇದರ ನಾಲ್ಕರಷ್ಟಿದೆ. 1985ರ ನಂತರದ ಅತಿಕ್ರಮಣದ ಲೆಕ್ಕವನ್ನು ಇಲಾಖೆ ದಾಖಲಿಸಿಲ್ಲ. ಇಲಾಖೆ ದಂಡದ ರಶೀದಿ ನೀಡಿಲ್ಲ. ಅನೇಕರಲ್ಲಿ ಭಯದಿಂದ ಜಮೀನ ಮಾಡಿದರೂ ಅರ್ಜಿಯನ್ನೂ ಹಾಕಿಲ್ಲ. ಇಲಾಖೆಯ ನೌಕರರಿಗೆ ಒಂದಿಷ್ಟು ಲಂಚಕೊಟ್ಟುಕೊಂಡು ಸುಮ್ಮನೆ ಕುಳಿತಿದ್ದಾರೆ. ಅವರ ಅನಕ್ಷರತೆ, ಅಜ್ಞಾನ, ಇಲಾಖೆಯವರ ಹಣದ ಮೇಲಿನ ಆಸೆ ಸಮಸ್ಯೆಯನ್ನು ಇನ್ನಷ್ಟು ಉಲ್ಬಣಗೊಳಿಸಿವೆ. 1978ರ ಪೂರ್ವದ ಅತಿಕ್ರಮಣ ಜಾಗತ ಕೂಡ ಎಲ್ಲರಿಗೂ ಮಂಜೂರಿ ಆಗಿಲ್ಲ. ಸುಮಾರು ಶೇ. 40 ಪ್ರಕರಣ ಹಾಗೇ ಇದೆ. ಮಂಜೂರಿಗೆ ಅವಶ್ಯಕವಾದ ದಂಡದ ಪಾವತಿಯನ್ನು ಇಲಾಖೆ ಕೇಳುತ್ತಿವೆ. ಆದರೆ ಉಳಿಯಲು ಪಕ್ಕಾ ಇಲ್ಲದ ಈ ಜನ ಸೋಗೆ, ಮಡ್ಡಿನ ಮನೆಯಲ್ಲಿ, ತಾಳೆಗರಿಯ ಹೊದಿಕೆಯ ಮನೆಯಲ್ಲಿರುವವರು ಅಂತಹ ದಂಡದ ರಶೀದಿ ಕಳೆದುಕೊಂಡಿದ್ದಾರೆ. ಈ ರಶೀದಿ ಕಾಯ್ದಿರಿಸಿಕೊಳ್ಳಬೇಕೆನ್ನುವುದೂ ಅನೇಕರಿಗೆ ಗೊತ್ತಿಲ್ಲ. ಈ ತಾಂತ್ರಿಕ ಕಾರಣ ಕೊಟ್ಟು ಅನೇಕ ಪ್ರಕರಣವನ್ನು ತಿರಸ್ಕರಿಸುತ್ತಿದ್ದಾರೆ. ಇದಕ್ಕಾಗಿ ತಜ್ಞರ ಸಮಿತಿ ರಚಿಸ ಬೇಕಾಗಿದೆ. ಮರದ ಆಯಸ್ಸನ್ನು ವೈಜ್ಞಾನಿಕವಾಗಿ ನಿರ್ಧರಿಸುವ ಕೆಲಸ ಅದಲ್ಲಿ ಒಂದಿಷ್ಟು ಜನಕ್ಕೆ ನ್ಯಾಯ ಸಿಗಬಹುದು. ಪಂಚಾಯತ್ ಹಾಕಿದ ಮನೆ ಕರ, ಕೊಟ್ಟ ಮನೆ ನಂಬರ್ ಆ ಪ್ರದೇಶದ ರಸ್ತೆಗೆ ವಿವಿಧ ಯೋಜನೆಯಲ್ಲಿ ಹಾಕಿದ ಖರ್ಚು, ಮತದಾರರ ಯಾದಿಯಲ್ಲಿ ಹೆಸರಿನ ಸೇರ್ಪಡೆ ಇತ್ಯಾದಿಗಳೆಲ್ಲವನ್ನೂ ಇಲಾಖೆ ದಾಖಲೆಯಾಗಿ ಪರಿಣಮಿಸ ಬೇಕು.

ಎಲ್ಲೆಲ್ಲಿ ಎಷ್ಟೆಷ್ಟು?

ಇದು ಕೇವಲ ಕರ್ನಾಟಕವನ್ನಷ್ಟೇ ಕಾಡುವ ಸಮಸ್ಯೆಯಲ್ಲ. ದೇಶದ ವಿವಿಧ ರಾಜ್ಯದಲ್ಲಿಯೂ ಇದು ಗಂಭೀರವಾಗಿದೆ. ಕರ್ನಾಟಕದಲ್ಲಿ 91,000 ಹೆಕ್ಟೇರ್, ಮಧ್ಯ ಪ್ರದೇಶ 1,52,000 ಹೆ., ಅಸ್ಸಾಂ 2,54,711 ಹೆ., ತಮಿಳುನಾಡು 18,600 ಹೆ. ಒರಿಸ್ಸಾ 47300 ಹೆ., ಪ.ಬಂಗಾಲ16,940 ಹೆ., ಮಹಾರಾಷ್ಟ್ರ 7300 ಹೆ., ಛತ್ತೀಸ್ ಗಢ 62270 ಹೆ. ಹೀಗೆ ದೇಶದಲ್ಲಿ ಒಟ್ಟು 7,25,861 ಹೆಕ್ಟೇರ್. ಇದು ಕೇವಲ ಸರ್ಕಾರಿ ಅಂಕಿಅಂಶ. ನಿಜವಾದ ಅತಿಕ್ರಮಣ ಭೂಮಿ ಇದರ ಮೂರರಷ್ಟಿದೆ. ಈ ಎಲ್ಲಾ ಭೂಮಿ ದಟ್ಟವಾದ ಅರಣ್ಯವನ್ನು ಕಡಿದು ಸಾಗುವಳಿ ಮಾಡಿದ್ದಲ್ಲ ಎನ್ನುವುದು ಮುಖ್ಯ.

ಆರ್ಥಿಕ ಕ್ಷೇತ್ರಕ್ಕೆ ಕೊಡುಗೆ :

ಸಾವಿರಾರು ಹೆಕ್ಟೇರ್ ಅತಿಕ್ರಮಣ ಭೂಮಿಯಲ್ಲಿ ಇಂದು ಅಡಿಕೆ, ತೆಂಗು, ನೀರು, ಇತ್ಯಾದಿಬೆಳೆಗಳನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಯು ಲಾಗುತ್ತಿದೆ. ಇದರಿಂದ ಸರ್ಕಾರಕ್ಕೆ ನೂರಾರು ಕೋಟಿ ರೂಪಾಯಿ ಆದಾಯಬರುತ್ತಿವೆ. ತೆಂಗು, ಅಡಿಕೆ, ಮಾವು, ಹಲಸು, ಗೇರು ಇತ್ಯಾದಿಗಳು ಹಸಿರು ಮರಗಳೇ ಆಗಿರುವುದರಿಂದ ಪರಿಸರ ಸಮತೋಲನವು ಸಾಧ್ಯವಿದೆ. ಹಾಗಾಗಿ ಬಂಜರು ಭೂಮಿ ಇಂದು ಹಸಿರಾಗಿ ಕಾಣುತ್ತಿದೆ. ಹೀಗೆ ಪರಿಸರ, ಆರ್ಥಿಕ, ವಾಣಿಜ್ಯ ರಂಗಕ್ಕೂ ಕೊಡುಗೆ ಕೊಟ್ಟಿರುವ ತೋಟವನ್ನು ಉಳಿಸ ಬೇಕಾಗಿದೆ. ಇನ್ನು ಮುಂದೆ ಅತಿಕ್ರಮಣ ಮಾಡದಂತೆ ಕಟ್ಟುನಿಟ್ಟಿನ ಕ್ರಮವಹಿಸಿ ಸರ್ಕಾರವೇ ಅಗತ್ಯಕ್ಕನುಗುಣ ವಾಗಿ ಕೊಡುವ ಕೆಲಸ ಆಗಬೇಕು.




ಇನ್ನಿಲ್ಲವೇ ತಲೇ ಮೇಲಿನ ಈ ಸೂರು

ಸುಪ್ರಿಂಕೋರ್ಟ್ ತೀರ್ಮಾನಗಳು ಮತ್ತು ಜಾರಿ

ಸುಪ್ರೀಂ ಕೋರ್ಟ್ ಮತ್ತು ಇತರ ನ್ಯಾಯಾಲಯ ಗಳ ಆದೇಶಗಳು ಜಾರಿಯಾಗುತ್ತಿವೆಯೇ ಎನ್ನುವುದು ಇನ್ನೊಂದು ಪ್ರಶ್ನೆ. ಕರ್ನಾಟಕ ಮತ್ತು ದೆಹಲಿಯ ಆಡಳಿತಾತ್ಮಕ ನ್ಯಾಯ ಮಂಡಳಿ ಅಂಗನವಾಡಿ ನೌಕರರಿಗೆ ಕನಿಷ್ಟ ಕೂಲಿ ಕೊಡಬೇಕೆಂದು ಆದೇಶಿಸಿತ್ತು. ಅದಕ್ಕೆ ಎಷ್ಟೇ ಹೋರಾಟ ಮಾಡಿದರೂ ಅದು ಜಾರಿಯಾಗಿಲ್ಲ.

ಮಸೀದಿಯಲ್ಲಿರುವ ಇಮಾಮರಿಗೆ ಸಮಾನವೇತನ ನಿದಿ ಮಾಡಬೇಕೆಂದು 1996 ರಲ್ಲಿ ಸುಪ್ರೀಂಕೋರ್ಟ್ ಆದೇಶಿಸಿದೆ. 27.9.2002 ರಂದು ಕರ್ನಾಟಕ ರಾಜ್ಯದ ಕಂದಾಯ ಇಲಾಖೆಯಲ್ಲಿರುವ ಉಗ್ರಾಣಗಳನ್ನು ಖಾಯಂ ಮಾಡಬೇಕು ಮತ್ತು ವೇತನ ನಿದಿ ಮಾಡಲು ಆದೇಶಿಸಿದೆ. ಅರೆಕಾಲಿಕ ಉಪನ್ಯಾಸಕರನ್ನು, ದಿನಗೂಲಿನೌಕರರನ್ನು ನಿಗದಿತ ಅವಧಿಯ ಆಧಾರದಲ್ಲಿ ಖಾಯಂಗೊಳಿಸಲು ನ್ಯಾಯಾಲಯ ಆದೇಶಿಸಿದೆ.



ಬೇಜವಾಬ್ದಾರಿ ಜನಪ್ರತಿನಿಧಿಗಳು ಮಾರ್ಗರೇಟ್ ಆಳ್ವ, ಸಚಿವ ದೇಶಪಾಂಡೆ

ಈ ಆದೇಶದಿಂದ ಹೆಚ್ಚು ಸಂತ್ರಸ್ತರಾಗುವವರು ಪರಿಶಿಷ್ಟ ಪಂಗಡ ಮತ್ತು ಬುಡಕಟ್ಟಿನ ಜನ, ತೀರಾ ಹಿಂದುಳಿದ ವರ್ಗದಿಂದ ಬಂದವರು. ಉತ್ತರ ಕನ್ನಡದ ಕಾಡಿನಲ್ಲಿ ಇಂದು ಕುಣಬಿಗಳು, ಗೊಂಡರು, ಸಿದ್ಧಿಗಳು, ಮರಾಠಿಗರು ಮೊದಲಾದವರಿದ್ದಾರೆ. ತಲೆತಲಾಂತರದಿಂದ ಅಲ್ಲಿ ಬದುಕಿದರೂ ಅವರಿಗೆ ಭೂಮಿ ಕೈತಪ್ಪಲಿದೆ. ಬ್ರಿಟೀಷರ ಕಾಲದಲ್ಲಿ 19ನೇ ಶತಮಾನದ ಕೊನೆ ಮತ್ತು 20ನೇ ಶತಮಾನದ ಪ್ರಾರಂಭದಲ್ಲಿ ಕಾಡಿನಲ್ಲಿದ್ದವರಿಗೆ (ಜೋಯ್ಡಾ, ಯಲ್ಲಾಪುರ, ಭಟ್ಕಳ ಮುಂತಾದ ಕಡೆ) ಕುಂಬ್ರಿ ಜಮೀನನ್ನು ಸರಕಾರ ಕೊಟ್ಟಿತ್ತು. ಅದಕ್ಕೆ ತೀರ್ವೆಯನ್ನು ಅವರು ತುಂಬುತ್ತಲೇ ಬಂದಿದ್ದಾರೆ. ಆದರೆ ಅವರು ಅದರಲ್ಲಿ ಆಹಾರ ಧಾನ್ಯಗಳನ್ನು ಬೆಳೆದರೇ ಹೊರತಾಗಿ ಮರ ಬೆಳೆಯಲಿಲ್ಲ. ಅರಣ್ಯ ಇಲಾಖೆ ಇಂತವರಿಗೂ ಕಿರುಕುಳ ಕೊಡಲು ಪ್ರಾರಂಭಿಸಿದೆ.

ಸುಪ್ರಿಂ ಕೋರ್ಟಿನ ಆದೇಶವನ್ನು ಸರಕಾರ ಸರಿಯಾಗಿ ಅರ್ಥ ಮಾಡಿಕೊಂಡಿದೆಯೇ ಎನ್ನುವ ಸಂಶಯ ಇದೆ. ಈ ಬಗ್ಗೆ ಅಂಕಣಕಾರ ರಾಜೀವ್ ಧವನ್' ಅವರು ಹೀಗೆ ಬರೆಯುತ್ತಾರೆ. "ಹಿಂದಾದರೆ ಸರ್ವೋಚ್ಚ ನ್ಯಾಯಾಲಯ ಬುಡಕಟ್ಟಿನವರನ್ನು ಜವಾಬ್ದಾರಿಯುತ ರೀತಿಯಲ್ಲಿ ರಕ್ಷಿಸಲು ಹಿಂದೆ ಮುಂದೆ ನೋಡುತ್ತಿರಲಿಲ್ಲ. ಬನವಾಸಿ ಸೇವಾಶ್ರಮ ಮೊಕದ್ದಮೆಯಲ್ಲಿ (1985-94) ನ್ಯಾಯಾಲಯ ವಿಶೇಷ ನ್ಯಾಯಾಲಯ ರಚಿಸಲು ಸೂಚಿಸಿತ್ತು ಮತ್ತು ಬುಡಕಟ್ಟಿನವರು ತಮ್ಮ ಜಮೀನನ್ನು ರಕ್ಷಿಸಿಕೊಳ್ಳಲು ಕಾನೂನು ಸಹಾಯ ಮಾಡಲು ಸೂಚಿಸಿತ್ತು, ಪ್ರದೀಪ ಪ್ರಭು ಮೊಕದ್ದಮೆಯಲ್ಲಿ (1995) ನ್ಯಾಯಾಲಯ ಮಹಾರಾಷ್ಟ್ರ ಸರ್ಕಾರಕ್ಕೆ ಸರಕಾರದ ಯೋಜನೆಯಂತೆ ಜಮೀನು ಇಲ್ಲದ ಆದಿವಾಸಿಗಳಿಗೆ ಹಕ್ಕನ್ನು ನಿರ್ಣಯಿಸಲು ಆದೇಶ ಮಾಡಿತ್ತು. ಸಮತಾ ಮೊಕದ್ದಮೆಯಲ್ಲಿ (1997) ಬಹುಸಂಖ್ಯೆಯ ನಿರ್ಣಯಗಳು ಆದಿವಾಸಿಗಳಿಗೆ ಜಮೀನು ಮತ್ತು ಅವರ ಸ್ಥಿತಿಗತಿ ನಿಭಾಯಿಸುವಲ್ಲಿ ಸಂಪನ್ಮೂಲಗಳನ್ನು ಅವರಿಗೆ ಕೊಡಬೇಕೆಂದು ಹೇಳಿದೆ. ಸರ್ವೋಚ್ಚ ನ್ಯಾಯಾಲಯ ತಾನು ಹಿಂದೆ ಆದಿವಾಸಿಗಳಿಗೆ ಕೊಟ್ಟ ಸಾಮಾಜಿಕ ನ್ಯಾಯದ ಬಾಗಿಲನ್ನು ಮುಚ್ಚಲಿಲ್ಲ ಎಂದು ನಾನು ನಂಬುತ್ತೇನೆ. ಈಗ ಸರಕಾರ ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ವಿಷಮಯಗೊಳಿಸಿ ತಪ್ಪು ಬಳಕೆ ಮಾಡಿ ಬುಡಕಟ್ಟಿನವರ ಮೇಲೆ ಭಯೋತ್ಪಾದನೆ ಮಾಡುತ್ತಿದೆ. ಈ ಕಾರ್ಯ ಶುರುವಾದದ್ದು ವಿಷಾದನೀಯವಾಗಿದೆ.('ಹಿಂದೂ' ಪತ್ರಿಕೆಯ ಅಂಕಣ)

ಹೋರಾಟವೊಂದೇ ಮಾರ್ಗವೆ?

ಉತ್ತರ ಕನ್ನಡದಲ್ಲಿ ಕಳೆದ 15 ದಿನಗಳಿಂದ ಹೋರಾಟ ಕಾವು ಪಡೆದುಕೊಳ್ಳುತ್ತಿದೆ. ಸಿರ್ಸಿ, ಯಲ್ಲಾಪುರ, ಸಿದ್ದಾಪುರ, ಹೊನ್ನಾವರ ಹೀಗೆ ಎಲ್ಲಾ ಕಡೆ ರೈತರು ಬೀದಿಗಿಳಿದಿದ್ದಾರೆ. ಈ ಹೋರಾಟವನ್ನು ರೂಪಿಸುವಲ್ಲಿ ಹಿಂದುಳಿದ ವರ್ಗದ ವೇದಿಕೆ, ಅರಣ್ಯ ಅತಿಕ್ರಮಣ ಹಿತರಕ್ಷಣಾ ಸಮಿತಿ, ಭಾರತ ಪ್ರಜಾಸತ್ತಾತ್ಮಕ ಯುವಜನಫೆಡರೇಶನ್ (DYFI) ಉಭಯ ಜನತಾದಳ, ಕರ್ನಾಟಕ ಪ್ರಾಂತ ರೈತ ಸಂಘ(KPRS), ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ (CPIM) ಮೊದಲಾದವರು ಮುತುವರ್ಜಿ ವಹಿಸುತ್ತಿದ್ದಾರೆ. ಬಿ.ಜೆ.ಪಿ ರಾಜ್ಯಸರ್ಕಾರವನ್ನು ತೆಗಳಲು, ಕಾಂಗ್ರೆ ಬಿಜೆಪಿಯನ್ನು ತೆಗಳಲು ಈ ಅವಕಾಶವನ್ನು ಬಳಸಿಕೊಳ್ಳುತ್ತಿದೆ. ರಾಜ್ಯ ಸರ್ಕಾರದಲ್ಲಿ ಮತ್ತು ಕೇಂದ್ರದಲ್ಲಿ ಅಧಿಕಾರದಲ್ಲಿರುವ ಪಕ್ಷಗಳಾದ ಕಾಂಗ್ರೆ, ಬಿಜೆಪಿ ಅಲ್ಲಿ ಒತ್ತಡ ತಂದು ಕಾನೂನು ತಿದ್ದುಪಡಿಗೆ ಮಾಡಿಸುವ ಬದಲು ತಾವೂ ಸಮಾವೇಶ ಮಾಡುತ್ತೇವೆ, ಪ್ರತಿಭಟನೆ ಮಾಡುತ್ತೇವೆ ಎಂದು ಕಣ್ಣೊರೆಸುವ ತಂತ್ರ ಮಾಡುತ್ತಿದ್ದಾರೆ. ಪ್ರತಿ ತಾಲೂಕಿನಲ್ಲಿಯೂ ಪ್ರತ್ಯೇಕ ಪ್ರತ್ಯೇಕವಾಗಿ ಹೋರಾಟ ವಿವಿಧ ಸಂಘಟನೆಗಳಡಿ ನಡೆಯುತ್ತಿದೆ. ಜಿಲ್ಲಾ ಮಟ್ಟದಲ್ಲಿ ನಡೆಯುವಾಗ ಇವೆಲ್ಲ ಕೂಡಿ ಪ್ರಬಲ ಹೋರಾಟ ರೂಪಿಸಿದಲ್ಲಿ ಮಾತ್ರ ಸಾಗುವಳಿದಾರರಿಗೆ ನ್ಯಾಯ ಒದಗಿಸಬಹುದು; ಅರಣ್ಯ ಕಾನೂನಿನ ತಿದ್ದುಪಡಿಗೆ ಸರ್ಕಾರ ಒಪ್ಪಿಕೊಳ್ಳಬಹುದು.

1) ಅರಣ್ಯ ಕಾಯ್ದೆ ತಿದ್ದುಪಡಿಗಾಗಿ ಸುಗ್ರಿವಾಜ್ಞೆ ಹೊರಡಿಸಬೇಕು. 2) ಅತಿಕ್ರಮಣ ಭೂಮಿಯ ಸಮೀಕ್ಷೆಗಾಗಿ ಆಯೋಗ ರಚಿಸಬೇಕು. 3) ಉತ್ತರ ಕನ್ನಡದಲ್ಲಿರುವ ಅರಣ್ಯಭೂಮಿ,

8ನೇ ಪುಟಕ್ಕೆ...

ಮೋಸ..... ಹಗರಣ.....

ಬರದಲ್ಲಿ ಬೆಂದ ಕೂಲಿ ಜನರ ಬೆವರ ಪಾಲನ್ನೇ ಕಬಳಿಸಲೆತ್ನಿಸಿದ

ಆಂಧ್ರ ಪ್ರದೇಶದ ಚಂದ್ರಬಾಬು ನಾಯ್ಡು

ಬರದ ದವಡೆಗೆ ಸಿಲುಕಿ ನಲುಗಿದ ಜನತೆಯ ನೆರವಿಗೆಂದು ಮೀಸಲಾದ ಅಕ್ಕಿಯನ್ನೇ ಕೂಲಿಕಾರರಿಗೆ ನೀಡದೇ ಅವರ ಹೆಸರಿನಲ್ಲಿ ಭಾರೀ ಭ್ರಷ್ಟಾಚಾರದ ಹಗರಣದಲ್ಲಿ ಆಂಧ್ರದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಸರ್ಕಾರ ತೊಡಗಿದೆ. ಇದರ ತನಿಖೆಗೂ ನಿರಾಕರಿಸಿರುವ ಭಂಡ ನಾಯ್ಡು ವಿರೋಧ ಪಕ್ಷಗಳ ಮೇಲೆ ಧಾಳಿ ಆರಂಭಿಸಿದ್ದಾರೆ. ಈ ನಿರ್ಲಜ್ಜತನದ ಹಗರಣ ವಿವರಿಸುವ ಲೇಖನ

ಕೆ.ಎಸ್.ಲಕ್ಷ್ಮಿ

ಆಂಧ್ರ ಪ್ರದೇಶ ರಾಜ್ಯದಲ್ಲಿ ಚಂದ್ರಬಾಬು ನಾಯ್ಡು ಸರ್ಕಾರದ ಜನವಿರೋಧಿ ಆಕ್ರಮಣಕಾರಿ ನೀತಿಗಳಿಂದ ಆತ್ಮಹತ್ಯೆಗೊಳಗಾದವರ, ಹಸಿವಿನಿಂದ ಸಾಯುತ್ತಿರುವವರ ಸಂಖ್ಯೆ ಅತ್ಯಧಿಕವಾಗಿದ್ದು, ದೇಶದಲ್ಲೇ ಅಗ್ರಸ್ಥಾನದಲ್ಲಿದೆ. ಬರದಿಂದ ತತ್ತರಿಸುತ್ತಿರುವ ರಾಜ್ಯದ ವಿವಿಧ ಜಿಲ್ಲೆಗಳ ಕೂಲಿಕಾರರಿಗೆ ಕೂಲಿಗಾಗಿ ಕಾಳು (FFWP) ಕಾರ್ಯಕ್ರಮದಡಿ ಕನಿಷ್ಠ ಆಹಾರ ಭದ್ರತೆ, ಕೂಲಿಯ ಭದ್ರತೆಯನ್ನು ಒದಗಿಸಬೇಕಿದ್ದ ಘನ ಸರ್ಕಾರದ ಆಡಳಿತ ಯಂತ್ರ, ಸಚಿವರುಗಳು, ಕೂಲಿ ಜನರ ಬೆವರಪಾಲನ್ನೇ ಕಬಳಿಸಲೆತ್ನಿಸಿದ ಹಗರಣವೊಂದು ಇತ್ತೀಚೆಗೆ ಬಯಲಾಗಿದೆ.

FFWP ಜಾರಿಯ ಬೆನ್ನಲ್ಲೆ ರೂಪುಗೊಂಡ ಭ್ರಷ್ಟಾಚಾರದ ಸರಪಳಿ-ರಾಜ್ಯ ಸರ್ಕಾರದ ಸಚಿವರನ್ನೊಳಗೊಂಡು, ತೆಲುಗುದೇಶಂ ಪಕ್ಷದ ವಿವಿಧ ಹಂತದ ಕಾರ್ಯಕರ್ತರು, ಅಧಿಕಾರಿಗಳು, ಕಂಟ್ರಾಕ್ಟರುಗಳು, ಅಕ್ಕಿ ಗಿರಣಿ ಮಾಲೀಕರು, ರೇಷನ್ ಡಿಪೋದಾರರನ್ನು ಆವರಿಸಿದೆ. ಚಂದ್ರಬಾಬು ನಾಯ್ಡು ಕ್ಷೇತ್ರವಾದ ಕುಪ್ಪಂ ಜಿಲ್ಲೆಯಿಂದಲೇ FFWP ಗೆ ಮೀಸಲಿಟ್ಟ ಅಕ್ಕಿ ಬೃಹತ್ ಪ್ರಮಾಣದಲ್ಲಿ ಲಾರಿಗಳ ಮೂಲಕ ಕರ್ನಾಟಕ, ತಮಿಳುನಾಡಿಗೆ ಸಾಗಿಸುವಾಗ ಸಿಕ್ಕಿಬಿದ್ದು, ಪಶ್ಚಿಮ ಗೋದಾವರಿ ಜಿಲ್ಲೆಯ ಸ್ಥಳೀಯ DSP, ವಿದ್ಯುತ್ ಮಂತ್ರಿಯ ಆತ್ಮೀಯನೂ ಆಗಿದ್ದು,



ಚಂದ್ರಬಾಬು ನಾಯ್ಡು

ಸಚಿವರ ನಿರ್ದೇಶನದ ಮೇಲೆ, ಲಾರಿಗಳಲ್ಲಿದ್ದ ಅಕ್ಕಿಯನ್ನು ಭತ್ತವೆಂದು ಸುಳ್ಳು ವರದಿ ರೂಪಿಸಿದ್ದ, ಅದೇ ಜಿಲ್ಲೆಯ ಜಿಲ್ಲಾಧಿಕಾರಿಗಳು ಅಕ್ರಮವಾಗಿ ಸಾಗಿಸುತ್ತಿದ್ದ, ಈ ಅಕ್ಕಿಯ ಲಾರಿಗಳನ್ನು ವಶಪಡಿಸಿಕೊಂಡಿದ್ದಾಗಿ ಸ್ಪಷ್ಟನೆಯನ್ನು ನೀಡಿದ್ದಾರೆ. ಈ ಸಾಗಾಣೆಯಲ್ಲಿ ಶಾಮೀಲಾಗಿದ್ದ ತೆಲುಗು ದೇಶಂನ ಕಾರ್ಯಕರ್ತರನ್ನು ಬಂಧಿಸಿದ್ದು, ಅವರೆಲ್ಲಾ ರಾಜ್ಯದ ನೀರಾವರಿ ಸಚಿವರ ಸಂಬಂಧಿಕರೂ, ಅನುಯಾಯಿಗಳೆಂಬುದು ತಿಳಿದುಬಂದಿದೆ.

ಸ್ವಭಕ್ಷಣೆಗೆ ಅವಕಾಶ

ರಾಜ್ಯ ಸರ್ಕಾರದ ಪ್ರಕಾರ ಕೇಂದ್ರ ಸರ್ಕಾರದಿಂದ 990 ಕೋಟಿ ಹಣ ಮತ್ತು 3150 ಕೋಟಿಯ 31.5 ಲಕ್ಷ ಟನ್ ಅಕ್ಕಿಯನ್ನು 7 ಲಕ್ಷ ಕೆಲಸಗಾರರ ಮೌಲ್ಯವಾಗಿ ನೀಡಲಾಗಿದ್ದು, 5.83ಲಕ್ಷ ಕೆಲಸಗಳಲ್ಲಿ 4.50 ಲಕ್ಷ ಕೆಲಸಗಳು ಪೂರ್ಣ ಗೊಂಡಿದ್ದು 26.34 ಲಕ್ಷ ಟನ್ ಅಕ್ಕಿಯನ್ನು ವಿತರಿಸಿದ್ದಾರೆ. ಕೂಲಿಗಾಗಿ ಕಾಳು ಯೋಜನೆಯನ್ನು ಜಾರಿ ಮಾಡುವಲ್ಲಿ ರೂಪಿಸಿರುವ ಸರ್ಕಾರದ ನೀತಿಗಳೇ ಸೋರಿಕೆಗೆ ಹಾದಿಯನ್ನು ಸುಗಮಗೊಳಿಸಿರುವುದು ಭ್ರಷ್ಟಾಚಾರಕ್ಕೆ ನೇರ ಕಾರಣವಾಗಿದೆ. ಬರದ ತೀವ್ರತೆಯನ್ನಾಧರಿಸಿ ಆ ಯೋಜನೆಯಡಿ ಆಹಾರ ವಿತರಿಸಬೇಕಿದ್ದ ಸರ್ಕಾರ ಕೆಲಸಗಾರರ ಮುಂದೆ ನಿರ್ದಿಷ್ಟ ಆಯ್ಕೆಗಳನ್ನು ಹೇರಿದೆ. 5 ಕೆ.ಜಿ ಅಕ್ಕಿಯೊಂದಿಗೆ 30 ರೂ, ಇಲ್ಲವೇ 8 ಕೆ.ಜಿ. ಅಕ್ಕಿ ಮಾತ್ರವೆಂಬುದೇ ಬಹಳಷ್ಟು



ಕೂಲಿಯೂ ಇಲ್ಲ.. ಕಾಳೂ ಇಲ್ಲ..

ಅಸಮಾನತೆಯಿಂದ ಕೂಡಿದ್ದು, ಜನರ ಸಂಕಷ್ಟಕ್ಕನುಗುಣವಾಗಿ ಯೋಜನೆ ಜಾರಿ ಮಾಡದೆ - ಸ್ವಭಕ್ಷಣೆಗೆ ಬೇಕಾದಂತಹ ಅವಕಾಶಗಳೊಂದಿಗೆ ಜಾರಿ ಮಾಡಲೊರಟಿದ್ದು FFW ಉದ್ದೇಶವನ್ನೇ ವಿಫಲಗೊಳಿಸಿದೆ. ಕೂಲಿಗಾಗಿ ಕಾಳು ಯೋಜನೆಯಡಿಯ ಕಾಮಗಾರಿಗಳ ಆಯ್ಕೆಯ ವಿಷಯದಲ್ಲೂ ಗ್ರಾಮ ಪಂಚಾಯತಿಗಳನ್ನು ನಿರ್ಲಕ್ಷಿಸಿರುವುದು ಭ್ರಷ್ಟಾಚಾರಕ್ಕೆ ಹಿಡಿದ ಕನ್ನಡಿಯಾಗಿದೆ.

ದುರ್ಬಳಕೆ - ಭ್ರಷ್ಟಾಚಾರಕ್ಕೆ ಅವಕಾಶ

ಅಕ್ಟೋಬರ್ ಅಂತ್ಯದಲ್ಲಿ ಕೂಲಿಗಾಗಿ ಕಾಳು ಕಾರ್ಯಕ್ರಮ ಜಾರಿಯಾಗಿದ್ದು, ಡಿಸೆಂಬರ್ 2001ರಿಂದ ಫೆಬ್ರವರಿ 2002ರವರೆಗೆ ಸಾಮಾನ್ಯ ಕೆಲಸ / ಕಾಮಗಾರಿಗಳಡಿ 15 ಲಕ್ಷ ಟನ್ ಅಕ್ಕಿ ಬಳಕೆಯನ್ನು ಸರಕಾರ ತೋರಿಸುತ್ತಿದ್ದು, ಬರದ ತೀವ್ರತೆ ಹೆಚ್ಚಾಗಿದ್ದ ಜೂನ್ ಮತ್ತು ಜುಲೈ ತಿಂಗಳುಗಳಲ್ಲಿ FFW ನಡಿಯಲ್ಲಿ ಕೆಲಸಗಾರರಿಗೆ ಕೆಲಸಗಳನ್ನು ನೀಡುವಲ್ಲಿ ಸರ್ಕಾರ ವಿಫಲಗೊಂಡದ್ದು, ಕಾರ್ಯಕ್ರಮವನ್ನೇ ಅಸ್ತವ್ಯಸ್ತಗೊಳಿಸಿತು.

FFW ಕಾರ್ಯಕ್ರಮ ಹಲವಾರು ವಿಧಗಳಲ್ಲಿ ದುರ್ಬಳಕೆಯಾಗಿದೆ. FFW ಆದೇಶಗಳು ಒಂದೆಡೆ ಜಿಲ್ಲಾಧಿಕಾರಿಗಳಿಗೆ ನೀಡಿದ ನಿರ್ದೇಶನಗಳು ಮತ್ತೊಂದೆಡೆ ಸರ್ಕಾರದ ವ್ಯವಸ್ಥಿತ ದ್ವಂದ್ವ ನಿರ್ದೇಶನಗಳಿಂದ 400 ಕೋಟಿ ರೂ ಅಧಿಕ ಹಣವನ್ನು ರಾಜಕಾರಣಿಗಳು - ಕಂಟ್ರಾಕ್ಟರುಗಳು ನುಂಗಲು ಅನುವು ಮಾಡಿಕೊಟ್ಟಂತಾಗಿದೆ. ವಿವಿಧ ಕೆಲಸ / ಕಾಮಗಾರಿಗಳಿಗೆ ಹಣದ ರೂಪದಲ್ಲಿ ಕೂಲಿ ನೀಡಬೇಕಿದ್ದ ಕಡೆ ಅಕ್ಕಿಯ ವಿತರಣೆಯನ್ನು ಹೇರಲಾಗಿದೆ. ಆದರೆ ಜಿಲ್ಲಾಧಿಕಾರಿಗಳಿಗಿದ್ದ ನಿರ್ದೇಶನ ಯಾವುದೇ ಸನ್ನಿವೇಶದಲ್ಲೂ ಯಂತ್ರದಿಂದ ಕೆಲಸ/ ಕಾಮಗಾರಿಗಳನ್ನು ಮಾಡಿಸಿ, ಅದನ್ನು ಕೂಲಿಕಾರರು ಮಾಡಿದರೆಂದು ವೆಚ್ಚ ಹಾಕಿ ಹಣ ಪಡೆಯಲು ಅವಕಾಶ ನೀಡಬಾರದೆಂದು. ಇವೆಲ್ಲದರ ನಡುವೆಯೂ FFW ಗೆ ಸಂಬಂಧಿಸಿದ ಅಕ್ಕಿಯನ್ನು ಕೆ.ಜಿ 5.65ಯಂತೆ ಕಂಟ್ರಾಕ್ಟರುಗಳಿಗೆ ಮಂಜೂರು ಮಾಡಿದ್ದು, ಮುಕ್ತ ಮಾರುಕಟ್ಟೆಯಲ್ಲಿ ಅದರ ಬೆಲೆ 1 ಕೆ.ಜಿ 10 ರೂ. ನೀಡಿ ಭಾರತ ಆಹಾರ ನಿಗಮಕ್ಕೆ (FCI) ಕೊಂಡುಕೊಳ್ಳುವುದರ ಮೂಲಕ ವ್ಯತ್ಯಾಸದ ಹಣ 400 ಕೋಟಿಗೂ ಅಧಿಕವಿದ್ದು, ಇದನ್ನು ಕಂಟ್ರಾಕ್ಟರ್ಸ್, ರಾಜಕಾರಣಿಗಳು ನುಂಗಿಹಾಕಿದ್ದಾರೆ.

ಮೋಸದ ಕ್ರಮಗಳು

FFWP ನಡಿಯಲ್ಲಿ 28 ಲಕ್ಷ ಟನ್ ಅಕ್ಕಿಯೊಂದಿಗೆ, 22 ಲಕ್ಷ ಟನ್ ಅಕ್ಕಿಯನ್ನು ರಿಯಾಯ್ತಿ ದರದಲ್ಲಿ ಪಡಿತರ ವ್ಯವಸ್ಥೆಯ ಮೂಲಕ ವ್ಯವಸ್ಥಿತವಾಗಿ ಹಂಚಿದಲ್ಲಿ 2 ಕೋಟಿ ಕೃಷಿ ಕೂಲಿಕಾರರು ಹಾಗೂ ಬಡರೈತರು ಕನಿಷ್ಠ 10 ಚೀಲ ಅಕ್ಕಿಯನ್ನು ಪ್ರತಿ ಕುಟುಂಬಕ್ಕೆ ಪಡೆಯುವಂತಾಗಿ, ಕನಿಷ್ಠ ಮುಂಬರುವ ಎರಡು ವರ್ಷ ಆಹಾರದ ಸಮಸ್ಯೆಯಿರದೇ ನೆಮ್ಮದಿಯಿಂದಿರಬಹುದಿತ್ತು. ಇಂತಹ ಪರ್ಯಾಯದತ್ತ ಯೋಜನೆಯನ್ನು ಮಾಡದ ರಾಜ್ಯ ಸರ್ಕಾರ, ಬರಕ್ಕೆ ತುತ್ತಾದ, ಕೃಷಿ ಕೂಲಿಕಾರರು ಹಾಗೂ ಬಡರೈತರ ಹೆಸರಲ್ಲಿ ಮತ್ತೂ 15 ಲಕ್ಷ ಟನ್ ಅಕ್ಕಿ - 810 ಕೋಟಿ ಹಣದ ಬೇಡಿಕೆಯನ್ನು ಕೇಂದ್ರ ಸರ್ಕಾರದ ಮುಂದಿಟ್ಟಿದೆ.

ತನಿಖೆ ಒಲ್ಲದ ಸರ್ಕಾರ ಜನ ಹೇಳುತ್ತಾರೆ ಧಿಕ್ಕಾರ

CPM ಪಕ್ಷವನ್ನೊಳಗೊಂಡಂತೆ, ವಿರೋಧ ಪಕ್ಷಗಳು ಈ ಹಗರಣದ ಬಗ್ಗೆ CBI ತನಿಖೆ ಅಥವಾ ನ್ಯಾಯಾಂಗ ತನಿಖೆಗೆ ಒತ್ತಾಯಿಸಿವೆ. ಆದರೆ ಚಂದ್ರಬಾಬು ನಾಯ್ಡು ಸರ್ಕಾರ ಯಾವುದೇ ರೀತಿಯ ತನಿಖೆಯನ್ನು ತಳ್ಳಿ ಹಾಕಿದ್ದು, ವಿರೋಧ ಪಕ್ಷಗಳ ವಿಮರ್ಶೆಯಿಂದ ತಪ್ಪಿಸಿಕೊಳ್ಳಲು ಇಂಜನಿಯರಿಂಗ್ ಸ್ಟಾಫ್ ಕಾಲೇಜ್ ಆಫ್ ಇಂಡಿಯಾ (ESCI) ಮತ್ತು ವಿಜಿಲೆನ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಡಿಪಾರ್ಟ್‌ಮೆಂಟ್ ಗಳಿಗೆ ಕೂಲಿಗಾಗಿ ಕಾಳು ಯೋಜನೆಯ ಕೆಲಸಗಳನ್ನು ತಪಾಸಣೆ ಮಾಡಿ ವರದಿ ಸಲ್ಲಿಸಲು ಕೋರಿದೆ. ಈ ಎರಡೂ ಇಲಾಖೆಗಳ ತಪಾಸಣೆಯಿಂದ 38,221 ಕೆಲಸಗಳನ್ನು ತಪಾಸಣೆ ಮಾಡಲಾಗಿದ್ದು, 3169 ಕೆಲಸಗಳಲ್ಲಿ ಅಕ್ರಮ, ಭ್ರಷ್ಟಾಚಾರ ಬೆಳಕಿಗೆ ಬಂದಿದೆ. FFW ನಡಿಯ ಒಟ್ಟಾರೆ ಕಾಮಗಾರಿಗಳಲ್ಲಿ ಶೇ.9 ಭ್ರಷ್ಟಾಚಾರ ನಡೆದಿರುವುದು, ತಪಾಸಣೆಯಿಂದ ಹೊರ ಬಿದ್ದಿರುವುದು ಭ್ರಷ್ಟಾಚಾರದ ಸಣ್ಣ ಉದಾಹರಣೆ ಮಾತ್ರ.

ವಿರೋಧ ಪಕ್ಷಗಳ ತೀವ್ರದಾಳಿಗೆ ತತ್ತರಿಸಿದ ನಾಯ್ಡು ಭ್ರಷ್ಟತೆ ಮುಚ್ಚಿಕೊಳ್ಳಲು ಕಾರ್ಯಕ್ರಮ ರೂಪಿಸಿದ್ದಾರೆ. ಭ್ರಷ್ಟ ಸಚಿವರನ್ನೊಳಗೊಂಡಂತೆ ಮುಖ್ಯಮಂತ್ರಿ, ತೆಲುಗುದೇಶಂ ವಿವಿಧ ಕಾರ್ಯಕರ್ತರು ಒಂದು ವಾರದ ಪ್ರಚಾರಾಂದೋಲನ ರೂಪಿಸಿ, ವಿರೋಧ ಪಕ್ಷಗಳು ಕೂಲಿಗಾಗಿ ಕಾಳು ಯೋಜನೆಯನ್ನೇ ವಿರೋಧ ಮಾಡುವುದು ಮೂಲಕ ಕೇಂದ್ರ ಸರ್ಕಾರದಿಂದ ಮಂಜೂರಾಗುತ್ತಿರುವ ಅಕ್ಕಿಗೆ ತಡೆಯೊಡ್ಡುತ್ತಿದ್ದಾರೆನ್ನುವ ರೀತಿಯಲ್ಲಿ ಬಿಂಬಿಸ ಹೊರಟರು. ಜನರ ಪರನಿಂತ ವಿರೋದ ಪಕ್ಷಗಳ ಪ್ರಚಾರಾಂದೋಲನ, ಪ್ರತಿಭಟನೆಗಳಿಗೆ ಉತ್ತರಿಸಲಾಗದೇ ಚಂದ್ರಬಾಬು ನಾಯ್ಡು ಭ್ರಷ್ಟರ ಕೂಟ ತತ್ತರಿಸಿತು.

ಸಂಕಷ್ಟದಲ್ಲಿ ಉತ್ತರ ಕನ್ನಡ ಜಿಲ್ಲೆಯ 90 ಸಾವಿರ ಕುಟುಂಬ

7ನೇ ಪುಟದಿಂದ

ಅತಿಕ್ರಮಿಸಬೇಕಾದ ಅನಿವಾರ್ಯತೆ, ಅದರ ಸ್ವರೂಪ, ಕಂದಾಯ ಭೂಮಿಯ ಕೊರತೆ, ಅತಿಕ್ರಮಣದ ಪ್ರಮಾಣ, ಉತ್ತರ ಕನ್ನಡದ ಭೌಗೋಲಿಕ ವಿಶಿಷ್ಟತೆಯನ್ನು ವಿವರಿಸಿ ಸುಪ್ರಿಂ ಕೋರ್ಟಿಗೆ ಮೇಲ್ಮನವಿ ಸಲ್ಲಿಸಬೇಕು 4) ಅತಿಕ್ರಮಣ ತೆರವು ಕಾರ್ಯವನ್ನು ನಿಲ್ಲಿಸಬೇಕು. 5) 1978ರ ಗಡುವನ್ನು ವಿಸ್ತರಿಸಬೇಕು. 6) ಇಡೀ ಪ್ರಕರಣವನ್ನು ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ಪರಿಗಣಿಸಬೇಕು ಎಂದು ಸರ್ಕಾರದ ಮೇಲೆ ಒತ್ತಡ ತರುವ ಹೋರಾಟಗಳು ದಿನದಿಂದ ದಿನಕ್ಕೆ ಹೆಚ್ಚಾಗಬೇಕಾಗಿದೆ. ಉತ್ತರ ಕನ್ನಡ ಜಿಲ್ಲೆಯ ಅತಿಕ್ರಮಣ ಸಾಗುವಳಿದಾರರ ಪಕ್ಷಾತೀತವಾದ ಹೋರಾಟ ಮಾತ್ರ ಅವರ ಭವಿಷ್ಯವನ್ನು ಹಸನುಗೊಳಿಸಬಹುದು. ಈಗಾಗಲೇ ಅಸ್ಸಾಂ, ಮಹಾರಾಷ್ಟ್ರಗಳಲ್ಲಿ ಹೋರಾಟ ಪ್ರಬಲವಾಗುತ್ತಿದೆ.

ಕರ್ನಾಟಕ ಪ್ರಾಂತ ರೈತ ಸಂಘ, (ಕಿಸಾನ್‌ಸಭಾ) 1960-70ರಿಂದಲೇ ಭೂರಹಿತ ಕೃಷಿ ಕಾರ್ಮಿಕರಿಗೆ ಭೂಮಿ ಹಂಚಲು ಸರ್ಕಾರವನ್ನು ಒತ್ತಾಯಿಸಿ ಹೋರಾಟ ರೂಪಿಸುತ್ತಿತ್ತು. ಭೂಹಂಚಿಕೆಗೂ ಅಭಿವೃದ್ಧಿಗೂ ಸಂಬಂಧ ಇದೆ ಎಂದು ಹೇಳುತ್ತಲೇ ಬಂದಿತ್ತು. ಆದರೆ ಸರ್ಕಾರ ರೈತರಿಂದ ಭೂಮಿ ವಂಚಿಸಿ ಭೂಮಾಲಿಕರ ಪರವಾದ ನಿರ್ಣಯ ತೆಗೆದುಕೊಳ್ಳುತ್ತಿತ್ತು. ಹಿಂದೆ ಕಿಸಾನ್ ಸಭಾದ ಅಡಿಯಲ್ಲಿ ಉಳುವವನೇ ಹೊಲದೊಡೆಯ ಕಾನೂನಿಗಾಗಿ ನಡೆದಂತ ಹೋರಾಟವೇ ಈಗಲೂ ನಡೆಯಬೇಕು. ಭೂಮಿ ಪಡೆಯುವುದು ರೈತನ ಹಕ್ಕಲ್ಲವೆ?

ಗಾಂಧಿ ನಾಡಾದ ಗುಜರಾತಿನಲ್ಲಿ ಕೋಮುವಾದ ಬೆಳೆದ ಬಗೆ

ಕೋಮುಸೌಹಾರ್ದತೆಗಾಗಿ ಪ್ರಾಣಾರ್ಪಣೆ ಮಾಡಿದ ಮಹಾತ್ಮಗಾಂಧಿ ಜನಿಸಿದ ಗುಜರಾತ್ ಇಂದು ಕೋಮುವಾದಿಗಳ, ಫ್ಯಾಸಿಸ್ಟ್ ಶಕ್ತಿಗಳ ನೆಲೆಯಾಗಿದೆ. ಗಾಂಧಿವಾದ ಹೀಗೇಕಾಯಿತು? ಗಾಂಧಿವಾದದ ಸಫಲ, ವಿಫಲತೆಗಳೇನು? ವಿಶ್ಲೇಷಣೆಯ ಒಂದು ಪ್ರಯತ್ನವಿಲ್ಲಿ.

ಇಡೀ ದೇಶದ ಜನರಿಗೆ ವಿದ್ಯುತ್ ಸಂಚಾರ ನೀಡಿದ ಗಾಂಧಿಯ- ಉಪ್ಪಿನ ಸತ್ಯಾಗ್ರಹ ದಂಡಿ ಮಾರ್ಚ್ ನಡೆದ ಗುಜರಾತಿನಲ್ಲಿ ಇಂದು ಪ್ರತಿ ನಿತ್ಯ ಹಿಂಸೆ ತಾಂಡವವಾಡುತ್ತಿದೆ. 1930ರ ಆ ಸಂದರ್ಭದಲ್ಲಿ ಕೋಮುವಾದ ಕೂಡ ತನ್ನದೇ ನೆಲೆಯನ್ನು ಅಲ್ಲಿ ಬೆಳೆಸಿ ನಾಗಪುರ-ಮಹಾರಾಷ್ಟ್ರದಲ್ಲಿಯೂ ಬಂತಾದರೂ ಜಾತಿ ಪದ್ಧತಿ ವಿರೋಧೀ ಪ್ರಬಲ ಚಳುವಳಿಗಳಿಂದಾಗಿ ಗುಜರಾತಿನಷ್ಟು ಆಳವಾಗಿ ಬೇರು ಬಿಡಲು ಸಾಧ್ಯವಾಗಲಿಲ್ಲ. ಇತ್ತೀಚಿನ ಗಲಭೆಗಳಲ್ಲಿಯ ಜನರ ಪಾಲ್ಗೊಳ್ಳುವಿಕೆಯನ್ನು ನೋಡಿದರೆ ಇದು ಕೇವಲ ಒಂದು ಕ್ರಿಯೆಗೆ ಪ್ರತಿಕ್ರಿಯೆಯಾಗಿ ಭಾವೋದ್ವೇಕದ ಪಾಲ್ಗೊಳ್ಳುವಿಕೆ ಮಾತ್ರವಲ್ಲ. ಬದಲಿಗೆ- ಹಲವು ವರ್ಷಗಳಿಂದ ಬಹಳ ವ್ಯವಸ್ಥಿತವಾಗಿ ಜನರ ಮನಸ್ಸಿನಲ್ಲಿ ದ್ವೇಷದ ವಿಷ ತುಂಬುವ ಕೆಲಸ - ಶೈಕ್ಷಣಿಕ, ಸಾಂಸ್ಕೃತಿಕ ನೆಲೆಗಳಲ್ಲಿ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಶಾಖೆಗಳ ಮೂಲಕ ನಡೆಸಲಾಗಿದೆ. ಅಂತೆಯೇ ಪತ್ರಿಕಾ ಮಾಧ್ಯಮಗಳು ಕೂಡ ತೀರಾ ಸಾಮಾನ್ಯ ಓದುಗರನ್ನೂ ಕೋಮುದ್ವೇಷಕ್ಕೆ ಬಲಿಯಾಗಿಸುವಂತೆ ಮಾನಸಿಕವಾಗಿ ಸಿದ್ಧಗೊಳಿಸುವಲ್ಲಿ ಬಹಳ ಮಹತ್ವದ ಪಾತ್ರವನ್ನು ವಹಿಸುತ್ತಲೇ ಬಂದಿವೆ.

ಸರ್ಕಾರೀ ಸಂಸ್ಥೆಗಳು, ಶಾಲಾ, ಕಾಲೇಜುಗಳು, ಸಾಂಸ್ಕೃತಿಕ ಕೇಂದ್ರಗಳೆಲ್ಲವೂ ಕೋಮುವಾದ ಪ್ರಚಾರ ಕೇಂದ್ರಗಳಾಗಿಯೇ ಹಲವು ವರ್ಷಗಳಿಂದ ಕಾರ್ಯನಿರ್ವಹಿಸುತ್ತ ಬಂದಿರುವುದು ಗುಜರಾತಿನ ಇತಿಹಾಸ.

ಗುಜರಾತಿನಲ್ಲಿ ಸ್ವಾತಂತ್ರ್ಯಾ ನಂತರದ ದಿನಗಳಲ್ಲಿ ಆಡಳಿತ ನಡೆಸಿದ ಯಾವ ಪಕ್ಷಗಳೂ ಪ್ರಜ್ಞಾಪೂರ್ವಕವಾಗಿ ಒಂದು ಸಾಮಾಜಿಕ ಪ್ರಜಾಪ್ರಭುತ್ವ ಚಳುವಳಿಯಾಗಿ ಬೆಳೆಯುವತ್ತ ಪ್ರಯತ್ನ ನಡೆಸಲಿಲ್ಲ ಎನ್ನುವುದನ್ನೂ ವಿಶ್ಲೇಷಿಸಬೇಕಾಗುತ್ತದೆ. ಆರ್ಥಿಕವಾಗಿ ಅತ್ಯಂತ ಮುಂದುವರಿದ ರಾಜ್ಯವಾದ ಗುಜರಾತಿನಲ್ಲಿ ಆರ್ಥಿಕ ಸ್ಪರ್ಧೆ ಕೂಡ ಒಂದು ರೀತಿಯಲ್ಲಿ ಕೋಮು ವಿರೋಧಿ ಭಾವನೆಗೆ ಸಹಕಾರಿಯಾಯಿತೆನ್ನುವುದನ್ನು ಒಪ್ಪಿಕೊಳ್ಳುತ್ತಲೇ ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿಯೇ ನಡೆದ ಅಹ್ಮದಾಬಾದ್ ಟೆಕ್ಸ್‌ಟೈಲ್ ವರ್ಕರ್ಸ್ ಮುಷ್ಕರವನ್ನು ಗಾಂಧಿವಾದಿಗಳು ಬೆಂಬಲಿಸಲಿಲ್ಲ ಮತ್ತು ಆ ಮೂಲಕ ಕಾರ್ಮಿಕ ಚಳುವಳಿಯ ಬೆಳವಣಿಗೆಗೆ ಅಡ್ಡಿಯುಂಟಾಯಿತೆನ್ನುವುದನ್ನೂ ಗುರುತಿಸಬೇಕು.

ಅದೇ ರೀತಿಯಲ್ಲಿ ಗುಜರಾತಿನಲ್ಲಿ ಕೇವಲ ಎಡ ಪ್ರಜಾಪ್ರಭುತ್ವ ಚಳುವಳಿ ಬೆಳೆಯಲಿಲ್ಲ ವೆಂಬುದೊಂದೇ ಅಲ್ಲ, ಜಾತಿ ಪದ್ಧತಿ ವಿರೋಧಿ ಆಂದೋಲನವಾಗಲಿ ಮಹಿಳಾ ಚಳುವಳಿಯಾಗಲಿ, ಅಥವಾ ಮುಸ್ಲಿಂರನ್ನು ಪ್ರತಿನಿಧಿಸುವ ಪ್ರಗತಿಪರ ಗುಂಪಾಗಲಿ, ದಲಿತ, ಆದಿವಾಸಿಗಳ ಚಳುವಳಿಗಾಗಲಿ ಬೆಳೆಯಲಿಲ್ಲ. ಆರ್ಥಿಕ ಪ್ರಾಭಲ್ಯದ ನೆಲೆಯಲ್ಲಿ ಬೆಳೆದ ವಿಭಾಗಗಳ ದೆಸೆಯಿಂದಾಗಿ ಈ ರೀತಿಯ ಪಂಥೀಯ ಸ್ವಯಂ ಸೇವಾ ಸಂಸ್ಥೆಗಳಾಗಿ ಬೆಳೆಯಲಿಲ್ಲ ಮತ್ತು ರಾಜಕೀಯ ನೆಲೆಯೊಂದನ್ನು ನಿರ್ಮಿಸಲು ಸಾಧ್ಯವಾಗಲಿಲ್ಲ. ಉತ್ತರ ಪ್ರದೇಶದಲ್ಲಿ ಮಾಯಾವತಿ, ಮುಲಾಯಂ ಸಿಂಗ್‌ರಂತೆ ಒಂದು ವಿಭಾಗದ ಜನರ ಸಾಮಾಜಿಕ ಸ್ಥಿತಿ-ಗತಿಯ ಆಧಾರದಲ್ಲಿ ನಾಯಕರಾಗಿಯಾಗಲಿ, ಅಥವಾ ರೈತ, ದಲಿತ ವರ್ಗಗಳ ಸಂಘಟಿತರಾದ ಮಹಾರಾಷ್ಟ್ರದಂತೆ ಜಾಟ್ ಮತ್ತು ರಜಪೂತ್ ಸಮುದಾಯ ರಾಜಸ್ತಾನದಲ್ಲಿ ಬೆಳೆದಂತೆ ಗುಜರಾತ್ ಇಂತಹ ಬೆಳವಣಿಗೆ ಕಾಣಲಿಲ್ಲ. ಅಂತೆಯೇ ಆರ್ಥಿಕವಾಗಿ ಹಾಗೂ ಸಾಂಖ್ಯಿಕವಾಗಿ ಸಾಕಷ್ಟು ಪ್ರಾಬಲ್ಯ ಹೊಂದಿದ್ದರೂ ಕೂಡ ಕೇರಳದಲ್ಲಿ ಮುಸ್ಲಿಂ ಲೀಗ್ ಹೊಂದಿದಂತಹ ಪ್ರಭಾವವನ್ನು ಗುಜರಾತಿನಲ್ಲಿ ಹೊಂದಲು ಸಾಧ್ಯವಾಗಲಿಲ್ಲ. ಈ ಎಲ್ಲ ರಾಜ್ಯಗಳಲ್ಲಿ ಈ ವರ್ಗದವರ ಸಂಘಟನೆಗಳು ಬಹಳ ದೊಡ್ಡ ಸಾಮಾಜಿಕ ಸವಾಲನ್ನು ಪ್ರಭುತ್ವಕ್ಕೆ ಒಡ್ಡಿವೆ ಒಂದಲ್ಲದಿದ್ದರೂ ಹಿಂದುತ್ವವಾದಿಗಳ ತೀವ್ರತೆಯನ್ನು ಕಡಿಮೆ ಮಾಡುವಲ್ಲಿ ಸಫಲವಾಗಿವೆ. ಹೀಗೆ ಪ್ರಗತಿಗಾಮಿ ಶಕ್ತಿಗಳು ಬೆಳೆಯದಿದ್ದುದರ ಪರಿಣಾಮವಾಗಿ, ಗುಜರಾತೀ ಸಮಾಜದ ನಡವಳಿಕೆಗಳ ಕುರಿತು ಟೀಕೆ, ಟಿಪ್ಪಣಿಗಳೂ ವಿರಳ. ದೊಡ್ಡ ಸಂಖ್ಯೆಯ ಅನಿವಾಸಿ ಭಾರತೀಯರನ್ನು ಹೊಂದಿದ ರಾಜ್ಯವಾಗಿದ್ದರೂ ಕೂಡ ಅದು ಕೇವಲ ಆರ್ಥಿಕ ಬಲ ವರ್ಧನೆಗಷ್ಟೇ ಸೀಮಿತವಾಗಿ ವ್ಯಾಪಾರ-ವ್ಯವಹಾರಗಳಿಗೆ ಇನ್ನಷ್ಟು ಪುಷ್ಟಿ ಕೊಡುವಂತಹ ಶೈಕ್ಷಣಿಕ ವ್ಯವಸ್ಥೆಗಷ್ಟೇ ಸೀಮಿತವಾಯಿತೇ ಹೊರತು ಸರ್ವಾಂಗೀಣ ಪ್ರಗತಿಯತ್ತ ಹೆಜ್ಜೆ ಹಾಕಲಿಲ್ಲ.


ಗೋಧ್ರಾ ಸಂತತಿ




ನಾರಾಯಣ ದೇವಾಲಯದಲ್ಲಿ ಉಗ್ರಗಾಮಿಗಳ ಶವಗಳು

ಗಾಂಧಿ ವಿರೋಧಿ ಪ್ರಚಾರ

ಸ್ವಾತಂತ್ರ್ಯಾ ನಂತರದ ಗುಜರಾತಿನಲ್ಲಿ ಮುಸ್ಲಿಂರ ವಿರುದ್ಧ ದ್ವೇಷದ ಭಾವನೆ ಬೆಳೆಸಲು "ಗಾಂಧಿ ವಿರೋಧಿ" ಪ್ರಚಾರನ್ನೇ ಬಳಸಲಾಯಿತು. ಗಾಂಧಿಯನ್ನು ಕೊಂದವರನ್ನು ಒಬ್ಬ ಸಮಾಜಸೇವಾಕರ್ತನೆಂಬಂತೆ ಪ್ರಚಾರ ಮಾಡಿ ಸೋಮನಾಥ ದೇವಾಲಯ ಪುನರ್ ನಿರ್ಮಾಣದಂತಹ ಘಟನೆಗಳನ್ನು ಮುಸ್ಲಿಂರ ಕ್ರೌರ್ಯವನ್ನು ಬಿಂಬಿಸುವ ಮೂಲಕ ವರ್ಣಿಸಲಾಯಿತು ಮತ್ತು ರಾಜ್ಯದ ಶಾಲಾ ಪಠ್ಯಕ್ರಮದಲ್ಲಿ ಆರ್.ಎಸ್.ಎಸ್.ನ ಸಿದ್ಧಾಂತವನ್ನು ಆ ಮೂಲಕವಾಗಿ ಅಳವಡಿಸಲಾಯಿತು.

ಗುಜರಾತಿನ ಮಗ ಸರ್ದಾರ್ ವಲ್ಲಭಬಾಯಿ ಪಟೇಲ್ ರಿಗೆ ಪ್ರಧಾನಮಂತ್ರಿಯಾಗಲು ನಹರೂ ಆಸ್ಪದ ನೀಡಲಿಲ್ಲ. ಅದಕ್ಕೆ ಗಾಂಧಿಯವರು ಕಾರಣವೆಂಬ ಪ್ರಚಾರವೂ ಗುಜರಾತಿನಲ್ಲಿ ನಡೆದಿದೆ.

ಗಾಂಧಿವಾದಿಗಳ ರಾಜಕೀಯ

ಹೀಗೆಂದ ಮಾತ್ರಕ್ಕೆ ಗುಜರಾತಿನಲ್ಲಿ ಗಾಂಧಿವಾದಿ ಸಂಘ ಸಂಸ್ಥೆಗಳಿಗೇನೂ ಕಡಿಮೆ ಇಲ್ಲ. ಸಾವಿರಗಟ್ಟಲೆ ಸಂಖ್ಯೆಯಲ್ಲಿರುವ ಅವು ಕಟ್ಟಾ ಬಲ ಪಂಥವಾದದತ್ತ ವಾಲಿವೆ. ಇದರಿಂದಾಗಿ ಅಲ್ಲಿಯ ಸಂಕುಚಿತ ಪಂಥೀಯವಾದದ , ಕೋಮುದ್ವೇಷ ಹುಟ್ಟಿಸುವ ವ್ಯವಸ್ಥಿತ ಪ್ರಯತ್ನವನ್ನು ವಿರೋಧಿಸುವ, ವಿಮರ್ಶಿಸುವ ಯಾವ ಪ್ರಯತ್ನಗಳನ್ನೂ ಅವು ನಡೆಸಿಲ್ಲ ಅಥವಾ ನಡೆಸುತ್ತಿಲ್ಲ. ಗುಜರಾತಿನ ಗಾಂಧೀವಾದಿಗಳನ್ನು ವಿಮರ್ಶಿಸಿದರೆ ಗಾಂಧಿಯವರಲ್ಲಿದ್ದ ಒಳ್ಳೆಯ ಅಂಶಗಳಾದ ಅಸ್ಪೃಶ್ಯತಾ ವಿರೋಧಿ ಭಾವನೆ, ಮಹಿಳಾ ಸಮಾನತೆಯ ಕಲ್ಪನೆ ಮುಂತಾದವುಗಳನ್ನು ಸಂಪೂರ್ಣ ಕೈಬಿಟ್ಟು, ಅವರಲ್ಲಿದ್ದ ದೋಷಗಳಾದ ಕಾರ್ಮಿಕ ಸಂಘಟನಾ ವಿರೋಧಿ, ಎಡ ಚಳುವಳಿ ವಿರೋಧಿ ಅಂಶಗಳನ್ನು ಸಂಪೂರ್ಣ ಅಳವಡಿಸಿಕೊಂಡು ಬೆಳೆದಿರುವುದನ್ನು ಗುರುತಿಸಬಹುದು. **ಈ ಗಾಂಧೀವಾದಿ ಸಂಘ-ಸಂಸ್ಥೆಗಳು ಜನರನ್ನು ರಾಜಕೀಯದಿಂದ ವಿಮುಖಗೊಳಿಸುವ ಕೆಲಸವನ್ನು ಮಾಡಿದ ಹಿನ್ನೆಲೆಯಲ್ಲಿ ಜನರಲ್ಲಿ ಕನಿಷ್ಠ ನಾಗರೀಕ ಪ್ರಜ್ಞೆಯಾಗಿ ಕೂಡ ಜಾತ್ಯಾತೀತತೆ ಬೆಳೆಯದಂತೆ ಮಾಡಿತು.**

ಈ ಎಲ್ಲ ಹಿನ್ನೆಲೆಯಲ್ಲಿ ಇಂದಿನ ಗುಜರಾತನ್ನು ಅವಲೋಕಿಸಿದರೆ-ಕೋಮುಜ್ವಾಲೆ ಹತ್ತಿ ಉರಿಯುವಾಗಲೂ ಕೂಡ ಒಂದು ವಿಭಾಗದ ಜನ ಅದನ್ನು ಕಂಡು ಆನಂದಿಸುತ್ತಿದ್ದುದಕ್ಕೆ ಕಾರಣಗಳು ಗೋಚರಿಸುತ್ತವೆ. ಗುಜರಾತಿನ ಅಲ್ಪಸಂಖ್ಯಾತರು ಭಯಗ್ರಸ್ತರಾಗಿ ತಲ್ಲಣಿಸುತ್ತಿದ್ದರೆ - ಪ್ರಧಾನಿ ಕೂಡ ಕ್ರಿಯೆಗೆ ಪ್ರತಿಕ್ರಿಯೆ ಎಂಬ ಮಾತುಗಳನ್ನಾಡಲು ಸಾಧ್ಯವಾಗುತ್ತದೆ. ಇಡೀ ಗಲಭೆಯನ್ನು ಎಲ್ಲ ಪ್ರಗತಿಪರ, ಮಾನವೀಯತೆಯ ಪರ ಚಿಂತಕರು ಖಂಡಿಸುತ್ತಿದ್ದರೆ, ಗೌರವಯಾತ್ರೆಯ ಹೆಸರಿನಲ್ಲಿ ಇಡೀ ರಾಜ್ಯದಲ್ಲಿ ಮತ್ತಿಷ್ಟು ಮುಸ್ಲಿಂ ವಿರೋಧಿ ಭಾವನೆಗಳನ್ನು ಕೆರಳಿಸುವ ಮಾತುಗಳನ್ನಾಡುತ್ತ ರಾಜ್ಯದ ಉಸ್ತುವಾರಿ ಮುಖ್ಯಮಂತ್ರಿ ಮುಂದುವರೆಯುತ್ತಿದ್ದಾರೆ. 'ಹಿಂದುತ್ವ' ಅಜೆಂಡಾ ಮೂಲಕವೇ ಮತ್ತೊಮ್ಮೆ ಅಧಿಕಾರಕ್ಕೆ ಬರಲೇಬೇಕೆನ್ನುವ ಅವರ ಮಹತ್ವಾಕಾಂಕ್ಷೆಗೆ ಹಿಡಿದ ಕನ್ನಡಿ ಅವರು ಗೌರವ(?) ಯಾತ್ರೆಯ ಸಂದರ್ಭದಲ್ಲಿ ಆಡಿದ ಪ್ರಚೋದನಕಾರಿ ಹೇಳಿಕೆಗಳ ವಿವರಗಳ ವರದಿ ಸಲ್ಲಿಸಿದರೆಂಬ ಕಾರಣಕ್ಕೆ ವರಿಷ್ಠ ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗಿದೆ.

ಈ ಕ್ಷಣದ ಅಗತ್ಯ

ಈಗ ಮತ್ತೊಮ್ಮೆ ಗುಜರಾತ್-ಕ್ರಿಯೆಗೆ ಪ್ರತಿಕ್ರಿಯೆಯ ಬೆಂಕಿಗೆ ಬಲಿಯಾಗುತ್ತಿದೆ. ಒಂದೆಡೆ ದೇಶದ ಸಮಸ್ಯೆಗಳಿಗೆಲ್ಲಾ ಪಾಕಿಸ್ತಾನದ ಮೇಲೆ ಯುದ್ಧ ಮಾಡುವ ಮೂಲಕ ಪರಿಹಾರ ಕಾಣಲು ಸಾಧ್ಯವೆಂಬಂತೆ ಬಿಂಬಿಸುತ್ತ, ನಡೆಯುವ ಘಟನೆ, ಗಲಭೆಗಳಿಗೆಲ್ಲ ಮುಸ್ಲಿಂ ಸಮುದಾಯವನ್ನೇ ಹೊಣೆ ಮಾಡುವ ವ್ಯವಸ್ಥಿತ ಪ್ರಯತ್ನ ನಡೆಯುತ್ತಿದೆ. ಗುಜರಾತ್ ಲ್ಯಾಬೊರೇಟರಿಯಲ್ಲಿ ಸಿದ್ಧವಾದ ಪಾಠ ಇಡೀ ದೇಶಕ್ಕೆ ಹಂಚುವ ಪ್ರಯತ್ನದ ವಿರುದ್ಧ, ಇಡೀ ಜನ ಸಮುದಾಯವನ್ನು ಅಸ್ಥಿರತೆಯತ್ತ ದೂಡುತ್ತಿರುವ ಆರ್ಥಿಕ ಸುಧಾರಣೆಗಳ ವಿರುದ್ಧ ಹೋರಾಟಕ್ಕೆ ಅಣಿಗೊಳಿಸುವ ಮೂಲಕ, ಭಾವಾವೇಶದ ಮೂಲಕ ನೈಜ ಸಮಸ್ಯೆಗಳಿಂದ ಜನರನ್ನು ವಿಮುಖಗೊಳಿಸುವ ಕ್ರಿಯೆಗಳ ವಿರುದ್ಧ ಸಮರೋಪಾದಿಯಲ್ಲಿ ಚಟುವಟಿಕೆ ಈ ಕ್ಷಣದ ಅಗತ್ಯ.

- ಕೆ.ಎಸ್.ವಿಮಲಾ

(ನಳಿನಿ ತನೇಜಾ ಲೇಖನಾಧಾರಿತ)

ಗಂಗಾವತಿ ತಾಲ್ಲೂಕಿನ ರೈಸ್ ಮಿಲ್ ಕಾರ್ಮಿಕರ ಹೋರಾಟಕ್ಕೆ ಮಣಿದ ಜಿಲ್ಲಾ ಆಡಳಿತ

ಗಂಗಾವತಿಯ ರೈಸ್ ಮಿಲ್‌ಗಳಲ್ಲಿ ದುಡಿವ ಹಮಾಲಿ ಕಾರ್ಮಿಕರ ಸಂಘವು ಹಿಂದಿನ ಒಪ್ಪಂದ ಅವಧಿ ಮುಗಿದ ಬಳಿಕ ವೇತನ ಪರಿಷ್ಕರಣೆಗಾಗಿ ಮನವಿ ಪತ್ರ ಕೊಟ್ಟರು. ಆದರೆ ಮಾಲೀಕರು ರೈಸ್ ಮಿಲ್ ಮುಚ್ಚಿದರು. ಹೋರಾಟ ಆರಂಭವಾದಾಗ ವಿಫಲಗೊಳಿಸಲು ಗಣೇಶ ಹಬ್ಬದ ಸಂದರ್ಭದಲ್ಲಿ ಉಂಟಾದ ಜಗಳ ಬಳಸಿ ಕಾರ್ಮಿಕರ ಒಗ್ಗಟ್ಟು ಮುರಿಯಲು ಯತ್ನಿಸಿದರು. ಸರ್ಕಾರ ಯಂತ್ರ ಅವರ ಪರ ನಿಂತಿತು. ಆದರೂ ಜಗ್ಗದೇ ದೃಢ ಹೋರಾಟದಿಂದ ಗೆದ್ದ ಕಥೆ ಇಲ್ಲಿದೆ.

ವರದಿ : ಎಂ. ಬಿ.ನಾಡಗೌಡ

ಗಂಗಾವತಿ ತಾಲೂಕಿನಲ್ಲಿ 86 ಅಕ್ಕಿಗಿರಣಗಳಿದ್ದು, ಅವುಗಳಲ್ಲಿ ಹಲವಾರು ವಿಭಾಗಗಳಲ್ಲಿ ಕೆಲಸ ಮಾಡುವ ಸಾವಿರಕ್ಕಿಂತ ಹೆಚ್ಚಿನ ಕಾರ್ಮಿಕರು ಕೆಲಸ ಮಾಡುತ್ತಾ, ಅವರ ಕುಟುಂಬವನ್ನು ನಿರ್ವಹಿಸುತ್ತಿರುತ್ತಾ ಬಂದಿದ್ದರು. 1982 ಎ.ಐ.ಟಿ.ಯು.ಸಿ. ನೇತೃತ್ವದಲ್ಲಿ ಸಂಘಟನೆಯಾಗಿತ್ತು. ದುಡಿಯುವ ಕಾರ್ಮಿಕರಿಗೆ ಸ್ವಲ್ಪ ಧೈರ್ಯ ತುಂಬಲಾಗಿತ್ತು. ಈ ನಾಯಕತ್ವ ಕೆಲವೇ ದಿನಗಳಲ್ಲಿ ಒಡೆದು ಕಾರ್ಮಿಕರಲ್ಲಿ ವಿಶ್ವಾಸವನ್ನು ಕಳೆದುಕೊಂಡಿತು. ಇದರ ಮೊದಲಿನ ನಾಯಕರನ್ನು ಕಿತ್ತುಹಾಕಲಾಯಿತು. ನಂತರ ಕಾಂಗ್ರೆಸ್ ಮುಖಂಡರನ್ನು ಈ ಸಂಘಟನೆಗೆ ಆಯ್ಕೆ ಮಾಡಿಕೊಳ್ಳಲಾಯಿತು. ಇದರಿಂದ ಕೆಲವು ಕಾರ್ಮಿಕರು ನಿರಾಶೆಗೊಂಡು ಎ.ಐ.ಟಿ.ಯು.ಸಿ. ಯಲ್ಲಿ ಅತೃಪ್ತ ಗುಂಪೊಂದು ಇನ್ನೊಂದು ಎ.ಐ.ಟಿ.ಯು.ಸಿ. ಸಂಘಟನೆಯನ್ನು ಕಟ್ಟಿಕೊಂಡು ಅದಕ್ಕೂ ಕೂಡಾ ಕಾಂಗ್ರೆಸ್ಸಿನ ಇನ್ನೊಬ್ಬ ಮುಖಂಡರನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಎ.ಐ.ಟಿ.ಯು.ಸಿ.ಯಲ್ಲಿ ಎರಡು ಗುಂಪುಗಳಾಗಿ ಸ್ಥಗಿತಗೊಂಡಿದ್ದು 1996ರಲ್ಲಿ ಸಿ.ಐ.ಟಿ.ಯು. ನೇತೃತ್ವದಲ್ಲಿ ಸಂಘಟನೆ ಪ್ರಾರಂಭವಾಯಿತು. 1996ರಲ್ಲಿ ಹಮಾಲಿ ಕಾರ್ಮಿಕರಿಗೆ ಪ್ರತಿ ಮೂರು ವರ್ಷಕ್ಕೊಮ್ಮೆ ಹಮಾಲಿ ದರಗಳನ್ನು ಪರಿಷ್ಕರಣೆ ಮಾಡಿ ಹೆಚ್ಚಿಗೆ ಮಾಡುವ ಪರಿಪಾಠವಿತ್ತು. ಅದರಂತೆ 1996ರಲ್ಲಿ ಶೇ.25ರಷ್ಟು ಹಳೆ ಹಮಾಲಿ ದರಕ್ಕೆ ಹೆಚ್ಚಿಗೆ ಮಾಡಲು ಎರಡು ಎ.ಐ.ಟಿ.ಯು.ಸಿ. ಗುಂಪುಗಳು ಒಪ್ಪಂದ ಮಾಡಿಕೊಂಡವು. 1996ರಲ್ಲಿ ಆಗತಾನೆ ಸಿ.ಐ.ಟಿ.ಯು ನೇತೃತ್ವದಲ್ಲಿ ಸಂಘಟನೆ ಪ್ರಾರಂಭವಾಗಿದ್ದರಿಂದ ನಿರ್ಣಾಯಕ ಪಾತ್ರವಹಿಸಲು ಸಾಧ್ಯವಾಗದೆ ಎ.ಐ.ಟಿ.ಯು.ಸಿ. ಗುಂಪುಗಳು ಒಪ್ಪಿಕೊಂಡ ಹಮಾಲಿ ದರಗಳನ್ನೇ ನಾವು ಒಪ್ಪಿಕೊಳ್ಳಬೇಕಾಯಿತು. ಆದರೆ 1999ರಲ್ಲಿ ನಡೆದ ಹಮಾಲಿ ದರ ಪರಿಷ್ಕರಣೆ ಸಂದರ್ಭದಲ್ಲಿ ನಮ್ಮ ಸಿ.ಐ.ಟಿ.ಯು. ಸಂಘಟನೆ ಬಲಿಷ್ಟಗೊಂಡಿತು. ನಮ್ಮದು ಅದರಲ್ಲಿ ಪ್ರಮುಖ ಪಾತ್ರವಾಗಿದ್ದರಿಂದ ಶೇ.32ರಷ್ಟು ಹಮಾಲಿದರಗಳನ್ನು ಹೆಚ್ಚಿಗೆ ಮಾಡಲು ನಿರ್ಧರಿಸಲಾಯಿತು. ಒಂದು ವಿಶೇಷವೇನೆಂದರೆ, 99ರಲ್ಲಿ ಒಪ್ಪಂದದ ಸಂದರ್ಭದಲ್ಲಿ ಶೇ.25ರಷ್ಟು ಹಮಾಲಿ ಹೆಚ್ಚಳಕ್ಕೆ ಎ.ಐ.ಟಿ.ಯು.ಸಿ. ಗುಂಪುಗಳು ಒಪ್ಪಿಕೊಳ್ಳಲು ತಯಾರಾಗಿದ್ದವು. ಆದರೆ ನಮ್ಮ ಬಿಗಿ ಪಟ್ಟಿನಿಂದಾಗಿ ಶೇ.32ರಷ್ಟು ಹಮಾಲಿ ಹೆಚ್ಚಿಗೆ ಮಾಡಿಕೊಳ್ಳಲು ಸಾಧ್ಯವಾಗಿದೆ.

ಅದರಂತೆ 2002 ಆಗಸ್ಟ್ 15ಕ್ಕೆ ನಮ್ಮ ಹಮಾಲಿ ದರಗಳ ಒಪ್ಪಂದಗಳು ಮುಗಿಯುತ್ತಿರುವ ಸಂದರ್ಭದಲ್ಲಿ ಒಂದು ತಿಂಗಳ ಮುಂಚಿತವಾಗಿ ಹಮಾಲಿ ದರಗಳನ್ನು ಹೆಚ್ಚಿಸುವಂತೆ ಮಾಲಿಕವರ್ಗಕ್ಕೆ ಒಂದು ಬೇಡಿಕೆಯ ಪತ್ರವನ್ನು ನೀಡಲಾಯಿತು. ಮಾಲಿಕ ವರ್ಗ 9-8-2002ರಂದು ಈಗಿರುವ ಹಮಾಲಿ ದರಗಳು ಎಲ್ಲಾ ವಾರಗಳಲ್ಲಿರುವ ರೈಸ್‌ಮಿಲ್‌ಗಳಿಗಿಂತ ಹೆಚ್ಚಿಗೆ ಇವೆ. ಆದ ಕಾರಣ ಮುಂದಿನ ಮೂರು ವರ್ಷದವರೆಗೆ ಹಳೆ ದರದಲ್ಲಿ ಕೆಲಸ ಮಾಡಲು ಪತ್ರವನ್ನು ಕಳಿಸಲಾಯಿತು. ಮೂರು ದಿನದಲ್ಲಿ ಪತ್ರಕ್ಕೆ ಉತ್ತರ ಕಳಿಸಲು ಸಾಧ್ಯವಾಗಲಿಲ್ಲ. ಆದರೆ ಗಂಗಾವತಿ ತಾಲೂಕಿನ 86 ಅಕ್ಕಿ ಗಿರಣಿ ಮಾಲೀಕರು ಮೊದಲೇ ನಿರ್ಧರಿಸುವಂತೆ 15ರ ಒಳಗೆ ನಮ್ಮಿಂದ ಯಾವುದೇ ಉತ್ತರ ಬಾರದೆ ಇರುವುದರಿಂದ ಆಗಸ್ಟ್ 14ರ ರಾತ್ರಿ ವೇಳೆ ರೈಸ್ ಮಿಲ್‌ಗಳಲ್ಲಿ ಇರುವ ಭತ್ತ ಹಾಗೂ ಅಕ್ಕಿಯನ್ನು ಬೇರೆ ಕಡೆ ಸಾಗಿಸಿ 86 ರೈಸ್‌ಮಿಲ್‌ಗಳಲ್ಲಿ 83 ರೈಸ್‌ಮಿಲ್‌ಗಳನ್ನು ಆಗಸ್ಟ್ 15ರಿಂದ ಮುಚ್ಚಿಕೊಂಡರು. ಇದರಿಂದ ಕಾರ್ಮಿಕರೂ ವಿಚಲಿತರಾಗದೇ ದೃಢವಾಗಿ ನಿಂತು ಮಾಲೀಕರು ತಮ್ಮಷ್ಟಕ್ಕೆ ತಾವೇ ಮಿಲ್‌ಗಳನ್ನು ಬಂದ್ ಮಾಡಿಕೊಂಡಿದ್ದನ್ನು ಜಿದ್ದಾಗಿ ತೆಗೆದುಕೊಂಡು ಹಮಾಲಿ ದರಗಳು ಏರದೆ ಕೆಲಸಕ್ಕೆ ಹಾಜರಾಗುವುದು ಬೇಡವೆಂದು ನಿರ್ಧಾರ ಮಾಡಿದರು. ಈ ನಿರ್ಧಾರ ತೆಗೆದುಕೊಳ್ಳಲು ಪ್ರಮುಖ ಪಾತ್ರ ಸಿ.ಐ.ಟಿ.ಯು.ದ್ದಾಗಿತ್ತು. ಮಾಲೀಕರಲ್ಲಿ ಒಂದು ಭಾವನೆ. ಇತ್ತು ಪಕ್ಕದ ಕಂಪ್ಲಿಯಲ್ಲಿ ಇದೇ ರೀತಿ ಬಂದಾದಾಗ ಕಾರ್ಮಿಕರಲ್ಲಿ ಒಡಕಾಗಿ ಅದರ ಪ್ರಯೋಜನ ಮಾಲೀಕರು ಪಡೆದಿದ್ದರು. ಇದನ್ನು ಗಂಗಾವತಿ ತಾಲ್ಲೂಕಿನ ಕಾರ್ಮಿಕರು ಅರಿತುಕೊಂಡು ದೃಢವಾಗಿ ನಿಂತುಕೊಂಡ ಪರಿಣಾಮವಾಗಿ ಕೊನೆಗೆ ಮಾಲೀಕರೆ ಕಾರ್ಮಿಕ ಅಧಿಕಾರಿ (ಕೊಪ್ಪಳ ಜಿಲ್ಲೆ) ಯ ಮಧ್ಯಸ್ತಿಕೆಯಲ್ಲಿ ಸಭೆ ಕರೆದು ಹಮಾಲಿ ದರ ಹೆಚ್ಚಿಗೆ ಇವೆ ಎಂದು ಹೇಳಿದ ಅಧಿಕಾರಿ, ಹೊಂದಾಣಿಕೆಯಿಂದ ಕೆಲಸ ಮಾಡಲು ಕಾರ್ಮಿಕರ ಮೇಲೆ ಒತ್ತಡ ತರಲು ಪ್ರಯತ್ನ ಮಾಡಿದರು. ಮಾಲಿಕರ ಪರವಾಗಿ ನಿಂತ ಜಿಲ್ಲಾ ಕಾರ್ಮಿಕ ಅಧಿಕಾರಿ ಸಿದ್ಧಲಿಂಗಪ್ಪ ಮೂರು ಸಾರಿ ಸಭೆ ಕರೆದು ಸಂದಾನ ಮಾಡುವ ನಾಟಕವಾಡಿದರು.

ಜಿಲ್ಲಾಧಿಕಾರಿಗಳ ಮಧ್ಯಸ್ತಿಕೆಯಲ್ಲಿ ಸಭೆ: ಜಿಲ್ಲಾ ಕಾರ್ಮಿಕ ಅಧಿಕಾರಿಗಳು ಕರೆದ ಸಭೆಗಳು ವಿಫಲವಾದಾಗ ಮಾಲೀಕರ ಕೋರಿಕೆಯ ಮೇರೆಗೆ ಸೆಪ್ಟೆಂಬರ್ 16ರಂದು ಸಭೆ ಕರೆದು ಆ ಸಭೆಯಲ್ಲಿ ಸುಮಾರು ಮೂರು ಗಂಟೆ ಚರ್ಚೆ ಮಾಡಿ ಕೊನೆಗೆ ಮಾಲೀಕರ ಒತ್ತಡಕ್ಕೆ ಮಣಿದು ಜಿಲ್ಲಾಧಿಕಾರಿಗಳು ಕಾರ್ಮಿಕರಿಗೆ ಮಾಲೀಕರು ಈಗ ನೀಡುವ ದರಕ್ಕೆ ಒಪ್ಪಿಕೊಂಡು ಕೆಲಸ ಮಾಡಲು ತಿಳಿಸಿದರು. ಈ ನಿರ್ಧಾರಕ್ಕೆ ಕಾರ್ಮಿಕ ಮುಖಂಡರು ಒಪ್ಪದಿದ್ದಾಗ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಯವರು ನಿಮಗೆ ಸೊಕ್ಕಿದೆ ಮೊಂಡತನವಿದೆ. ಇದರಿಂದ ಈ ಸಮಸ್ಯೆ ಉದ್ಭವಿಸಿದೆ ಎಂದು ಹೇಳಿ ನೀವು ಒಪ್ಪದಿದ್ದರೆ ಮಾಲೀಕರು ಪರ್ಯಾಯ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತಾರೆ. ಅದಕ್ಕೆ ನಾವು ರಕ್ಷಣೆ ನೀಡಬೇಕಾಗುತ್ತದೆ ಎಂದು ಹೇಳಿದರು. ಈ ಎಲ್ಲಾ ವಿಷಯವನ್ನು ಕಾರ್ಮಿಕರಲ್ಲಿ ಚರ್ಚೆ ಮಾಡಿ ಒಂದು ವಾರದಲ್ಲಿ ತಿಳಿಸುವುದಾಗಿ ಕಾರ್ಮಿಕ ಮುಖಂಡರು ಹೇಳಿದಾಗ, ಇಲ್ಲ ಮೂರೇ ದಿನದಲ್ಲಿ ತಿಳಿಸಲು ಆದೇಶಿಸಿದರು. 17ರಂದು ಸಭೆ ಸೇರಿದ ಎಲ್ಲಾ ಕಾರ್ಮಿಕರು (4 ಸಂಘಟನೆ) ಜಿಲ್ಲಾಧಿಕಾರಿಗಳ ವರ್ತನೆಯನ್ನು ಖಂಡಿಸಿದರು. 21-9-2002ರಂದು ಜಿಲ್ಲೆಯಾದ್ಯಂತ ಹೋರಾಟ ಮಾಡಲು ನಿರ್ಧರಿಸಲಾಯಿತು. ಮಾಲೀಕರ ಪರವಾಗಿರುವ ಜಿಲ್ಲಾಧಿಕಾರಿಗಳು ನಮ್ಮ ಜಿಲ್ಲೆಗೆ ಬೇಡ ಎಂದು ಹೋರಾಟ ಮಾಡಲು ನಿರ್ಧರಿಸಲಾಯಿತು.

ಜಿಲ್ಲಾ ಉಸ್ತುವಾರಿ ಸಚಿವರ ಕೈವಾಡ:

ಗಂಗಾವತಿ ವ್ಯಾಪಾರಸ್ತ ಮಿಲ್ ಮಾಲೀಕರಾದ ಜಿಲ್ಲಾ ಉಸ್ತುವಾರಿ ಸಚಿವರಾದ ಮಲ್ಲಿಕಾರ್ಜುನ ನಾಗಪ್ಪನವರು ಮಾಲೀಕರ ಪರವಾಗಿ ನಿಂತಿದ್ದು, ಅಧಿಕಾರಿಗಳ ಮೇಲೆ ಒತ್ತಡ ತಂದಿದ್ದಾರೆ. ಇವರ ಬಲಗೈ ಬಂಟನಾದ ನಾಗರೆಡ್ಡೆಪ್ಪ ಎಂಬುವರು ಅಧಿಕಾರಿಗಳ ಮೇಲೆ ಹೆಚ್ಚಿನ ಪ್ರಭಾವ ಬೀರಿ 35 ದಿನ ಮಿಲ್‌ಗಳು ಬಂದ್ ಆಗಲು ಕಾರಣರಾಗಿದ್ದಾರೆ. ಜಿಲ್ಲೆಯ ಯಾವೊಬ್ಬ ಜನ ಪ್ರತಿನಿಧಿಗಳು ಕಾರ್ಮಿಕರ ಪರ ಸ್ಪಂದಿಸದಿರುವುದನ್ನುಇಲ್ಲಿ ಗಮನಿಸಬೇಕಾಗಿದೆ.

ಕೊನೆಗೂ ಕಾರ್ಮಿಕರ ಶಕ್ತಿಗೆ ಮಣಿದ ಜಿಲ್ಲಾಡಳಿತ:

ಜಿಲ್ಲಾಧಿಕಾರಿಗಳ ವರ್ಗಾವಣೆಗೆ ಒತ್ತಾಯಿಸಿ ಸೆಪ್ಟೆಂಬರ್ 21ರಿಂದ ಹೋರಾಟ ಪ್ರಾರಂಭವಾಗಲಿದ್ದನ್ನು ಎಲ್ಲ ಮೂಲಗಳಿಂದ ಸಂಗ್ರಹಿಸಿದ ಅಧಿಕಾರಿ ವರ್ಗ ತತ್ತರಿಸಿತು. ಕಾರ್ಮಿಕರ ಐಕ್ಯತೆ ಹೋರಾಟದ ಸ್ವರೂಪವನ್ನು ಅರ್ಥೈಯಿಸಿಕೊಂಡು ಕಾರ್ಮಿಕರ ಶಕ್ತಿಗೆ ಕೊನೆಗೂ ಜಿಲ್ಲಾ ಆಡಳಿತ ಮಣಿಯಬೇಕಾಯಿತು. ಜಿಲ್ಲಾಧಿಕಾರಿಗಳು ತಮಗೆ ನೇರವಾಗಿ ಮಾತನಾಡಲು ಸಾಧ್ಯವಾಗದ ಕಾರಣ ಸಹಾಯಕ ಆಯುಕ್ತರು ಹಾಗೂ ಡಿ.ವೈ.ಎಸ್.ಪಿ. ಮುಖಾಂತರ ಸಂಧಾನ ಏರ್ಪಡಿಸಿದರು. ಜಿಲ್ಲಾಧಿಕಾರಿ ಹಾಗೂ ಎಸ್.ಐ. ಪರವಾಗಿ ಕ್ಷಮೆ ಯಾಚಿಸುವುದಾಗಿ ಹೇಳಿ ಹೋರಾಟವನ್ನು ಕೈ ಬಿಡಲು ವಿನಂತಿಸಿದರು. ನಿಮಗೆ ನಾವು ಎಲ್ಲಾ ರೀತಿಯ ಸಹಕಾರ ನೀಡುವುದಾಗಿ ಹೇಳಿ ಹಮಾಲಿ ದರಗಳನ್ನು ಹೆಚ್ಚಿಗೆ ಮಾಡಲು ಮಾಲೀಕರಿಗೆ ತಿಳಿಸಲಾಗುವುದು, ನೀವ ನಮ್ಮ ಜೊತೆ ಜಿಲ್ಲಾಧಿಕಾರಿಗಳನ್ನು ಭೆಟ್ಟಿಯಾಗಲು ಬನ್ನಿ ಎಂದು ಒತ್ತಾಯಿಸಿ ಜಿಲ್ಲಾಧಿಕಾರಿಯ ಹತ್ತಿರ ಕರೆದುಕೊಂಡು ಹೋಗಿ ಸಂದಾನ ಮಾಡಿಸಿದರು. ಶೇಕಡಾ 10ರಷ್ಟು ಹಮಾಲಿ ದರ ಏರುವುದರ ಜೊತೆಗೆ ಭವಿಷ್ಯ ನಿಧಿ ಯೋಜನೆ ಜಾರಿ, ಗುರುತಿನ ಪತ್ರ, ಹಾಜರಿ ಪುಸ್ತಕ, ವೇತನ ಚೀಟಿ, ಶೌಚಾಲಯ ಇನ್ನಿತರ ಸೌಲಭ್ಯಗಳನ್ನು ಮಾಲೀಕರಿಗೆ ನೀಡಲು ಆದೇಶ ನೀಡಿದರು. ಮಾಲೀಕರು ಜಾರಿ ಮಾಡದೇ ಇದ್ದರೆ ಅಂತಹವರ ಮೇಲೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ಇದಕ್ಕೆ ಮಾಲೀಕರು ಒಪ್ಪದಿದ್ದಾಗ ಜಿಲ್ಲಾಧಿಕಾರಿಗಳು ಕಾರ್ಮಿಕರ ಪರವಾದಿಸಿ ನೀವು ಜಾರಿ ಮಾಡಬೇಕು ಕಾನೂನು ಇದೆ ಎಂದು ಹೇಳಿದ್ದು ಕಾರ್ಮಿಕರ ಶಕ್ತಿಯನ್ನು ಒಗ್ಗಟ್ಟನ್ನು ಅರ್ಥ ಮಾಡಿಕೊಂಡೇ ಈ ರೀತಿಯಾಗಿ ಗಂಗಾವತಿ ತಾಲೂಕಿನಲ್ಲಿ ಕಾರ್ಮಿಕರ ಹಾಗೂ ಮಾಲೀಕರ ನಡುವೆ ತಲೆದೂರಿದ್ದ 35 ದಿನದ ಬಿಕ್ಕಟ್ಟು ಪರಿಹಾರವಾಯಿತು.

○

ಇನ್ನೊಂದು ಸೆಪ್ಟೆಂಬರ್ 11

ಪುಟ 11 ರಿಂದ

● "ಸೋವಿಯತ್‌ಗಳು ಚಿಲಿಯಲ್ಲಿ 'ಕ್ಯೂಬಾ ರೀತಿಯ' ಪರಿಸ್ಥಿತಿ ಉಂಟಾಗದಂತೆ ಎಚ್ಚರ ವಹಿಸಿದ್ದಾರೆ. ಅಲೆಂದೆಗೆ ತಾಳ್ಮೆ ಮತ್ತು ಜಾಗ್ರತೆಯಿಂದ ಇರುವಂತೆ ಅವರು ಸಲಹೆ ನೀಡುತ್ತಿದ್ದಾರೆ. ಅಮೆರಿಕದ ಸರ್ಕಾರದ ಜತೆ ಸಂಬಂಧ ಹದಗೆಡದಂತೆ ಎಚ್ಚರಿಕೆ ವಹಿಸಬೇಕು ಎನ್ನುತ್ತಿದ್ದಾರೆ...."

- ಸಿಐಎ ವರದಿಗಳು, 1973

★ ★ ★

● "ಅಮೆರಿಕದ ನೌಕಾಸೇನೆಯ ಯುದ್ಧ ಹಡಗುಗಳು ಚಿಲಿಯ ಬಳಿ ಸಮುದ್ರದಲ್ಲಿ ತಯಾರಾಗಿದ್ದವು. ಚಿಲಿಯ ನೆರೆಯ ಅರ್ಜೆಂಟಿನಾದಲ್ಲಿ 32 ಗೂಢಾಚಾರ ಮತ್ತು ಯುದ್ಧ ವಿಮಾನಗಳು ಕಾರ್ಯಾಚರಣೆಯಲ್ಲಿದ್ದವು. ಅಮೆರಿಕದ ಪೂರ್ಣ ಕಮಾಂಡ್ ಮತ್ತು ಕಮ್ಯುನಿಕೇಶನ್ ವ್ಯೂಹ ಇಡೀ ಈ ಕಾರ್ಯಾಚರಣೆಯಲ್ಲಿ ಭಾಗವಹಿಸಿದವು. 'ಸ್ಕೂಲ್ ಆಫ್ ಅಮೆರಿಕ'ದಲ್ಲಿ ವಿಶೇಷ ತರಬೇತಿ ಪಡೆದ ಮಿಲಿಟರಿಯಲ್ಲಿನ ಉಗ್ರಗಾಮಿ ಅಧಿಕಾರಿಗಳು ಸರ್ಕಾರವನ್ನು ಕಿತ್ತೊಗೆದು ಅಲೆಂಡೆ ಮತ್ತು ಹಲವು ಕ್ಯಾಬಿನೆಟ್ ಮಂತ್ರಿಗಳ ಕೊಲೆ ಮಾಡಿದ್ದಾರೆ. ವಿಶ್ವ ವಿದ್ಯಾಲಯಗಳನ್ನು ಮಿಲಿಟರಿ ಆಡಳಿತಕ್ಕೆ ಒಳಪಡಿಸಲಾಗಿದೆ. ಎಲ್ಲಾ ರಾಜಕೀಯ ಪಕ್ಷಗಳನ್ನು ನಿಷೇಧಿಸಲಾಗಿದೆ. ಸಿಐಎ ತಯಾರಿಸಿದ ಪಟ್ಟಿಯಲ್ಲಿರುವ ಸಾವಿರಾರು ಅಮೆರಿಕಕ್ಕೆ ಮತ್ತು ಮಿಲಿಟರಿ ಸರ್ಕಾರಕ್ಕೆ ಅಪಾಯ ತರಬಹುದಾದ ವ್ಯಕ್ತಿಗಳನ್ನು ಬಂಧಿಸಿ, ಜೈಲಿನಲ್ಲಿಟ್ಟು ಚಿತ್ರಹಿಂಸೆ ಕೊಡಲಾಗುತ್ತಿದೆ. ಇಲ್ಲವೆ ಗುಂಡಿಟ್ಟು ಕೊಲ್ಲಲಾಗಿದೆ. ಜನರಲ್ ಪಿನೋಶೆ ಸರ್ಕಾರ ಇಡೀ ದೇಶದ ಮೇಲೆ ಪೂರ್ಣ ನಿಯಂತ್ರಣ ಹೊಂದಿದೆ".

- ಸಿಐಎ ವರದಿಗಳು, 1973

★ ★ ★

● "ಜನರಲ್ ಪಿನೋಶೆ ಚಿಲಿಯಲ್ಲಿ ಮಾತ್ರವಲ್ಲ ಭಯೋತ್ಪಾದನೆ ಮಾಡಿರುವುದು. ಆತ ಅಮೆರಿಕದ ನೆಲದ ಮೇಲೂ ಭಯೋತ್ಪಾದಕ ಕೃತ್ಯಗಳನ್ನು ಎಸಗಿದ್ದಾನೆ. 1976 ರಲ್ಲಿ ವಿಶ್ವಸಂಸ್ಥೆಯ ಅಧಿಕಾರಿಯೊಬ್ಬನನ್ನು ಚಿತ್ರಹಿಂಸೆ ಕೊಟ್ಟು ಕೊಲೆ ಮಾಡಿದ್ದಾರೆ. ವಾಶಿಂಗ್‌ಟನ್‌ನಲ್ಲೇ 1976 ರಲ್ಲಿ ಕಾರ್ ಬಾಂಬ್ ಮೂಲಕ ಅಲೆಂದೆ ಸರ್ಕಾರದಲ್ಲಿ ವಿದೇಶ ಮಂತ್ರಿಯಾಗಿದ್ದ ಒರ್ಲೆಂಡೊ ಮತ್ತು ಆತನ ಅಮೆರಿಕನ್ ಸಹಾಯಕ ರೊನ್ನಿಯನ್ನೂ ಕೊಲೆ ಮಾಡಿದ್ದಾರೆ.

- ಅಮೆರಿಕನ್ ವಾಚ್ ವರದಿ, 1989 ಮತ್ತು 1994

ಇನ್ನೊಂದು ಸೆಪ್ಟೆಂಬರ್ 11 ದುರಂತದ ಮತ್ತೊಂದು ವಾರ್ಷಿಕ

ಸೆಪ್ಟೆಂಬರ್ 11 ಎಂದರೆ ಈಗ ನೆನಪಿಗೆ ಬರುವುದು ಕಳೆದ ವರ್ಷ ನ್ಯೂಯಾರ್ಕ್‌ನ ವಿಶ್ವ ವಾಣಿಜ್ಯ ಕೇಂದ್ರದ ಅವಳಿಗೋಪುರಗಳ ಮೇಲಿನ ಭಯೋತ್ಪಾದಕ ಕೃತ್ಯ. ಆದರೆ ಈ ದಿನ ಇನ್ನೊಂದು ಭಯೋತ್ಪಾದಕ ಕೃತ್ಯ ಹಲವು ವರ್ಷಗಳ ಹಿಂದೆ ನಡೆದಿತ್ತು ಎಂದು ಬಹಳ ಜನರಿಗೆ ಮರೆತುಹೋಗಿದೆ. 1973, ಸೆಪ್ಟೆಂಬರ್11 ರಂದು ಜನರಲ್ ಪಿನೋಶೆ ಅಧ್ಯಕ್ಷ ಅಲೆಂದೆಯವರ ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ಪ್ರಗತಿಪರ ಸರ್ಕಾರವನ್ನು ಉರುಳಿಸಿ ಮಿಲಿಟರಿ ಸರ್ವಾಧಿಕಾರವನ್ನು ಸ್ಥಾಪಿಸಿದ್ದು. ಜನರಲ್ ಪಿನೋಶೆಯ ಭಯೋತ್ಪಾದಕ ಮಿಲಿಟರಿ ಸರ್ವಾಧಿಕಾರದ ಹಿಂದೆ ಇದ್ದದ್ದು ಅಮೆರಿಕದ ಸಿಐಎ ಎಂಬುದು ಈಗ, ಅದರದೇ ದಾಖಲೆ(ಈಗ ಬಹಿರಂಗಗೊಂಡಿರುವ)ಗಳಿಂದ ಜಗಜ್ಜಾಹೀರಾಗಿದೆ. ಸಾವಿರಾರು ಜನ ಪಿನೋಶೆ ಜೈಲುಗಳಲ್ಲಿ ನರಕ-ಯಾತನೆಯಲ್ಲಿ ಸತ್ತರು. ಲಕ್ಷಾಂತರ ಜನ 'ಮಾಯ'ವಾದರು. ಈ ಸೆಪ್ಟೆಂಬರ್ 11 ರಂದು ಚಿಲಿಯ ರಾಜಧಾನಿಯಲ್ಲಿ ನ್ಯೂಯಾರ್ಕ್‌ನ ವಿಶ್ವವಾಣಿಜ್ಯ ಕೇಂದ್ರದ ದುರಂತದಲ್ಲಿ ಸತ್ತವರಿಗೆ ಶೋಕ ಆಚರಿಸಲಾಯಿತು. ಪಿನೋಶೆ-ಅಮೆರಿಕದ ಭಯೋತ್ಪಾದಕ ಕೃತ್ಯದಲ್ಲಿ ಸತ್ತವರಿಗೆ ಅಳುವವರಿಲ್ಲವೇ? ಕೆಲವು ಜೀವಗಳು ಇನ್ನೂ ಕೆಲವು ಜೀವಗಳಿಗಿಂತ ಹೆಚ್ಚು ಅಮೌಲ್ಯವಾದದ್ದೇ? ಪಿನೋಶೆ- ಅಮೆರಿಕದ ಭಯೋತ್ಪಾದನೆಗೆ ಶಿಕ್ಷೆ ಇಲ್ಲವೇ? ಎಂದು ಕೇಳುವ ಚಿಲಿಯ ಟಿಟೊ ಟ್ರಿಕೊಟ್ ರ ಲೇಖನ ಮತ್ತು ಚಿಲಿಯ ದುರಂತದ ಸಂಕ್ಷಿಪ್ತ ಇತಿಹಾಸ ಇಲ್ಲಿದೆ. ಇನ್ನೊಂದು ಸೆಪ್ಟೆಂಬರ್ 11 ದುರಂತದ ಅಪರಾಧಿಗಳಿಗೂ ಶಿಕ್ಷೆಯಾಗಬೇಕು. ಆ ದುರಂತವನ್ನು ಮರೆಯದಿರೋಣ.

ಶರತ್‌ಚಂದ್ರ

ಅದೊಂದು ಮೋಡ ಮುಚ್ಚಿದ ಬೆಳಗು. ನಮ್ಮೆಲ್ಲರ ಕನಸುಗಳನ್ನು ಮಿಲಿಟರಿ ಒಡೆದು ಹಾಕಿತ್ತು. ಜನರಲ್ ಪಿನೋಶೆ ಅಮೆರಿಕದ ಬೆಂಬಲದಿಂದ ಅಲೆಂದೆಯ ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ಸರ್ಕಾರವನ್ನು ಮಿಲಿಟರಿ ಕ್ಷಿಪ್ರಕ್ರಾಂತಿಯಲ್ಲಿ ಉರುಳಿಸಿದ್ದ. ಇಪ್ಪತ್ತೊಂಬತ್ತು ವರ್ಷದ ನಂತರ ಅದೇ ದಿನ ಚಿಲಿಯ ಅಗ್ನಿಶಾಮಕ ದಳದವರು ಪ್ರಾಣ ಕಳೆದುಕೊಂಡ ಸಾವಿರಾರು ಜನರ ನೆನಪಿನಲ್ಲಿ ತಮ್ಮ ಸೈರನ್ನುಗಳನ್ನು ಮೊಳಗಿಸಿದರು.

ಅದೊಂದು ಶೋಕಸೂಚಕವಾಗಿತ್ತು. ಆದರೆ ಚಿಲಿಯ ಮಿಲಿಟರಿ ಕ್ಷಿಪ್ರಕ್ರಾಂತಿಯ ದುರಂತದಲ್ಲಿ ಸತ್ತವರಿಗಾಗಿ ಆಗಿರಲಿಲ್ಲ. ಅವರ ಶೋಕ ಸೂಚನೆ ಕಳೆದ ವರ್ಷ ಇದೇ ದಿನ ನ್ಯೂಯಾರ್ಕ್‌ನ ವಿಶ್ವ ವಾಣಿಜ್ಯ ಕೇಂದ್ರದ ಕಟ್ಟಡ ದುರಂತದಲ್ಲಿ ಮಡಿದವರಿಗೆ ಮಾತ್ರವಿತ್ತು. ಅದು ಒಂದು ಭಯಾನಕ ದುರಂತವಾಗಿತ್ತು. ಆ ಬಗ್ಗೆ ಎರಡು ಮಾತಿಲ್ಲ. ಆದರೆ ನಮ್ಮ ಚಿಲಿಯ ಅಗ್ನಿಶಾಮಕ ದಳದವರು ಕಳೆದ 20 ವರ್ಷಗಳಲ್ಲಿ ಮಿಲಿಟರಿ ಸರ್ವಾಧಿಕಾರದ ನರಬೇಟೆಯಲ್ಲಿ ಸತ್ತ ಚಿಲಿಯನ್ನರ ಬಗ್ಗೆ ಶೋಕ ಸೂಚಿಸಿಲ್ಲ ಎಂಬುದು ಇನ್ನೂ ದೊಡ್ಡ ದುರಂತವಲ್ಲವೇ? ಜನರಲ್ ಪಿನೋಶೆಯ ಸರ್ವಾಧಿಕಾರ ಮಕ್ಕಳನ್ನಾಗಿ ಆಹುತಿ ತೆಗೆದುಕೊಂಡಿತ್ತು.

ದುಃಖ ಮತ್ತು ನೋವುಗಳನ್ನು ಹೋಲಿಸುವ ಮಾತಲ್ಲ ಇದು. ಆದರೆ ಕಳೆದ ಒಂದು ವರ್ಷದಲ್ಲಿ ಅಮೆರಿಕದ ಮಾಧ್ಯಮಗಳು ಉತ್ತರ ಅಮೆರಿಕದ ಜನಗಳ ಜೀವನದ ಮೌಲ್ಯ, ಇತರ ಎಲ್ಲದ್ದಕ್ಕಿಂತ ಹೆಚ್ಚು ಅಮೂಲ್ಯವಾದದ್ದು ಎಂದು ಎಲ್ಲರನ್ನು ನಂಬಿಸಲು ಹೊರಟಿದ್ದಾರೆ. ನಾವೆಲ್ಲ ಮೂರನೇ ಜಗತ್ತಿನ ನಾಗರಿಕರು ತಾನೆ? ನಾವು ಜೈಲಿನಲ್ಲಿ ಹಾಕಿ, ಚಿತ್ರಹಿಂಸೆ ಕೊಟ್ಟು ಸಾಯಿಸಲಿಕ್ಕೆ ಲಾಯಕ್ಕು. ನಮ್ಮ ದೇಶದಲ್ಲಿ ಆದ ಮಿಲಿಟರಿ ಕ್ಷಿಪ್ರಕ್ರಾಂತಿ ಅಮೆರಿಕದಲ್ಲಿ ಯೋಜಿತವಾದದ್ದು ಎಂದು ತಿಳಿದ ಮೇಲೆ ಇನ್ನೇನು ಹೇಳಲು ಸಾಧ್ಯ?

ಅಮೆರಿಕದ ಅಧ್ಯಕ್ಷರುಗಳು ಚಿಲಿಯಲ್ಲಿ ಸತ್ತವರ ಬಗ್ಗೆ ಒಂದು ತೊಟ್ಟು ಕಣ್ಣೀರು ಹಾಕಿಲ್ಲ. ನಮ್ಮ ವಿಧವೆಯರಿಗೆ ಸಂತಾಪದ ಹೂ ಗೊಂಚಲು ಕಳಿಸಿಲ್ಲ. ಅಮೆರಿಕದ ಸರ್ಕಾರ ಮತ್ತು ಮಾಧ್ಯಮಗಳಿಗೆ ತಮ್ಮ ಮತ್ತು ಇತರರ ನೋವು ಅಳೆಯಲು ಬೇರೆ ಬೇರೆ ಅಳತೆಗೋಲು ಇದೆ. ಈ ಇಬ್ಬಗೆ ನೀತಿ ಮತ್ತು ಎಡಬಿಡಂಗಿತನವನ್ನು ತಮಗೆ ನುಂಗಲೂ ಆಗುತ್ತಿಲ್ಲ. ಇಂತಹ ಸಾಂಕೇತಿಕ ದಿನದಂದು ನಮ್ಮ ಅಧ್ಯಕ್ಷರು ಏನು ಮಾಡುತ್ತಾರೆ? ಅಮೆರಿಕದ ರಾಯಭಾರಿ ಕಛೇರಿಯಲ್ಲಿ ಶೋಕ ಸಂತಾಪ ಸಭೆಗೆ ಹೋಗುತ್ತಾರೆ. ಅಲ್ಲಿ ಅಮೆರಿಕನ್ ರಾಯಭಾರಿ ವಿಲಿಯಂ ಬ್ರೌನ್‌ಫೀಲ್ಡ್ "ಅಮೆರಿಕದ ಸಂಯುಕ್ತ ಸಂಸ್ಥಾನವನ್ನು ದ್ವೇಷಿಸುವ ಜನರನ್ನು ನಿಯಂತ್ರಿಸಬೇಕು. ಜೈಲಿಗೆ ಹಾಕಬೇಕು ಇಲ್ಲವೇ ನಾಶ ಮಾಡಬೇಕು" ಎಂದು ನಮ್ಮ ಅಧ್ಯಕ್ಷರ ಸಮ್ಮುಖದಲ್ಲೇ ಅಪ್ಪಣೆ ಕೊಡುತ್ತಾರೆ.

ಯಾವ ರೀತಿಯ ಜಗತ್ತಿನಲ್ಲಿ ನಾವು ಇದ್ದೇವೆ? ಅಮೆರಿಕದ ಮಿಲಿಟರಿ ಯಂತ್ರ ಭಯೋತ್ಪಾದನೆಯ ವಿರುದ್ಧ ಹೋರಾಟದ ಹೆಸರಲ್ಲಿ ಹಲವು ದೇಶಗಳನ್ನು ಆಕ್ರಮಿಸುವುದು, ವಿನಾಶ ಮಾಡುವುದರಲ್ಲಿ ತೊಡಗಿದೆ. ನಾವು ನಿಷ್ಕ್ರಿಯರಾಗಿ ನೋಡುತ್ತಾ ಬಿದ್ದಿರಬೇಕೆ? ವಿಶ್ವವಾಣಿಜ್ಯ ಕೇಂದ್ರ ದುರಂತದ ಹೆಸರಲ್ಲಿ, ಅಮೆರಿಕಕ್ಕೆ ನಮ್ಮ ಖಂಡ (ದಕ್ಷಿಣ ಅಮೆರಿಕ) ಮತ್ತು ಎಲ್ಲೆಡೆ ಅದರ ಬೇಕು-ಬೇಡಗಳನ್ನು ಹೊರಿಸುವ ನೈತಿಕ ಅಧಿಕಾರವಿಲ್ಲ. ಲ್ಯಾಟಿನ್ ಅಮೆರಿಕದಲ್ಲಿ ನಮಗೆ ಉತ್ತರ ಅಮೆರಿಕದ ಈ ದೈತ್ಯನ ಭಯೋತ್ಪಾದಕ ಕೃತ್ಯಗಳ ಪರಿಚಯ ಚೆನ್ನಾಗಿ ಇದೆ. ಅಮೆರಿಕದ 'ದಂಗೆಕೋರ-ನಿಯಂತ್ರಣ'ಕ್ಕೆ ವಿಶೇಷ ತರಬೇತಿ ಸಂಸ್ಥೆ 'ಸ್ಕೂಲ್ ಆಫ್ ಅಮೆರಿಕಾಸ್' ದಕ್ಷಿಣ ಅಮೆರಿಕದ ನರಹಂತಕ ಪಡೆಗಳ ತರಬೇತಿ ಮಾಡುವುದು. ಇವರ ನರಬೇಟೆಯಿಂದ ಲಕ್ಷಕ್ಕೂ ಹೆಚ್ಚು ಜನ 'ಮಾಯ'ವಾಗಿದ್ದಾರೆ. ನಮ್ಮ ಖಂಡದಲ್ಲೇ ಇದು ವಿಶ್ವವಾಣಿಜ್ಯ ಕೇಂದ್ರದ ಬಲಿಯಾದ ನತದೃಷ್ಟರ 30 ಪಟ್ಟು ಎಂದು ನೆನಪಿರಲಿ.

ನೋವಿನಲ್ಲಿ ಅಂಕಿ-ಸಂಖ್ಯೆಗಳ ಸ್ಥಳವಿಲ್ಲ, ನಾವೂ ಒಪ್ಪಿಕೊಳ್ಳೇವೆ. ಆದರೆ ಇಬ್ಬಗೆಯ ನೀತಿಯನ್ನು ಖಂಡಿಸಲು ನಮಗೆ ಖಂಡಿತ ಅಧಿಕಾರ ಇದೆ. ಅಮೆರಿಕದ ರಾಯಭಾರ ಕಚೇರಿಯಲ್ಲಿ ಕಂಬನಿ ಮಿಡಿದು ಬಂದ ನಮ್ಮ ಅಧ್ಯಕ್ಷರು 'ಇಂದಿನ ದಿನ 1973 ರಲ್ಲಿ ನಡೆದದ್ದು ಚರಿತ್ರೆ ಎಂದು ನಮ್ಮ ಯುವಜನ ತಿಳಿಯಬೇಕು. ನಾವು ಭವಿಷ್ಯದತ್ತ ನೋಡಬೇಕಾಗಿದೆ' ಎಂದರು. ಅಧ್ಯಕ್ಷರ ಭಾಷಣದ ನಂತರ ರಾಜಧಾನಿ ಸ್ಯಾಂಟಿಯಾಗೋ ಮತ್ತು ಚಿಲಿಯ ಎಲ್ಲಾ ಪ್ರಮುಖ ಪಟ್ಟಣಗಳಲ್ಲಿ ಲಕ್ಷಾಂತರ ಜನರು ಅದ್ಯಕ್ಷರಿಗೆ ಉತ್ತರ ಕೊಟ್ಟರು. ಇವರಲ್ಲಿ ಯುವಜನರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದರು. ಚಿಲಿಯಾ ದುರಂತಮಯ ದಿನದ ಬಗ್ಗೆ ತಮ್ಮ ನಿಜವಾದ ಭಾವನೆಗಳನ್ನು ಅವರು ತೋರಿಸಿದರು. ಮತ ಪ್ರದರ್ಶನಗಳು, ಮೇಣದಬತ್ತಿ ಮೆರವಣಿಗೆಗಳು, ಸಂಗೀತ ಕಛೇರಿಗಳು, ಸಭೆಗಳು, ಸೆಮಿನಾರುಗಳಲ್ಲಿ ಆ ದುರಂತಮಯ ದಿನದಲ್ಲಿ ತಾವು ಕಳೆದುಕೊಂಡ ಆಪ್ತರನ್ನು ನೆನಪಿಸಿಕೊಂಡರು. ಆ ಬಗ್ಗೆ ಚಿಂತನೆ ನಡೆಸಿದರು. ನಿರ್ಧಾರಗಳನ್ನು ಕೈಗೊಂಡರು.

ಅವರು ತೋರಿಸಿದ ಭಾವನೆಗಳ ಸಾರಾಂಶ- ಅಮೆರಿಕದ ಸಂಯುಕ್ತ ಸಂಸ್ಥಾನವಾಗಿ ಅಥವಾ ಇನ್ಯಾರೇ ಆಗಲಿ ನಮ್ಮ ನೆನಪುಗಳನ್ನು ಕದಿಯಲು ಅಧಿಕಾರವಿಲ್ಲ. ಸೆಪ್ಟೆಂಬರ್ 11, 1973 ನಮ್ಮೆಲ್ಲರ ಎದೆ ಒಡೆದ, ಕಂಬನಿಗಳನ್ನು ತುಂಬಿದ ದಿನ. ನಮ್ಮ ಕಂಬನಿಗಳನ್ನು ಬತ್ತಿಸಲು ಯಾರಿಗೂ ನಾವು ಬಿಡುವುದಿಲ್ಲ.

-ಟಿಟೋ ಟ್ರಿಕೋಟ್ (ಗಾರ್ಡಿಯನ್‌ನಲ್ಲ)

ಚಿಲಿಯ ಸತ್ಯ ಹೇಳುವ ದಾಖಲೆಗಳು

● ಚಿಲಿ ದಕ್ಷಿಣ ಅಮೆರಿಕಾದಲ್ಲೇ ಅತ್ಯಂತ ಹಳೆಯ ಮತ್ತು ಸುಭದ್ರ ಪ್ರಜಾಸತ್ತೆಯಾಗಿತ್ತು. ಆದರೆ ಇಪ್ಪತ್ತನೇ ಶತಮಾನದ ಮಧ್ಯ ಭಾಗದಲ್ಲಿ ದೇಶದ ಅರ್ಧದಷ್ಟು ಜನ ಆಹಾರ, ಮನೆ, ಆರೋಗ್ಯ ಸೇವೆ, ಶಿಕ್ಷಣದ ಭೀಕರ ಅಭಾವ ಎದುರಿಸುತ್ತಿದ್ದರು. ಈ ಪ್ರಶ್ನೆಗಳನ್ನೆತ್ತಿಕೊಂಡ ಡಾಕ್ಟರ್ ಸಲ್ವಡೋರ್ ಅಲೆಂದೆ ಚುನಾವಣೆಗಳಲ್ಲಿ 1958 ರಲ್ಲಿ, ಮತ್ತು 1964 ರಲ್ಲಿ ವಿಜಯದ ಹತ್ತಿರ ಬಂದಿದ್ದರು. ಇದು ಅಮೆರಿಕದ ಸಂಯುಕ್ತ ಸಂಸ್ಥಾನದ ಆಳರಸರಿಗೆ ಭಾರಿ 'ಬೆದರಿಕೆ'ಯಾಗಿ ಕಂಡಿತ್ತು. ಅಲೆಂದೆಯ 'ಬೆದರಿಕೆ' ಅಮೆರಿಕದ ಆಳರಸರಿಗೆ ಭಾರಿ 'ಬೆದರಿಕೆ'ಯಾಗಿ ಕಂಡಿತ್ತು. ಅಲೆಂದೆಯ 'ಬೆದರಿಕೆ' ಅಮೆರಿಕದ ಆಳರಸರಿಗೆ ಆರ್ಥಿಕ ಹಾಗೂ ಮಿಲಿಟರಿ ರೂಪದಲ್ಲಿರಲಿಲ್ಲ. ಅದು ಸೈದ್ಧಾಂತಿಕ ಬೆದರಿಕೆಯಾಗಿತ್ತು. ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ಸೋಶಲಿಸ್ಟ್ ಸಂವಿಧಾನವನ್ನು ಗೌರವಿಸುತ್ತಾ 'ಒಳ್ಳೆಯ ಜನಪರ ಕೆಲಸ ಮಾಡುವ ಒಳ್ಳೆ ಉದಾಹರಣೆ' ಅವರಿಗೆ ಭಯಾನಕ ಸೈದ್ಧಾಂತಿಕ ಸವಾಲಾಗಿತ್ತು. ಆ ಸವಾಲನ್ನು ಅವರು ಹೇಗೆ ಎದುರಿಸಿದರು ಎಂದು ಅವರ ಮಾತುಗಳಲ್ಲೇ ಕೇಳುವುದು ಒಳ್ಳೆಯದು.

★★★

● ಚಿಲಿಯ ಜತೆ ಅಮೆರಿಕದ ರಾಷ್ಟ್ರೀಯ ಹಿತಾಸಕ್ತಿಗಳು ಏನೂ ತಳುಕು ಹಾಕಿಕೊಂಡಿಲ್ಲ. .... ಅಲೆಂದೆ ಸರ್ಕಾರದಿಂದ ಜಾಗತಿಕ ಮಿಲಿಟರಿ ಸಮತೋಲನಕ್ಕೆ ಏನೂ ಧಕ್ಕೆ ಬರುವುದಿಲ್ಲ... ಆದರೆ ಅಲೆಂದೆ ವಿಜಯ ಅಮೆರಿಕದ ಮನೋಬಲಕ್ಕೆ ತೀವ್ರ ಧಕ್ಕೆ, ಮಾರ್ಕ್ಸ್‌ವಾದಿ ಮನೋಬಲವನ್ನು ಹೆಚ್ಚಿಸಿ ಅದರ ಮುನ್ನಡೆಗೆ ಕಾರಣವಾಗಬಹುದು"

- ಅಲೆಂದ ವಿಜಯದ ಮೊದಲಿನ ಸಿಐಎ ವರದಿ (ಸೆಪ್ಟೆಂಬರ್ 7, 1970)

★★★

● "ಕಮ್ಯುನಿಸ್ಟ್ ನಿಯಂತ್ರಣದಲ್ಲಿರುವ ಯೂನಿಯನ್‌ಗಳು ಈಗ ಶಾಂತಿಯುತ ದಾರಿ ಸಾಧ್ಯವಿರುವ ಬದಲಿ ಎಂದು ಈಗ ಪರಿಗಣಿಸುತ್ತಾರೆ"


- ಅಮೆರಿಕದ ಸೆನೆಟ್ ವಿದೇಶಿ ನೀತಿ ಸಮಿತಿ (ಜುಲೈ 15, 1968)

★★★

● ಒಂದು ದೇಶದ ಜನರ ಬೇಜವಾಬ್ದಾರಿಯಿಂದಾಗಿ, ಆದೇಶ ಕಮ್ಯುನಿಸ್ಟ್ ಆಗುವುದನ್ನು ನೋಡುತ್ತಾ ನಾವು ನಿಂತಿರಬೇಕು ಎಂಬುದು ನನಗೆ ಅರ್ಥವಾಗುತ್ತಿಲ್ಲ"

- ಚಿಲಿಯ ಮತದಾರರ ಬಗ್ಗೆ ಹೆನ್ರಿ ಕಿ ಸಿಂಗರ್, ಅಧ್ಯಕ್ಷ ನಿಕ್ಸನ್‌ಗೆ 'ರಾಷ್ಟ್ರೀಯ ಭದ್ರತಾ' ಸಲಹೆಗಾರ (1970 ರ ಚುನಾವಣೆಗಳ ಸಮಯದಲ್ಲಿ)





ಪಾಬ್ಲೊ ನರೂದ, ವಿಕ್ಟರ್ ಝುರಾ ರೊಂದಿಗೆ ಅಲೆಂದ

★★★

● "ಹತ್ತರಲ್ಲಿ ಒಂದು ಸಫಲತೆ ಸಾಧ್ಯತೆ ಇರಬಹುದು. ಆದರೆ ಚಿಲಿಯನ್ನು ಹೇಗಾದರೂ ರಕ್ಷಿಸಿ!.... ಯಾವುದೇ ತೊಡಕುಗಳ ಬಗ್ಗೆ ತಲೆಕೆಡಿಸಿಕೊಳ್ಳಬೇಡಿ.... 10 ಮಿಲಿಯ ಡಾಲರನ್ನು ನಿಮಗೆ ಕೊಡುತ್ತಿದ್ದೇನೆ. ಹೆಚ್ಚಿಗೆ ಬೇಕಿದ್ದರೆ ಕೇಳಿ.... ಚಿಲಿಯ ಆರ್ಥಿಕದ ಆರ್ತನಾದ ನಮಗೆ ಕೇಳಿಸುವಂತೆ ಮಾಡಿ..."

- ಸಿಐಎ ಡೈರೆಕ್ಟರ್ ರಿಚರ್ಡ್ ಹೆಲ್ಮ್ಸ್ ತಮ್ಮ ಚಿಲಿಯ ಅಧಿಕಾರಿಗಳಿಗೆ ಬರೆದ ಪತ್ರ(ಅಲೆಂದೆ ಸರ್ಕಾರ ಆಳಲು ಬಿಡಬಾರದು ಎಂಬ ನಿಕ್ಸನ್ ಆಜ್ಞೆಯ ಮೇರೆಗೆ)

★★★

● ಚಿಲಿಯಲ್ಲಿ ದಕ್ಷಿಣ ಅಮೆರಿಕಾ, ಮಧ್ಯ ಅಮೆರಿಕದ ದೇಶಗಳಲ್ಲಿ ನಮ್ಮ 'ಚಿಲಿ ಪ್ರಚಾರ'ಕ್ಕೆ ವ್ಯವಸ್ಥೆ ಮಾಡಲಾಗಿದೆ. ನ್ಯೂಯಾರ್ಕ್ ಟೈಮ್ಸ್ ಮತ್ತು ವಾಶಿಂಗ್‌ಟನ್ ಪೋಸ್ಟ್‌ಗಳೂ ಸಹಕರಿಸುತ್ತಿವೆ. ಚಿಲಿಯ ಬೆಳವಣಿಗೆಗಳ ಬಗ್ಗೆ ನಮ್ಮ ಧೋರಣೆಯ ಪ್ರಚಾರ ಉತ್ತಮವಾಗಿ ಭರದಿಂದ ಸಾಗಿದೆ.

- ಸಿಐಎ ಟೆಲಿಗ್ರಾಮ್ (ಸೆಪ್ಟೆಂಬರ್ 25, 1970)

★★★

● "ಮಿಲಿಟರಿ ಕ್ಷಿಪ್ರಕ್ರಾಂತಿ ನಡೆಸಲು ನಿರಾಕರಿಸಿದ ಚಿಲಿಯ ಸೈನ್ಯ ಮುಖ್ಯಸ್ಥನನ್ನು ಕೊಲೆ ಮಾಡಲು ಸಿಐಎ ವ್ಯವಸ್ಥೆ ಮಾಡಿತ್ತು. ಚಿಲಿಯ ಮಿಲಿಟರಿಯ ರಾಜಕೀಯವಾಗಿ ತಟಸ್ಥ ಮತ್ತು ಸಂವಿಧಾನಾತ್ಮಕ ನಿಷ್ಕ್ರಿಯತೆಯನ್ನು ಸಿಐಎ ಸಹಿಸುವುದಿಲ್ಲ"

(ಅಮೆರಿಕದ ಸೆನೆಟ್ ವರದಿ - "ಸಿಐಎ ರಾಜಕೀಯ ಕೊಲೆಗಳ ಬಗ್ಗೆ" ನವೆಂಬರ್ 20, 1975)

★★★

● ಅಲೆಂದೆಯ ಚಿಲಿಗೆ ಒಂದು ನಟ್, ಒಂದು ಬೋಲ್ಟ್ ತಲುಪಲು ನಾವು ಬಿಡುವುದಿಲ್ಲ.

- ಎಡ್ವರ್ಡ್ ಕೊರಿ(ಅಮೆರಿಕದ ರಾಯಭಾರಿ)


★★★

● "ಅಲೆಂದೆಯನ್ನು ತಡೆಯಲು ಹೊರಟಿರುವವರಲ್ಲಿ ಒಂದು ಆಸೆ ಉಳಿದುಕೊಂಡಿದೆ. ಹದಗೆಡುತ್ತಿರುವ ಆರ್ಥಿಕತೆ ಭಾರಿ ಹಿಂಸಾಚಾರಕ್ಕೆ ಎಡೆಮಾಡಿಕೊಡುತ್ತದೆ. ಇದು ಮಿಲಿಟರಿ ಕ್ಷಿಪ್ರಕ್ರಾಂತಿಗೆ ನೆಪವಾಗಬಹುದು"

-ಐಟಿಟಿ ಎಂಬ ದೈತ್ಯ ಅಮೆರಿಕನ್ ಕಂಪನಿಯ ವರದಿಯಿಂದ

★★★

ಪುಟ 10 ಕ್ಕೆ



ಕಥೆ

ಒಂದು ಮಂಚದ ಕಥೆ

ಡಾ.ಆರ್.ವಿ.ಭಂಡಾರಿ

ಅಡಿಕೆ ಕುಯ್ಯಲೆಂದು ಮರ ಹತ್ತಿದ ಅಪ್ಪ ಲಿಂಗಪ್ಪ ಮರಮುರಿದು ಕೆಳಗೆ ಬಿದ್ದು ಸತ್ತ. ಸಂಸಾರದ ಪೂರ್ಣಹೊಣೆ ಅವ್ವ ಸಾವಿತ್ರಿಯ ಮೇಲೆ. ಜಮೀನ್ದಾರರ ಮನೆಗೆ ದುಡಿತಕ್ಕೆಂದು ಹೋಗುತ್ತಿದ್ದ ಅವ್ವನೊಂದಿಗೆ ಹೋಗಿದ್ದ ನಾಗೇಶ ಅಲ್ಲಿದ್ದ ಮಂಚ ನೋಡಿ ಸೆಳೆತಕ್ಕೆ ಒಳಗಾದ. ಒಡೆಯರು ಇಲ್ಲದ ಸಮಯ ಬಳಸಿ ಒಡೆಯನ ಭಂಗಿಯಲ್ಲಿ ಮಲಗಿಯೇ ಬಿಟ್ಟ. ಇದನ್ನು ನೋಡಿದ ಒಡೆಯರಿಂದ ಒದೆಗಳು... ಅಲ್ಲಿಂದ ಕದಲಿದರೂ ಮಂಚ ಕಣ್ಣಿಂದಮರೆಯಾಗಲಿಲ್ಲ. ಕನಸಿನಲ್ಲಿ ಕಾಡಿತು. ಶಾಲೆ ಪ್ರಬಂಧದಲ್ಲಿ ಮೂಡಿತು. ಚುರುಕಿನ ವಿದ್ಯಾರ್ಥಿಯಾಗಿದ್ದರೂ ಬಡತನ, ಅಕ್ಕನ ಮದುವೆ ಒತ್ತಡಗಳಿಂದ ಶಾಲೆ ಬಿಡಬೇಕಾಯಿತು. ಆದರೂ ಹುಡ್ಗನ್ನ ಶಾಲೆಗೆ ಕಳಿಸೋದಾದರೆ ಕಳ್ಸು ಎಂದರು ಮಾಸ್ತರರು ಅವ್ವನಿಗೆ (ಮುಂದೆ ಓದಿ)

ನಾನು ದನ ಕಾಯಲು ಶುರು ಮಾಡಿದೆ. ಕೇರಿಯ ಆರು ಮನೆಯ ಗಂಟ್ಕರುಗಳನ್ನು ಬೋಳೆಗೆ ಹೊಡೆದುಕೊಂಡು ಹೋಗುತ್ತಿದ್ದೆ. ಅಲ್ಲಿ ಗಂಟೆ ಬೆಟ್ಟದ ಕಡೆಗೆ ಹೋಗದ ಹಾಗೆ ನೋಡಿಕೊಂಡರಾಯಿತು. ಯಾಕೆಂದರೆ ಆಗ ಈಗಿನ ಹಾಗಲ್ಲ. ಬೆಟ್ಟ ದಟ್ಟವಾಗಿತ್ತು. ಬೆಟ್ಟದಲ್ಲಿ ಕುಂಟಸಿಂಗ್ಯಾ, ಹುಲಿ ಗುರ್ಕ, ಹೆಬ್ಬುಲಿಯೂ ಇರುತ್ತಿತ್ತು. ಮುಂಜಾನೆ ರಾಗಿ ಗಂಜಿ ಸುರಿದು ಹೋದರೆ, ಸಂಜೆ ಐದರ ಹೊತ್ತಿಗೆ ಹಿಂದಿರುಗುವುದಾಗುತ್ತಿತ್ತು. ನನ್ನ ಹಾಗೆ ಇನ್ನಿಬ್ಬರು, ಗೋಯ್ದು, ಮತ್ತು ಈರ ಬರುತ್ತಿದ್ದರು. ಹುಲೇಸರನ ಬೋಳೆಯಲ್ಲಿ ಒಂದಾಗುತ್ತಿದ್ದೆವು. ಕೆಲವೊಮ್ಮೆ ಕೆರೆಮೂಲೆ ಬೋಳೆಗೂ ಹೋಗುತ್ತಿದ್ದೆವು. ವೇಳೆ ಕಳೆಯುವುದೇನು ಕಷ್ಟವಾಗುತ್ತಿರಲಿಲ್ಲ.

ಕತೆ, ಒಗಟು, ಪದ ಹೇಳುವುದರಲ್ಲಿ, ಆಟ ಕುಣಿಯುವುದರಲ್ಲಿ ವೇಳೆ ಹೋಗುತ್ತಿತ್ತು. ಕೆಲವು ಸಲ, ಸಣ್ಣ ಸಣ್ಣ ಕರುವನ್ನು ಪಳಗಿಸಿ, ಅದರ ಮೇಲೆ ಸವಾರಿ ಮಾಡುತ್ತಿದ್ದೆವು. ಒಮ್ಮೆ ಗೋಯ್ದು ಬಂದಿರಲಿಲ್ಲ. ಗೋಯ್ದು ಬಂದರೆ ನಮಗೆ ಸ್ವಲ್ಪ ಜವಾಬ್ದಾರಿ ಕಡಿಮೆ. ದನದ ಗೋಲೆ ಎಲ್ಲೂ ಹೋಗದ ಹಾಗೆ ಹೆಚ್ಚು ಕಾಳಜಿ ವಹಿಸುತ್ತಿದ್ದ. ಆ ದಿನ ಆತ ಬಂದಿರಲಿಲ್ಲ. ನಾನು ಈರ ಇಬ್ಬರೇ. ನಾನು ಈರನಿಗೆ ಮಂಚದ ಮೇಲೆ ಹೇಗೆ ಮಲಗುವುದೆಂದು ಕಲಿಸುತ್ತೇನೆಂದೆ. ಅದಕ್ಕೂ ಮೊದಲು ಮಂಚ ತಯಾರಿಸಬೇಕು. ಅದಕ್ಕೆ ನಾಲ್ಕಾರು ಗುಟ್ಟಗಳನ್ನು ಕಡಿದೆವು. ನಂಪಾಗಿ ಸವರಿದೆವು. ಅವುಗಳ ಬುಡವನ್ನು ಚೂಪಾಗಿ ಮಾಡಿ, ಕುಳಿ ತೋಡಿ ಹುಗಿದೆವು. ಅದು ಚೌತಿಯ ಸಂದರ್ಭ, ಮಳೆ ಆಗಾಗ ಬೀಳುತ್ತಿತ್ತು. ನೆಲ ಮಿದುವಾಗಿರುತ್ತಿತ್ತು. ನಂತರ ಅದರ ಚೌಕಕ್ಕೆ ಕಟ್ಟಲು, ಗಟ್ಟಿಯಾದ ಮುಷ್ಟಿಗಡು ತರದ ಗಿಡದ ಎಳೆಯನ್ನು ಕಡಿದೆವು. ಕೂಗಲ ಬಳ್ಳಿಯನ್ನು ಹುಗಿದೆವು. ಮಂಚದ ಮಧ್ಯ ಕಿರಿಕಿರಿದಾಗಿ ಗಳು ಕಟ್ಟಿದೆವು. ಕುಸುಮಾಲೆ, ಕುಕ್ಕರಸದ ಹೂವುಗಳನ್ನು ತಂದು ಸುತ್ತಲೂ ಕಟ್ಟಿದೆವು. ಮಧ್ಯದಲ್ಲಿ ಕಂಬಳಿ ಹಾಸಿಕೊಂಡು ಮಲಗಿದೆವು. ಆಹಾ! ಎಂಥ ಮಂಚ! ಮಂಚದ ಮೇಲೆ ಮಲಗಿ ನಾನು ಕನಸಿನಲ್ಲಿದ್ದೆ. ಈರನೂ.

ನನ್ನ ಸುತ್ತ ಬೆಟ್ಟವಿರಲಿಲ್ಲ. ಅದೊಂದು ಮನೆ, ಭವ್ಯವೇನೂ ಅಲ್ಲದ್ದು. ಅವ್ವ ಒಳಗೆ ಇದ್ದಳು. ನನ್ನ ಹತ್ತಿರ ಈರನೂ ಇದ್ದಿರಲಿಲ್ಲ. ನಾನೇ ಮಹಾರಾಜನ ಹಾಗಿದ್ದೆ. ಮಾತನ್ನೇ ಆಡುತ್ತಿರಲಿಲ್ಲ. ಆಕಾಶದಲ್ಲಿ ತುಂಡು ಮೋಡಗಳಿದ್ದವು. ಮನೆಯಲ್ಲೂ ಆಕಾಶ ಹೇಗೆ ಕಾಣಿಸುತ್ತಿತ್ತೊ ತಿಳಿಯದು. ಅದಕ್ಕೆಲ್ಲ ತರ್ಕದ ಸಂಬಂಧವಿಲ್ಲ. ಆಕಾಶದಲ್ಲಿ ಮೋಡ ತೇಲುತ್ತಿತ್ತು. ತೆಳ್ಳಗಿನ ಮೋಡ, ಒಮ್ಮೆ ಕಪ್ಪಾಗಿ, ಒಮ್ಮೆ ಬೆಳ್ಳಗಾಗಿ, ಒಮ್ಮೆ ಮುದ್ದೆಯಾಗಿ, ಒಮ್ಮೆ ಹಳ್ಳವಾಗಿ ತೇಲುತ್ತಿತ್ತು. ನನ್ನ ಮಂಚ ಸಾವಕಾಶ ಮೇಲೆರುತ್ತಿತ್ತು. ಮೋಡದ ಕಡೆ ಏರುತ್ತಿತ್ತು. ಇನ್ನೇನು ಮೋಡವನ್ನು ಸೇರಬೇಕು ಎನ್ನುವ ಹೊತ್ತಿಗೆ, ಗಂಟಿಗಳು ಅಂಬಗರೆಯುತ್ತ ದಿಕ್ಕಾಪಾಲಾಗಿ ಓಡಿದವು. ಈರ, ಅಯ್ಯಯ್ಯೋ ಎಂದು ಎದ್ದು ಓಡಿದ. ನನ್ನ ಕನಸು ಹರಿದು ದೊಪ್ಪನೆ ಬಿದ್ದಿದ್ದೆ. ಈರ, 'ಹುಚೊ ಹುಯ್ಯೋ' ಹುಚೊ ಹುಯ್ಯೋ' ಎಂದು ಕೂಗುತ್ತಿದ್ದ. ದನಗಳು ಚೆಲ್ಲಾಪಿಲ್ಲಿ ಓಡಿದ್ದವು. ಒಂದು ಹುಲಿ ಗುರ್ಕ, ಒಂದು ಕರುವನ್ನು ಕಚ್ಚಿಕೊಂಡೇ ಓಡಿತು.

ದನಗಳೆಲ್ಲ ಅವಾಗೇ ಕೊಟ್ಟಿಗೆಯ ಕಡೆ ಬಾಲ ನೆಗೆದುಕೊಂಡು ಓಡುತ್ತಿದ್ದವು. ನಾವೂ ಹಿಂಬಾಲಿಸಿದೆವು. ಈರನ ಗೋಲೆಯ ದನಕರು ಸುರಕ್ಷಿತವಾಗಿದ್ದವು. ನನ್ನ ಗೋಲೆಯ ಕರುವನ್ನು ಹುಲಿಗುರ್ಕ ಹಿಡಿದಿತ್ತು. ಹೋಗುವಾಗಲೇ ನನ್ನ ಎದಿ ನಡುಗುತ್ತಿತ್ತು. ನನ್ನ ಊಹೆ ಸುಳ್ಳಾಗಿರಲಿಲ್ಲ. ಸಣ್ಣೊಡೆಯರು ಏನಾಯಿತೆಂದರು. 'ಹುಲಿ... ಎಂದೆ ನಾನು. ಎಲ್ಲಾದರೂ ತಪ್ಪಿಸಿಕೊಂಡಿರಬೇಕು, ಹುಡುಕುವ ಎಂದರು. 'ಇಲ್ಲ, ಹುಲಿ ಗುರ್ಕ...' ಎಂದು ಬಾಯಿ ಮುಚ್ಚುವುದರೊಳಗೆ ಸರಗೋಲ ಎಳೆದುಕೊಂಡು, ಬೆನ್ನಿನ ಮೇಲೆರಡು ಬಿಗಿದರು. ಅಲ್ಲೇ ಕುಸಿದುಬಿದ್ದೆ. ಉಳಿದವರು ನೀರು ಹಾಕಿ ನನ್ನನ್ನು ಎಚ್ಚರ ಮಾಡಿದರು. ಮುಂಜಾನೆ ರಾಗಿ ಗಂಜಿ ಸುರಿದು ಹೋದದ್ದು. ಹಸಿವೆ, ಭಯ, ಹೊಡೆತ ಯಾರೋ ಕೈ ಹಿಡಿದು ನಡೆಸಿತಂದು ಮನೆಗೆ ಬಿಟ್ಟು ಹೋದರು. ಆ ರಾತ್ರಿ ಅವ್ವ ಊಟ ಮಾಡಲಿಲ್ಲ. ಕಣ್ಣೀರು ಸುರಿಸುತ್ತಲೇ ನನಗೆ ಉಣ್ಣಿಸಿದಳು. ಬಿಸಿ ನೀರಿನ ಶಾಖ ಮಾಡಿದಳು. ತೀಡುತ್ತಲೇ ಮಲಗಿದಳು.

ಪ್ರಾಯ

ನನಗೆ ಪ್ರಾಯ ಇತರರಿಗಿಂತ ಬೇಗ ಬಂತು. ಯಾಕೆಂದರೆ ಅವ್ವನ ಆರೋಗ್ಯ ಕೂಡ ಕುಸಿಯುತ್ತಿತ್ತು. ಸಣ್ಣಕ್ಕನಿಗೆ ವರ್ಷವಾಗುತ್ತ ಬಂತು. ಮದುವೆಯಾಗಲಿಲ್ಲ. ಬಡವರ ಮಗಳಲ್ಲವೆ? ಬಡವರ ಹೆಣ್ಣುಮಕ್ಕಳಿಗೆ ಅಡ್ಡ ಹೆಸರು ಬರುವುದು ಬೇಗ ಎಂದು ಅವ್ವನ ಚಿಂತೆ. ಈ ಚಿಂತೆ ಹೆಚ್ಚಾದಂತೆ ಅವಳ ಆರೋಗ್ಯ ಕುಸಿಯುತ್ತಿತ್ತು. ಆರೋಗ್ಯ ಕುಸಿದಷ್ಟೂ ಹೆಚ್ಚು ಕೆಲಸ ಮಾಡುತ್ತಿದ್ದಳು. ಹಾಗಾಗಿ ನಾನು ಪ್ರಾಯಕ್ಕೆ ಬೇಗ ಬರದಿದ್ದರೆ ಬೇರೆ ಗತಿಯೇ ಇರಲಿಲ್ಲ.

ನಾನು ಆಗಲೇ ಗೆಯ್ಯಲು ಶುರು ಮಾಡಿದ್ದೆ. ನಮ್ಮದು ಆರು ಜನರದ್ದು ಒಂದು ಮೇಳವಿತ್ತು. ಸಾಮಾನ್ಯವಾಗಿ ನಾವು ಒಟ್ಟಿಗೆ ಕೆಲಸಕ್ಕೆ ಹೋಗುತ್ತಿದ್ದೆವು. ಗೊಬ್ಬರ ಕಂಬಳ, ಅಗತೆ ಕಡಿತ, ಮರದ ಬುಡಮಾಡುವುದು, ಮನೆ ಕಂಬಳವನ್ನೆಲ್ಲ ಗುತ್ತಿಗೆ ಮಾಡುತ್ತಿದ್ದೆವು. ನಮ್ಮ ತಾರುಣ್ಯದಲ್ಲಿ ನಾವು ಮಧ್ಯಾಹ್ನ ಊಟ ಮಾಡದೇ ದುಡಿಯುತ್ತಿದ್ದೆವು. ಕೆಲಸ ಮಾಡಿಸುವವರು ಮಧ್ಯಾಹ್ನ ಹೊತ್ತು ಒಂದು ಚಾ ಕೊಡುತ್ತಿದ್ದರು. ದೋಸೆಯನ್ನ, ಅವಲಕ್ಕಿಯನ್ನ ತುಸು ಹೆಚ್ಚಾಗೇ ಕೊಡುತ್ತಿದ್ದರು.

ಹಾಗೆ ಕೇಳಿದರೆ ನಾನು ಕೆಲಸದಲ್ಲಿ ಸ್ವಲ್ಪ ಎಳಸೇ, ಆದರೆ ಸೋಮಾರಿಯಾಗಿರಲಿಲ್ಲ. ಹಾಗೂ ನಾನು ತಂಡದಲ್ಲೇ ಹೆಚ್ಚು 'ಬುದ್ಧಿವಂತ' ಎಂದು ಹೆಸರಾಗಿದ್ದೆ. ಶಾಲೆ ಬಿಟ್ಟರೂ ನನಗೆ ಶಾಲೆಯ ಗೀಳು ಹೋಗಿದ್ದಿರಲಿಲ್ಲ. ಈ ಮಕ್ಕಳು ಪಾಟೀ ಚೀಲದ ಹೊರೆಯನ್ನು ಬೆನ್ನ ಮೇಲೆ ಹೊತ್ತು ಹೋಗುವಾಗ, ಹರಕು ಪಾಟೀ ಚೀಲ, ಎರಡು ಬಳಕಡ್ಡಿ, ಒಂದು ಬಿಳಿಯದು, ಒಂದು ಕರಿಯದು ಹಾಕಿಕೊಂಡು ಹೋಗುತ್ತಿದ್ದ ನನ್ನ ಶಾಲೆಯ ನೆನಪಾಗುತ್ತಿತ್ತು. ನಮ್ಮ ಮಾಸ್ತರ ನೆನಪಾಗುತ್ತಿರುತ್ತಿತ್ತು. ಸಿಕ್ಕ ಸಿಕ್ಕ ಪುಸ್ತಕ ಓದುತ್ತಿದ್ದೆ. ಅಪರೂಪಕ್ಕೆ ಪತ್ರಿಕೆಯನ್ನು ಓದುತ್ತಿದ್ದೆ. ಅದನ್ನೆಲ್ಲ ನಾನು ಉಪ್ಪು-ಖಾರಾ ಹಚ್ಚಿ ಹೇಳುತ್ತಿದ್ದೆ. ಕೆಲವು ಹಲ್ಕಟ್ ಕತೆಗಳನ್ನು, ಒಗಟುಗಳನ್ನು ಹೇಳಿ ಅವರನ್ನು ನಗಿಸುತ್ತಿದ್ದೆ. ಹೀಗಾಗಿ ನಾನು 'ಜಾಣಮರಿ' ಆಗಿದ್ದೆ. ಹೀಗಾಗಿ ನನ್ನ ಕೆಲಸದ ಕೊರತೆಯನ್ನು ಅವರೆಲ್ಲ ಕ್ಷಮಿಸಿಬಿಡುತ್ತಿದ್ದರು. ನನ್ನ ಮೇಲೆ ಅವರಿಗೆ ಎಷ್ಟು ಭರವಸೆ ಎಂದರೆ ನಮ್ಮ ಚರ್ಚೆ, ನೋಟ-ಗೀಟ, ಮಂತ್ರ-ಗಿಂತ್ರ ಜಾತಿ-ಪಾತಿ ಎಲ್ಲಾ ಸುಳ್ಳು ಎಂಬಲ್ಲಿಯವರೆಗೂ ಹೋಗುತ್ತಿತ್ತು. ಕೊನೆಗದು ಎಲ್ಲಿಯ ಮಟ್ಟಕ್ಕೆ ಹೋಗುತ್ತಿತ್ತೆಂದರೆ, ದೇವರು ಎಂಬುದು ಸುಳ್ಳು ಎಂಬಲ್ಲಿಗೆ. ನನ್ನ ಮಾತು ಕೇಳಿ ಅವರಿಗೆ ಆಶ್ಚರ್ಯವಾಗುತ್ತಿತ್ತು. ಆದರೆ ದೇವರು ಇಲ್ಲವೇ ಇಲ್ಲವೆಂದು ನಿರ್ಣಯ ಪಾಸು ಮಾಡುತ್ತಿರಲಿಲ್ಲ. ಯಾಕೆಂದರೆ ನಾವು ಗೆಯ್ಯುವವರು. ಗಿಡ-ಮರ ಹತ್ತಬೇಕಾಗುತ್ತದೆ. ಬಾವಿ-ಗೀವಿ ಇಳಿಯಬೇಕಾಗುತ್ತದೆ. ಆಗ ನಮಗೆ ದೇವರ ಗತಿಯಲ್ಲದೇ ಬೇರೆ ಯಾರಿದ್ದಾರೆ ರಕ್ಷಿಸಲು ಎಂಬ ಅಳುಕು.

ಅದೇನೇ ಇರಲಿ, ನನ್ನ ಉತ್ಪನ್ನವಂತೂ ಹೆಚ್ಚಾಗುತ್ತಿತ್ತು. ಅವ್ವನ ಸೀಕು ನೋಡಿ, ಕೆಲಸಕ್ಕೆ ಹೋಗಬೇಡವೆಂದರೆ ಅವಳು ಕೇಳುತ್ತಿರಲಿಲ್ಲ.

ಕೆಲಸಗಾರ ಸಂಗಾತಿಗಳ ಮಧ್ಯೆ ನಾನು ವೇಳೆ ಕಳೆಯುತ್ತಲಿದ್ದೆ. ನನ್ನ ಗಳಿಕೆ ನನಗೆ ನೆಮ್ಮದಿ ತಂದಿತ್ತು. ಎಷ್ಟೋ ಸಲ ಸಂಜೆ ಅಥವಾ ರಾತ್ರಿ, ನಾವು ಕೆಲವರು, ಒಂದಲ್ಲಾ ಒಂದು ಮನೆಯಲ್ಲಿ ಇಸ್ಪೀಟು ಆಡುತ್ತಿದ್ದೆವು. ಇಸ್ಪೀಟು ಎಂದರೆ ದುಡ್ಡು ಹಾಕಿ ಅಲ್ಲ, ಹೀಗೇ ಮನೋರಂಜನೆಗೆ.

ಆದರೂ ಮನಸ್ಸು ಯಾಕೋ ಚಡಪಡಿಸುತ್ತಿತ್ತು. ಆದರೆ ಯಾಕೆ ಎಂದೇ ತಿಳಿಯುತ್ತಿರಲಿಲ್ಲ. ಯಾಕೆ ನಾನು ಜೀವ ತೆಗೆದುಕೊಳ್ಳಬಾರದು ಎಂದೂ ವಿಚಾರಿಸಿದ್ದಿದೆ. ಆದರೆ ಆ ವಿಚಾರ ಹೆಚ್ಚು ಕಾಲ ಇರುತ್ತಿರಲಿಲ್ಲ.

ನಮ್ಮೂರಲ್ಲಿ ಕಾರ್ತಿಕ ಮಾಸದಲ್ಲಿ ಭಜನೆ ಆಗುತ್ತಿತ್ತು. ನಾನೇನೂ ಅದಕ್ಕೆ ಹೋಗುತ್ತಿರಲಿಲ್ಲ. ಯಾಕೆಂದರೆ ನನಗೆ ಹಾಡಲು, ಭಜನೆ ಮಾಡಲು ಬರುತ್ತಿರಲಿಲ್ಲ. ಆದರೆ ಊರಿನಲ್ಲಿ ಯುವಕ ಮಂಡಳಿಯವರು ವರ್ಷಕ್ಕೆ ಒಂದಾದರೂ ನಾಟಕ ಮಾಡುತ್ತಿದ್ದರು. ಅದರಲ್ಲಿ ನಾನು ಸೇರಿಕೊಳ್ಳುತ್ತಿದ್ದೆ. ಅದರಲ್ಲಿ ದುಡ್ಡು ಹೆಚ್ಚು ಕೊಟ್ಟವರಿಗೆ ದೊಡ್ಡ ಪಾರ್ಟು ಕೊಡುತ್ತಿದ್ದರು. ನಾನು ಹೆಚ್ಚು ಕಡಿಮೆ ಎಪ್ಪತ್ತು-ಎಂಬತ್ತು ರೂಪಾಯಿಯನ್ನು ಕೊಟ್ಟು, ಸುಮಾರಾಗಿ ದೊಡ್ಡ ಪಾರ್ಟನ್ನು ಮಾಡಿದ್ದಿದೆ. ನನ್ನ ಮಾತು ಚಲೋ ಇತ್ತು, ನನ್ನ ನಟನೆ ಚಲೋ ಇತ್ತು ಎಂದು ಎಷ್ಟೋ ಜನರು ಹೇಳಿದ್ದಿದೆ.ಅವರೆಲ್ಲರೂ ಹೇಳಿದ್ದಕ್ಕಿಂತ, ಶಾಂತಪ್ಪನ ಮಗಳು ಸುಮಿತ್ರ, 'ಎಷ್ಟು ಚಂದಾಗಿತ್ತೋ ನಾಗೇಶ' ಎಂದಾಗ ಒಂದು ಬಗೆಯ ವಿಚಿತ್ರ ಸಂತೋಷ ಉಂಟಾಗಿತ್ತು.

ಮಳೆಗಾಲದಲ್ಲಿ ಯಕ್ಷಗಾನ ಬೈಠಕ್ಕು ಆಗುತ್ತಿತ್ತು. ಹೆಚ್ಚಾಗಿ ಅದು ಆಗುವುದು ಒಡೆಯರ ಮನೆಯಲ್ಲಿ. ಸರಿ ಎಲ್ಲಾದರೇನು? ನಾನು ಹಾಜರ ಇರುತ್ತಿದ್ದೆ. ಅಂಥದ್ದಕ್ಕೆಲ್ಲ ನಮ್ಮಲ್ಲಿ ಶೂದ್ರರು ಹೋಗುವುದು ಕಡಿಮೆ. ನನ್ನ ಗೀಳಿಗಾಗಿ ಇತರರಲ್ಲೂ ಗೌರವ ಇತ್ತು. ನಾನೂ ಒಂದೆರಡು ಪ್ರಸಂಗದಲ್ಲಿ ಸೇವಕನ ಅರ್ಥ ಹೇಳಿದ್ದಿದೆ. ನನ್ನ ಮಾತು ಸೇವಕನ ಮಾತಿನಂತಿರದೆ, ರಾಜ ಪಾರ್ಟಿನ ಮಾತಿನಂತಿರುತ್ತಿತ್ತೆಂದು ಹೇಳಿದವರಿದ್ದಾರೆ. ನಾನೇ ಒಂದು ಪ್ರಸಂಗ ಯಾಕೆ ಮಾಡಿಸಬಾರದು ಎಂದುಕೊಂಡದ್ದೂ ಇದೆ. ಆದರೆ ಅದಕ್ಕೆ ನೂರಾರು ರೂಪಾಯಿಯಾದರೂ ಬೇಕಿತ್ತು. ಹಾಗೆ ಖರ್ಚು ಮಾಡುವುದಕ್ಕೆ ಅನುಕೂಲ ಇದ್ದಿರಲಿಲ್ಲ. ಸಣ್ಣಕ್ಕನ ಮದುವೆ ವಿಚಾರವಿದೆ, ಒಂದು ಮನೆ ಕಟ್ಟಬೇಡವೆ? ಇತ್ಯಾದಿ.

ಮನೆ ಕಟ್ಟಲು ಸ್ವಂತ ಜಾಗವೇನೂ ನನಗೆ ಇದ್ದಿರಲಿಲ್ಲ. ನನ್ನ ಹಾಗೆ ಈರು ಮತ್ತು ಜಟ್ಟಪ್ಪನಿಗೂ ಅದೇ ಸ್ಥಿತಿ. ನಾವು ಮಾತಾಡಿಕೊಂಡು ಒಂದು ಸರಕಾರಿ ಜಾಗ ಅತಿಕ್ರಮಣ ಮಾಡಿದೆವು. ಅಲ್ಲಿ ತಟ್ಟಿಮನೆ ಮಾಡಿದೆವು. ತೆಕಳಿ, ಪೋರೆಸ್ಟರು, ಗಾರ್ಡು ಹಾಜರು. ಹಾಗೆಲ್ಲ ಮಾಡುವುದು ಬೇಕಾಯ್ದೆಶೀರ್ ಆಗುತ್ತದೆ. ಮನೆ ಕೀಳಿಸುತ್ತೇವೆ ಎಂದು ಕಬಕಿ ಹಾಕುತ್ತಿದ್ದರು. ನಾವು ಬಡಬಗ್ಗರು, ಬಡವರ ಹೊಟ್ಟೆಗೆ ಹೊಡೆಯಬೇಡಿ, ಹಾಗೆ ಹೀಗೆ ಹೇಳಿ, ಅದೂ ಇದೂ ಮಾಡಿ ಸುಮ್ಮನುಳಿಸಿದೆವು. ಅವರಿಗೂ ಅರ್ಥವಾಗುತ್ತಿತ್ತು ದೊಡ್ಡ ದೊಡ್ಡವರೇ ಸರಕಾರಿ ಜಾಗ ಆಕ್ರಮಣ ಮಾಡುತ್ತಿದ್ದರು. ಅವರು ಸೀದಾ ಮೇಲಿನವರೊಡನೆ ವ್ಯವಹಾರ ಮಾಡುತ್ತಿದ್ದರು. ಇವರಲ್ಲಿ ಕೆಲವರಿಗಾದರೂ ತಮ್ಮ ಮನೆತನದ ಬಡತನ, ಕಷ್ಟಕೋಟಲೆಯ ನೆನಪು ಮಾಸಿರಲಿಲ್ಲ.

ಮುಂದುವರಿಯುವುದು

PRBDECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2002
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜು
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH